
ಕನ್ನಡ ಸಾಹಿತ್ಯ ಪರಿಷತ್ತು

ಮನುಷ್ಯ ಜಾತಿ ತಾನೊಂದೆ ವಲಂ

ದಲಿತ ಸಾಹಿತ್ಯ ಸಂಪುಟ

# ಕಾವ್ಯ



ಪ್ರಧಾನ ಸಂಪಾದಕರು
**ನಾಡೋಜ ಡಾ. ಮನು ಬಳಿಗಾರ್**

ಸಂಪಾದಕರು
**ಡಾ. ಮೂಡ್ನಾಕೂಡು ಚಿನ್ನಸ್ವಾಮಿ**

# ದಲಿತ ಸಾಹಿತ್ಯ ಸಂಪುಟ

# ಕಾವ್ಯ


ಪ್ರಧಾನ ಸಂಪಾದಕರು

**ನಾಡೋಜ ಡಾ. ಮನು ಬಳಿಗಾರ್**

ಸಂಪಾದಕರು

**ಡಾ. ಮೂಾಕೂಡು ಚಿನ್ನಸ್ವಾಮಿ**



## ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು -೫೬೦ ೦೧೮.

DALITA SAHITYA SAMPUTA KAAVYA - Edited by: Dr. Mudnakudu Chinnaswamy Published by: Nadoja Dr. Manu Baligar, President, Kannada Sahitya Parishattu, Pampa Mahakavi Road, Chamarajapete, Bengaluru - 560018 Pages: xvi +198 Price: Rs.300-00: 2019

ಪ್ರಥಮ ಮುದ್ರಣ : ೨೦೧೯

ಪ್ರತಿಗಳು : ೫೦೦

ಬೆಲೆ : ಮುನ್ನೂರು ರೂಪಾಯಿಗಳು

© ಹಕ್ಕುಗಳನ್ನು ಕಾಯ್ದಿರಿಸಿದೆ.

**ದಲಿತ ಸಾಹಿತ್ಯ ಸಂಪುಟ ರಚನಾ ಸಮಿತಿ**

---

**ನಾಡೋಜ ಡಾ. ಮನು ಬಳಿಗಾರ್, ಅಧ್ಯಕ್ಷರು**

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಸಂಚಾಲಕರು**

**ಡಾ. ಮೂಡಾಕೂಡು ಚಿನ್ನಸ್ವಾಮಿ, ಸದಸ್ಯರು**

**ಡಾ. ಅರ್ಜುನ ಗೊಳಸಂಗಿ, ಸದಸ್ಯರು**

**ಡಾ. ಬಿ.ಟಿ. ಲಲಿತಾ ನಾಯಕ್, ಸದಸ್ಯರು**

**ಪ್ರಕಟಣಾ ಸಮಿತಿ**

**ನಾಡೋಜ ಡಾ. ಮನು ಬಳಿಗಾರ್**

ಅಧ್ಯಕ್ಷಕರು

ಸಮ್ಮೇಳನಾಧ್ಯಕ್ಷರು - ಡಾ.. ಚಂದ್ರಶೇಖರ ಕಂಬಾರ

ಲಳನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಸಂಚಾಲಕರು, ಪ್ರಕಟಣಾ ವಿಭಾಗ - ಡಾ. ಪದ್ಮರಾಜ ದಂಡಾವತಿ

ಸದಸ್ಯರು

ಶ್ರೀ ಜರಗನಹಳ್ಳಿ ಶಿವಶಂಕರ್ ಶ್ರೀ ಎ.ಆರ್. ಉಜ್ಜನಪ್ಪ

ಡಾ. ಮೂಡಾಕೂಡು ಚಿನ್ನಸ್ವಾಮಿ

ಪ್ರೊ ಧರಣೇಂದ್ರ ಕುರಕುರಿ

ಶ್ರೀ ರಂಜಾನ್ ದರ್ಗಾ

ಡಾ. ಬಿ.ಕೆ. ರವಿ

ಡಾ. ತಮಿಳ್ ಸೆಲ್ವಿ

ಡಾ. ದೊಡ್ಡಮಲ್ಲಯ್ಯ

ಡಾ. ಎಚ್.ಎಲ್. ಪುಷ್ಪ

ಶ್ರೀ ಸಂಜಯ ಅಡಿಗ

ಶ್ರೀ ಪಾರಂಪಳ್ಳಿ ನರಸಿಂಹ ಐತಾಳ್

ಗೌರವ ಕಾರ್ಯದರ್ಶಿಗಳು

ಡಾ. ರಾಜಶೇಖರ ಹತಗುಂದಿ

ಶ್ರೀ ವ.ಚ. ಚನ್ನೇಗೌಡ

ಗೌರವ ಕೋಶಾಧ್ಯಕ್ಷರು

ಶ್ರೀ ಪಿ. ಮಲ್ಲಿಕಾರ್ಜುನಪ್ಪ

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮುಖಪುಟ ಕಲಾವಿನ್ಯಾಸ : ಚಂದ್ರಕಾಂತ ಪಟ್ಟಣ

ಮುದ್ರಣ : ಬಿ.ಎಂ.ಶ್ರೀ, ಆಫ್‌ಸೆಟ್ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು

# ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನಾಡು, ನುಡಿ, ನೆಲ, ಜಲ ಹಾಗೂ ಸಾಹಿತ್ಯ-ಸಂಸ್ಕೃತಿಗೆ ಪ್ರೇರಕ ಶಕ್ತಿಯಾಗಿ ದುಡಿಯುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು ೧೯೧೫ನೇ ಇಸವಿ ಮೇ ೫ ರಂದು ಅಂದಿನ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ ಅವರ ದೂರದೃಷ್ಟಿಯ ಫಲವಾಗಿ ಅಸ್ತಿತ್ವಕ್ಕೆ ಬಂದಿತು. ಅಂದಿನ ಮೈಸೂರು ಸಂಸ್ಥಾನದ ದಿವಾನರಾದ ಸರ್ ಎಂ. ವಿಶ್ವೇಶ್ವರಯ್ಯ ಅವರ ಒತ್ತಾಸೆಯೂ ಇಲ್ಲಿ ಜೊತೆಗೂಡಿತ್ತು. ಶತಮಾನ ಪೂರೈಸಿರುವ ಕನ್ನಡ ಸಾಹಿತ್ಯ ಪರಿಷತ್ತು ನನ್ನನ್ನೂ ಸೇರಿ ೨೫ ಅಧ್ಯಕ್ಷರನ್ನು ಕಂಡಿದೆ. ೮೪ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಿ ಕನ್ನಡದ ಕಹಳೆ ಮೊಳಗಿಸಿದೆ. ಇಲ್ಲಿಯವರೆಗೆ ೧೫೦೦ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿ ಕನ್ನಡ ಸಾಹಿತ್ಯ- ಸಂಸ್ಕೃತಿ ಪ್ರಸಾರದಲ್ಲಿ ಮಹತ್ತರ ಸಾಧನೆಗೈದಿದೆ. ೧೦೫ನೇ ವರ್ಷಕ್ಕೆ ಕಾಲಿಟ್ಟ ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು: 'ದಲಿತ ಸಾಹಿತ್ಯ ಸಂಪುಟ'ದ ಯೋಜನೆ ರೂಪಿಸಿ ಕಾರ್ಯಗತ ಗೊಳಿಸುತ್ತಿರುವುದು ಚರಿತ್ರಾರ್ಹ ಸಂಗತಿಯೆಂದೇ ಭಾವಿಸಿದ್ದೇನೆ. 'ದಲಿತ ಸಾಹಿತ್ಯ ಸಂಪುಟ' ರಚನಾ ಸಮಿತಿಯ ಸಂಚಾಲಕರಾಗಿ ಕಾರ್ಯ ನಿರ್ವಹಿಸುತ್ತಿರುವ ಕನ್ನಡದ ಹಿರಿಯ ವಿದ್ವಾಂಸರಾದ ಪ್ರೊ, ಮಲ್ಲೇಪುರಂ ಜಿ. ವೆಂಕಟೇಶ ಅವರು "ಭಾರತೀಯ ಯಾವ ಭಾಷೆಗಳಲ್ಲೂ ಈ ಬಗೆಯ ಸಂಪುಟಗಳು ಪ್ರಕಟಗೊಂಡಿಲ್ಲ" ಎಂದು ಹೇಳಿರುವುದು ಈ ಯೋಜನೆಯ ಐತಿಹಾಸಿಕ ಮಹತ್ವವನ್ನು ಎತ್ತಿ ತೋರಿಸುತ್ತದೆ.

'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಪಂಪನ ಮಾತನ್ನು ತನ್ನ ಘೋಷ ವಾಕ್ಯವಾಗಿ ಸ್ವೀಕರಿಸಿರುವ ಕನ್ನಡ ಸಾಹಿತ್ಯ ಪರಿಷತ್ತು, ನಾಲ್ವಡಿ ಕೃಷ್ಣರಾಜ ಒಡೆಯರ ಅವರ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ನನ್ನ ಅವಧಿಯಲ್ಲಂತೂ ಒಂದು ವ್ರತದಂತೆ ಪಾಲಿಸುತ್ತಾ ಬಂದಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಬಗೆಯ ಚಟುವಟಿಕೆಗಳಲ್ಲಿ ಸಮಸ್ತರನ್ನು ಒಳಗೊಳ್ಳುತ್ತಾ ನಿಜವಾದ ಅರ್ಥದಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯಲಾಗಿದೆ. ಅದರ ಭಾಗವಾಗಿಯೇ 'ದಲಿತ ಸಾಹಿತ್ಯ ಸಂಪುಟ'ದ ಈ ಚರಿತ್ರಾರ್ಹ ಯೋಜನೆ ಕಾರ್ಯಗತಗೊಂಡಿದ್ದು, ಸಮಾರಂಭವೊಂದರಲ್ಲಿ ಕರ್ನಾಟಕ ದಲಿತ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಅರ್ಜುನ ಗೊಳಸಂಗಿಯವರು "ಶತಮಾನ ಪೂರೈಸಿರುವ ಕನ್ನಡ ಸಾಹಿತ್ಯ ಪರಿಷತ್ತು ದಲಿತ ಸಾಹಿತ್ಯ ಸಂಪುಟಗಳನ್ನು

ಹೊರತಂದರೆ ಒಳ್ಳೆಯದು. ಅದು ನಿಮ್ಮ ಅವಧಿಯಲ್ಲೇ ಕಾರ್ಯಗತಗೊಂಡರೆ ಚರಿತ್ರಾರ್ಹ ಸಂಗತಿ ಎನಿಸಿಕೊಳ್ಳುತ್ತದೆ' ಎಂದು ಪ್ರಸ್ತಾವನೆ ಇಟ್ಟರು. ತಕ್ಷಣವೇ ಕಾರ್ಯಪ್ರವೃತ್ತನಾದ ನಾನು ಕಾರ್ಯಕಾರಿ ಸಮಿತಿ ಅನುಮೋದನೆ ಪಡೆದು ಅಗತ್ಯದ ಆರ್ಥಿಕ ಸಂಪನ್ಮೂಲದ ವ್ಯವಸ್ಥೆ ಮಾಡಿಕೊಂಡು 'ದಲಿತ ಸಾಹಿತ್ಯ ಸಂಪುಟ ರಚನಾ ಸಮಿತಿ' ಅಸ್ತಿತ್ವಕ್ಕೆ ಬರುವಂತೆ ನೋಡಿಕೊಂಡೆ. ಅಷ್ಟು ಮಾತ್ರವಲ್ಲ; ಕಾಲಮಿತಿಯಲ್ಲಿ ಈ ಯೋಜನೆ ಅನುಷ್ಠಾನಗೊಳ್ಳುವಂತೆ ಪ್ರಯತ್ನಿಸಿರುವೆ. ದಲಿತ ಸಾಹಿತ್ಯ ಸಂಪುಟ ರಚನಾ ಸಮಿತಿಯ ಸಂಚಾಲಕರಾಗಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ನಿರೀಕ್ಷೆಗೂ ಮೀರಿದ ವೇಗದಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಒಟ್ಟು ಹತ್ತು ಸಂಪುಟಗಳನ್ನು ಹೊರತರಲು ಯೋಜನೆ ರೂಪಿಸಲಾಗಿದೆಯಾದರೂ ಮೊದಲ ಕಂತಿನಲ್ಲಿ ಐದು ಸಂಪುಟಗಳು ನಿಮ್ಮ ಕೈ ಸೇರುತ್ತಿವೆ. ದಲಿತ ಸಾಹಿತ್ಯ ಸಂಪುಟ ರಚನಾ ಸಮಿತಿಯ ಸದಸ್ಯರಾಗಿ ಡಾ. ಮೂಾಕೂಡು ಚೆನ್ನಸ್ವಾಮಿ, ಡಾ. ಅರ್ಜುನ ಗೊಳಸಂಗಿ, ಡಾ. ಬಿ.ಟಿ. ಲಲಿತಾ ನಾಯಕ್ ಅವರು ಕ್ರಿಯಾಶೀಲವಾಗಿ ತೊಡಗಿಸಿಕೊಂಡಿದ್ದಾರೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ 'ದಲಿತ ಸಂವೇದನೆ' ಒಳ ವಿದ್ಯುತ್ತಿನಂತೆ ಪ್ರವಹಿಸುತ್ತಲೇ ಇದೆ. ಮನುಷ್ಯ ಜಾತಿ ತಾನೊಂದೆ ವಲಂ ಎಂಬ ಮಾತು ಪರೋಕ್ಷವಾಗಿ ಜಾತ್ಯತೀತ ಸಮಾಜದ ಕನಸನ್ನೇ ಪ್ರತಿಪಾದಿಸುತ್ತದೆ. ದಲಿತ ಸಂವೇದನೆಯ ಅಭಿವ್ಯಕ್ತಿಗೆ ಮತ್ತು ದಲಿತ ಪರ ಕಾಳಜಿಗೆ ಬಹುದೊಡ್ಡ ವೇದಿಕೆ ದೊರೆತದ್ದು ೧೨ನೇ ಶತಮಾನದ ವಚನ ಚಳವಳಿಯ ಕಾಲದಲ್ಲಿ, ಹಾಗೆ ನೋಡಿದರೆ ವಚನ ಚಳವಳಿಯ ಮುಖ್ಯ ಕಾಳಜಿಯೇ 'ದಲಿತ ಲೋಕ', ಅಸಂಖ್ಯಾತ ದಲಿತ ಶರಣರ ಅಭಿವ್ಯಕ್ತಿಗೆ ಮಾಧ್ಯಮವಾಗಿದ್ದು ಅನುಭವ ಮಂಟಪ, ಬಸವೋತ್ತರ ಯುಗದ ಮಹಾಕವಿ ಹರಿಹರನು, ಮಾದಾರ ಚನ್ನಯ್ಯ ಸೇರಿದಂತೆ ದಲಿತ ಹಾಗೂ ತಳ ಸಮುದಾಯದ ಶಿವಭಕ್ತರ 'ಭಕ್ತಿಯ ಪಾರಮ್ಯವನ್ನೇ', ಕಾವ್ಯವಾಗಿಸಿದ. ಹರಿಹರನ ರಗಳೆಗಳು 'ದಲಿತ ಸಂವೇದನೆ'ಯ ಪ್ರತಿಬಿಂಬದಂತಿವೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ೭೦-೮೦ರ ದಶಕ ದಲಿತ ಸಂವೇದನೆಯ ಪುನರುತ್ಥಾನದ ಯುಗ. ಹಾಗೆ ನೋಡಿದರೆ ಕಳೆದ ಶತಮಾನದ ೭೦-೮೦ರ ದಶಕ ಚಳವಳಿಗಳ ಕಾಲ, ದಲಿತ- ಬಂಡಾಯ ಚಳವಳಿಯ ಪ್ರಭಾವಳಿಯಲ್ಲಿ ಅಂದಿನ ಬಹುಪಾಲು ದಲಿತೇತರ ಸಾಹಿತಿಗಳೂ 'ದಲಿತ ಸಂವೇದನೆಯೊಂದಿಗೆ ಮುಖಾಮುಖಿಯಾಗುವ ಸಂದರ್ಭ ಸೃಷ್ಟಿಯಾಯಿತು. ದೇವನೂರು ಮಹಾದೇವ, ಸಿದ್ಧಲಿಂಗಯ್ಯ ಸೇರಿದಂತೆ ಹಲವರ ಸಾಹಿತ್ಯ ಒಂದು ಪರಂಪರೆಯ ಹುಟ್ಟಿಗೆ ಕಾರಣವಾದದ್ದು ಇತಿಹಾಸ. ದಲಿತ ಸಾಹಿತ್ಯ ಸಂಪುಟಗಳ ಪ್ರಕಟಣೆಯನ್ನು 'ದಲಿತ ಅಸ್ಮಿತೆ'ಯ ಭಾಗವಾಗಿ ನೋಡಬೇಕು. ದಲಿತ ಸಂವೇದನೆ; ಸೃಜನಶೀಲ ಪ್ರಕಾರಗಳಾದ ಕತೆ, ಕಾವ್ಯ, ಕಾದಂಬರಿ, ನಾಟಕಗಳಲ್ಲಿ ಢಾಳಾಗಿ ಎದ್ದು ಕಾಣುತ್ತದೆ. ಸೃಜನೇತರ ಪ್ರಕಾರಗಳಲ್ಲಿ ದಲಿತ ಸಂವೇದನೆಯ ಹೆಜ್ಜೆ ಗುರುತುಗಳನ್ನು ಪತ್ತೆ ಹಚ್ಚಲು ಹಾಗೂ ಒಟ್ಟು ಕನ್ನಡ ಕಟ್ಟುವ ಕಾಯಕದಲ್ಲಿ ದಲಿತ ವಿದ್ವಾಂಸರ ಪಾಲ್ಗೊಳ್ಳುವಿಕೆಯನ್ನು ಈ

ಸಂಪುಟಗಳ ಮೂಲಕ ಗುರುತಿಸಬಹುದಾಗಿದೆ. ದಲಿತ ಅಸ್ಮಿತೆಯ ಚಹರೆಯನ್ನು ಈ ಎಲ್ಲ ಸಂಪುಟಗಳು ಹೆಚ್ಚು ಸ್ಪಷ್ಟಗೊಳಿಸುತ್ತವೆ.

ದಲಿತ ಸಾಹಿತ್ಯ ಸಂಪುಟಗಳನ್ನು ಪ್ರಾತಿನಿಧಿಕವಾಗಿ ರೂಪಿಸಲಾಗಿದೆ. ಹಾಗೂ ಇಲ್ಲಿ ಪ್ರಾದೇಶಿಕ ನ್ಯಾಯ ಮತ್ತು ಲಿಂಗ ಸಮಾನತೆಯನ್ನು ಪಾಲಿಸಲಾಗಿದೆ. ಕತೆ, ಕಾವ್ಯ, ಕಾದಂಬರಿ, ನಾಟಕಗಳಲ್ಲಿ ಅಭಿವ್ಯಕ್ತಿಗೊಂಡ 'ದಲಿತ ಸಂವೇದನೆ'ಯ ವಿಭಿನ್ನ ಆಯಾಮವನ್ನು ಇಲ್ಲಿ ಕಂಡುಕೊಳ್ಳಬಹುದಾಗಿದೆ. ಸೃಜನೇತರ ಪ್ರಕಾರಗಳಲ್ಲಿ ದಲಿತ ಯುಗ ತಡವಾಗಿ ಆರಂಭವಾಗಿದೆಯಾದರೂ ಬೆರಗು ಹುಟ್ಟಿಸುವ ಸಾಧನೆ ಕಾಣಬಹುದಾಗಿದೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿನ ದಲಿತ ಸಂವೇದನೆಯ ಸ್ಥಿತ್ಯಂತರದ ನೆಲೆಗಳನ್ನು ಶೋಧಿಸುವ ಅಧ್ಯಯನಗಳು ಸಾಕಷ್ಟು ನಡೆದಿದ್ದವು. ಆದರೆ ದಲಿತ ಸಾಹಿತ್ಯದ ಪ್ರಾತಿನಿಧಿಕ ಪಠ್ಯಗಳ ಮಾದರಿಗಳನ್ನು ಒಂದೆಡೆ ಸಂಗ್ರಹಿಸಿ ಸಂಪುಟಗಳಲ್ಲಿ ಪ್ರಕಟಿಸುತ್ತಿರುವುದು ಇದೇ ಮೊದಲು, ಇದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತು ಹೆಮ್ಮೆ ಪಡುತ್ತದೆ. ದಲಿತ ಸಾಹಿತ್ಯ ಸಂಪುಟ- ಯೋಜನೆ ಯಶಸ್ವಿಯಾಗಿ ಕಾರ್ಯಗತವಾಗಲು ಶ್ರಮಿಸಿದ ಸಮಿತಿಯ ಸಂಚಾಲಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ ವಿಶೇಷ ಕೃತಜ್ಞತೆ ಸಲ್ಲಿಸುತ್ತೇನೆ. ಸಮಿತಿಯ ಸದಸ್ಯರಾದ ಡಾ. ಮೂಡ್ನಾಕೂಡು ಚಿನ್ನಸ್ವಾಮಿ, ಡಾ. ಅರ್ಜುನ ಗೊಳಸಂಗಿ, ಡಾ. ಬಿ.ಟಿ. ಲಲಿತಾನಾಯಕ್ ಅವರಿಗೂ ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ. ಕಾಲಮಿತಿಯಲ್ಲಿ ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟ ಎಲ್ಲ ಸಂಪಾದಕರಿಗೆ ಕೃತಜ್ಞತೆಗಳು. ದಲಿತ ಸಾಹಿತ್ಯ ಸಂಪುಟ ಯೋಜನೆಯಡಿ ಪ್ರಕಟಗೊಳ್ಳುತ್ತಿರುವ 'ಕಾವ್ಯ ಸಂಪುಟವನ್ನು ಅದರ ಸಂಪಾದಕರಾದ ಡಾ. ಮೂಡ್ನಾಕೂಡು ಚಿನ್ನಸ್ವಾಮಿ ಅವರು ಕಾಲಮಿತಿಯೊಳಗೆ ಅಚ್ಚುಕಟ್ಟಾಗಿ ಸಿದ್ಧಪಡಿಸಿ ಕೊಟ್ಟಿದ್ದಾರೆ. ಅಷ್ಟು ಮಾತ್ರವಲ್ಲ; ಕಾವ್ಯ ಸಂಪುಟದ ಎಲ್ಲ ಕವಿಗಳ ಅನುಮತಿಯನ್ನೂ ಪಡೆದಿರುವುದಾಗಿ ತಿಳಿಸಿದ್ದಾರೆ. ಈ ಸಂಪುಟದ ಸಂಪಾದಕರಿಗೆ ಮತ್ತು ಎಲ್ಲ ಲೇಖಕರಿಗೆ ಕೃತಜ್ಞತೆ ಸಲ್ಲಿಸುತ್ತೇನೆ.

ಈ ಯೋಜನೆಯಡಿಯ ಎಲ್ಲ ಸಂಪುಟಗಳ ರಕ್ಷಾಪುಟ ಕಲಾವಿನ್ಯಾಸ ಮಾಡಿಕೊಟ್ಟ ಶ್ರೀ ಚಂದ್ರಕಾಂತ ಪಟ್ಟಣ ಅವರಿಗೆ, ಸಂಪುಟಗಳನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟಿರುವ ಬಿ.ಎಂ.ಶ್ರೀ ಆಫ್‌ಸೆಟ್ ಅಚ್ಚುಕೂಟದ ಸಿಬ್ಬಂದಿಗೆ ಹಾಗೂ ಪ್ರಕಟಣೆಗೆ ಸಹಕರಿಸಿದ ಪ್ರಕಟಣಾ ಸಮಿತಿಯ ಸದಸ್ಯರಿಗೆ ನನ್ನ ಕೃತಜ್ಞತೆಗಳು.

೦೧-೦೫-೨೦೧೯ ನಾಡೋಜ ಡಾ. ಮನು ಬಳಿಗಾರ್

ಅಧ್ಯಕ್ಷರು

# ಪ್ರಸ್ತಾವನೆ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಪ್ರತಿಷ್ಠಾನ, ಕಲಬುರ್ಗಿ ಇವರು ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದ ಪ್ರಶಸ್ತಿ ಪ್ರದಾನ ಮತ್ತು ಸನ್ಮಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತಾಡುತ್ತಿದ್ದ ದಲಿತ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಅರ್ಜುನ ಗೊಳಸಂಗಿ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ್ ಅವರ ಗಮನ ಸೆಳೆದು ದಲಿತ ಸಾಹಿತ್ಯ ವಿಪುಲವಾಗಿ ಸೃಷ್ಟಿಯಾಗುತ್ತಿದ್ದರೂ ಅದರ ಮೌಲ್ಯಮಾಪನವಾಗಿಲ್ಲ, ಮುಖ್ಯವಾದ ಕೃತಿಗಳಾಗಲೀ, ಲೇಖಕರಾಗಲೀ ಒಂದು ಕಡೆ ಸಿಗುತ್ತಿಲ್ಲ, ಚರ್ಚಿತವಾಗಿಲ್ಲ. ಸಾಹಿತ್ಯ ಪರಿಷತ್ತಿನಂಥ ದೊಡ್ಡ ಸಂಸ್ಥೆಗಳು ಅಂತಹ ಕೆಲಸ ಮಾಡಲು ಮುಂದಾಗಬೇಕು ಎಂದು ಹೇಳಿದರು. ಅದಕ್ಕೆ ತಮ್ಮ ಭಾಷಣದಲ್ಲಿ ಪ್ರತಿಕ್ರಿಯಿಸಿದ ಅಧ್ಯಕ್ಷರು ಆ ಸಲಹೆಯನ್ನು ಒಪ್ಪಿ ಅಲ್ಲಿ ಉಪಸ್ಥಿತರಿದ್ದ ಪ್ರೊ. ಮಲ್ಲೇಪುರಂ ಮತ್ತು ನನ್ನನ್ನು ಸೇರಿಸಿ ಒಂದು ಸಮಿತಿಯನ್ನು ಘೋಷಿಸಿಯೇಬಿಟ್ಟರು. ದಲಿತ ಸಾಹಿತ್ಯದ ಹತ್ತು ಸಂಪುಟಗಳನ್ನು ಸಂಪಾದಿಸಿ ಕೊಡಿ, ಅದಕ್ಕಾಗಿ ಈ ವರ್ಷದ ಆಯವ್ಯಯದಲ್ಲಿ ಹದಿನೈದು ಲಕ್ಷ ರೂಪಾಯಿಗಳನ್ನು ತೆಗೆದಿಡುತ್ತೇನೆ ಎಂದರು. ಹೀಗೆ ದಲಿತ ಸಾಹಿತ್ಯ ಪ್ರಕಟಣಾ ಸಮಿತಿಯು ಅಸ್ತಿತ್ವಕ್ಕೆ ಬಂದಿತು.

ಅಂದುಕೊಂಡಂತೆ ಕಾವ್ಯ ಸಂಪುಟವನ್ನು ಸಂಪಾದಿಸುವ ಜವಾಬ್ದಾರಿ ನನ್ನ ಕೊರಳಿಗೇ ಬಿದ್ದಿತು. ಹಿಂದೆ ೧೯೯೭ ರಲ್ಲಿ ಎಂದು ಕಾಣುತ್ತದೆ. ಶಾಂತರಸರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಮೊಟ್ಟ ಮೊದಲಬಾರಿಗೆ ದಲಿತ ಕಾವ್ಯ ಕಥೆ, ನಾಟಕ ಕುರಿತಂತೆ ಮೂರು ಕಮ್ಮಟಗಳನ್ನು ಆಯೋಜಿಸಿದ್ದರು. ಮೂಡಿಗೆರೆಯಲ್ಲಿ ನಡೆದ ಕಾವ್ಯ ಕಮ್ಮಟವನ್ನು ನಾನು ಮತ್ತು ಡಾ. ಸಿ. ನಾಗಣ್ಣ ನಿರ್ದೇಶಿಸಿದ್ದೆವು. ದಲಿತ ಕಾವ್ಯ ಮತ್ತು ಕಥಾ ಸಂಪುಟಗಳು ಪ್ರಕಟವಾಗಿದ್ದವು. ನಾನು ಮತ್ತು ಎಲ್. ಹನುಮಂತಯ್ಯ ಕಥಾ ಸಂಪುಟವನ್ನು ಸಂಪಾದಿಸಿಕೊಟ್ಟಿದ್ದೆವು. ಸುಮಾರು ಕಾಲು ಶತಮಾನದ ಅಂತರದಲ್ಲಿ ವಿವಿಧ ಪ್ರಕಾರಗಳಲ್ಲಿ ದಲಿತ ಸಾಹಿತ್ಯವು ಪ್ರಕಟಗೊಳ್ಳುತ್ತಿದೆ. ಈ ಸಂಪುಟವನ್ನು ಈಗ ತರುವುದು ತುರ್ತು ಅಗತ್ಯವಾಗಿತ್ತು ಎಂದು ನಾನು ಭಾವಿಸಿದ್ದೇನೆ. ೨೦೦೦ ಮತ್ತು ೨೦೧೦ ರ ದಶಕಗಳಲ್ಲಿ ಅತಿ ಹೆಚ್ಚು ಕವಿಗಳು, ಸಾಹಿತಿಗಳು ಉದಯಿಸಿದ್ದಾರೆ ಮತ್ತು ಅವರು ಬೇರೆ ರೀತಿಯಲ್ಲಿ ಬರೆಯುತ್ತಿದ್ದಾರೆ. ಇದೊಂದು ಆಶಾದಾಯಕ ಬೆಳವಣಿಗೆ ಅವರ ಕಾವ್ಯವನ್ನು ಒಟ್ಟಾಗಿ ನೋಡುವ ಪ್ರಯತ್ನವೇ ಈ ಸಂಪುಟದ ಉದ್ದೇಶ.

ಭಾರತಕ್ಕೆ ಸ್ವಾತಂತ್ರ್ಯ ಬಂದ ಎರಡೂವರೆ - ಮೂರು ದಶಕಗಳ ನಂತರ ಅಕ್ಷರ ಕಲಿತ ಮೊದಲ ತಲೆಮಾರಿನ ದಲಿತ ಬರಹಗಾರರು ಹುಟ್ಟಿಕೊಂಡರು. ಅಸಮಾನತೆಯ ವಿರುದ್ಧ, ಹಸಿವಿನ ವಿರುದ್ಧ ಮಹಾರಾಷ್ಟ್ರ ರಾಜ್ಯದಲ್ಲಿ 'ದಲಿತ್ ಪ್ಯಾಂಥರ್' ಎಂಬ ಸಂಘಟನೆಯ ಮೂಲಕ ಚಳವಳಿ ಹುಟ್ಟು ಪಡೆಯಿತು. ಅದು ಕರ್ನಾಟಕದಲ್ಲೂ ಪ್ರತಿಧ್ವನಿಸಿ ಚಳವಳಿ ಮತ್ತು ಸಾಹಿತ್ಯ ಒಟ್ಟಿಗೇ ಬೆಳೆದವು. ಆಗ ನವ್ಯರ ಅಬ್ಬರ ಕ್ಷೀಣಿಸುತ್ತಿತ್ತು. ದಲಿತರ, ವಂಚಿತರ ಗಟ್ಟಿ ಧ್ವನಿಯನ್ನು ಎಲ್ಲರೂ ಕೇಳಿಸಿಕೊಳ್ಳಲೇಬೇಕಾಗಿತ್ತು. ಮೊದಮೊದಲಿಗೆ ಕಾವ್ಯ, ಸಾಹಿತ್ಯ ಪ್ರತಿಭಟನಾತ್ಮಕವಾಗಿ ಅಭಿವ್ಯಕ್ತಗೊಂಡಿತು. ಅದು ಸಹಜವಾಗಿತ್ತು. ದಲಿತರಿಂದ ಪ್ರಾರಂಭವಾದ ಈ ಮಾದರಿ ಸಾಹಿತ್ಯ ವಿಸ್ತಾರಗೊಳ್ಳುತ್ತಾ ಹಿಂದುಳಿದ ಕೆಳಜಾತಿ ಅಕ್ಷರಸ್ಥರನ್ನು ಒಳಗೊಂಡು ಬಂಡಾಯ ಸಾಹಿತ್ಯವೆಂದು ಕರೆಸಿಕೊಂಡಿತು. ಕಾಲ ಕಳೆದ ಹಾಗೆ ಅದು ದಲಿತ – ಬಂಡಾಯ ಸಾಹಿತ್ಯ ಪ್ರಕಾರವಾಗಿ ಗುರುತಿಸಿಕೊಂಡು ಬೃಹತ್ತಾಗಿ ಬೆಳೆದು ನಿಂತಿತು.

ನವೋದಯ ಮತ್ತು ನವ್ಯ ಸಾಹಿತ್ಯ ಮೇಲ್ಜಾತಿಯ ಮತ್ತು ಮೇಲ್ವರ್ಗದ ಸೃಷ್ಟಿ ಎಂದು ಬೇರೆ ಹೇಳಬೇಕಾಗಿಲ್ಲ. ನಡುವೆ ಸುಳಿದುಹೋದ ಪ್ರಗತಿಶೀಲ ಸಾಹಿತ್ಯವೂ ಕೂಡ ಆ ವರ್ಗದ ಪ್ರಗತಿಪರರಿಂದಲೇ ಸೃಷ್ಟಿಯಾಯಿತು. ಕಾರಣ, ಬಹುಸಂಖ್ಯಾತ ಶೂದ್ರಾತಿಶೂದ್ರರು ಕೂಡ ಅಕ್ಷರದಿಂದ ವಂಚಿತರಾಗಿದ್ದ ಕಾಲ ಅದು. ಅಪವಾದವೆನ್ನುವಂತೆ ಕುವೆಂಪು ಒಬ್ಬರು ವೈದಿಕರ ನಡುವೆ ತಮ್ಮನ್ನು ತಾವು ಪ್ರತಿಷ್ಠಾಪಿಸಿಕೊಳ್ಳಲು ಪಟ್ಟ ಪಡಿಪಾಟಲು ಈಗ ಇತಿಹಾಸವಾಗಿ ಉಳಿದಿದೆ.

ನವೋದಯದಲ್ಲಿ ಆಕಾಶಮುಖಿಯಾಗಿದ್ದ, ನವ್ಯದಲ್ಲಿ ಅಂತರ್ಮುಖಿಯಾಗಿದ್ದ ಸಾಹಿತ್ಯ ದಲಿತ ಸಾಹಿತ್ಯದ ಹುಟ್ಟಿನೊಂದಿಗೆ ಸಮಾಜಮುಖಿಯಾಯಿತು. ಹಸಿವು, ಬಡತನ, ಜಾತಿ, ಅಸ್ಪೃಶ್ಯತೆ, ಅಸಮಾನತೆ, ಭ್ರಷ್ಟಾಚಾರ ಇನ್ನಿತರ ವಂಚನೆಗಳೇ ಮೊದಲಾಗಿ ದನಿ ಪಡೆದವು. ಅವು ವ್ಯವಸ್ಥೆಯ ವಿರುದ್ಧವೇ ಆಗಿದ್ದವು. ಅವೆಲ್ಲಕ್ಕೂ ಅಂಬೇಡ್ಕರ್ ಸಾಹಿತ್ಯವೇ ಬುನಾದಿಯಾಯಿತು. ದಲಿತೇತರರೂ ಕೂಡ ಅಪರೋಕ್ಷವಾಗಿ ಅಂಬೇಡ್ಕರ್ ಆಶಯಗಳನ್ನೇ ಅಭಿವ್ಯಕ್ತಿಸುತ್ತಿದ್ದರು. ಅಂಬೇಡ್ಕರರ ಒಟ್ಟು ಚಿಂತನೆಯ ಫಲವೇ ಸಂವಿಧಾನ ಎಂದರೆ ತಪ್ಪಾಗುವುದಿಲ್ಲ. ಆರೋಗ್ಯಕರ ಸಮಾಜಕ್ಕೆ ಬೇಕಾಗಿರುವ ಮೂಲಭೂತ ಅವಶ್ಯಕತೆಗಳಾದ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಮತ್ತು ಸಾಮಾಜಿಕ ನ್ಯಾಯ ಅಲ್ಲಿ ಹರಳುಗಟ್ಟಿ ನೆಲೆಗೊಂಡವು. ಬೌದ್ಧೋತ್ತರ ಭಾರತದಲ್ಲಿ ಸ್ವಸ್ಥ ಸಮಾಜದ ನಾಲ್ಕು ಆಧಾರ ಸ್ತಂಭಗಳೆನಿಸಿದ ಇವು ಬ್ರಿಟಿಷರ ಅಧೀನದಲ್ಲಿದ್ದ ಸಂಸ್ಥಾನಗಳಲ್ಲಿ ಲುಪ್ತವಾಗಿದ್ದವು. ಸ್ವತಂತ್ರ ಭಾರತದಲ್ಲಿ ಅವುಗಳನ್ನು ಪುನರ್‌ಪ್ರತಿಷ್ಠಾಪಿಸುವುದೇ ಬಾಬಾಸಾಹೇಬ್ ಅಂಬೇಡ್ಕರರ ಹೋರಾಟ ಮತ್ತು ಚಿಂತನೆಗಳ ಏಕಮೇವ ಉದ್ದೇಶವಾಗಿತ್ತು. ಭಾರತೀಯ ದಲಿತ ಸಾಹಿತ್ಯದ ಒಟ್ಟು ಆಶಯ ಇದರ ಪ್ರತಿಫಲನವೇ ಎಂದು ನಾನು ತಿಳಿದಿದ್ದೇನೆ.

ದಲಿತ ಹಿಂದುಳಿದ ವರ್ಗಗಳಲ್ಲಿ ವಿದ್ಯಾವಂತರು ಹೆಚ್ಚಿದಂತೆಲ್ಲಾ ಸಾಹಿತ್ಯವೂ

ವಿಪುಲವಾಗಿ ಬೆಳೆಯಿತು. ಸಾಹಿತ್ಯದಿಂದ ಕ್ರಾಂತಿ ಸಾಧ್ಯವಾಗದಿರಬಹುದು. ಕ್ರಾಂತಿಗೆ ಅದು ಪೂರಕವಾಗಿ ಕೆಲಸಮಾಡಿದೆ ಎಂಬುದನ್ನು ಜಗತ್ತಿನ ಇತಿಹಾಸ ಸಾರಿ ಹೇಳುತ್ತದೆ. ಸಾಹಿತ್ಯದಿಂದ ಕನಿಷ್ಠ ಬದಲಾವಣೆ ಸಾಧ್ಯವಿದೆ ಎಂಬುದನ್ನು ಲಂಕೇಶ್, ಅನಂತಮೂರ್ತಿ, ತೇಜಸ್ವಿ, ಮಹಾದೇವ ಅಂತಹವರು ತೋರಿಸಿಕೊಟ್ಟಿದ್ದಾರೆ. ಒಂದು ಸಮಾಜ ಆಮೂಲಾಗ್ರವಾಗಿ ಸಾಹಿತ್ಯಕ್ಕೆ ತೆರೆದುಕೊಳ್ಳುವುದಿಲ್ಲ. ಅದು ಆಸಕ್ತರ ಮೂಲಕ ಎಲ್ಲರನ್ನೂ ಆವರಿಸಿಕೊಳ್ಳುವ ಪ್ರಕ್ರಿಯೆ. ಆದ್ದರಿಂದ ಪರಿಣಾಮಕ್ಕೆ ಸಮಯ ಹಿಡಿಯುತ್ತದೆ. ನಮ್ಮನ್ನು ಯಾರೋ ಗಮನಿಸುತ್ತಿದ್ದಾರೆ ಎಂದು ತಿಳಿದರೆ ಆಳುವ ವರ್ಗ ಎಚ್ಚೆತ್ತುಕೊಳ್ಳುತ್ತದೆ. ಸಾಹಿತ್ಯ ಸಮಾಜಮುಖಿಯಾಗಿದ್ದರೆ ಅದು ಇನ್ನೂ ಹೆಚ್ಚು ಪರಿಣಾಮ ಬೀರುತ್ತದೆ. ದಲಿತ ಬಂಡಾಯದ ಕವಿಗಳು, ಲೇಖಕರು ಜನರ ನೋವಿಗೆ ಮಿಡಿವ ಪ್ರಾಣಮಿತ್ರರಾಗಿ ಆ ಕೆಲಸವನ್ನು ಮಾಡುತ್ತಲೇ ಬಂದಿದ್ದಾರೆ.

ಎಪ್ಪತ್ತರ ದಶಕದ ಉತ್ತರಾರ್ಧದಲ್ಲಿ ದಲಿತ ಚಳವಳಿ ಮತ್ತು ಸಾಹಿತ್ಯ ಹುಟ್ಟಿಕೊಂಡವು ಎಂದು ಹೇಳಿದೆ. ಚಳವಳಿಗೆ ಸಿಟ್ಟು ಅಗತ್ಯವಾಗಿತ್ತು. ಅದನ್ನು ಸಮರ್ಪಕವಾಗಿ ಪೂರೈಸಿದವರು ಬಿಸಿರಕ್ತದ ತರುಣರಾಗಿದ್ದ, ಚಳವಳಿಯ ಮುಂಚೂಣಿಯಲ್ಲಿದ್ದ ಸಿದ್ದಲಿಂಗಯ್ಯ, "ಇಕ್ರಲಾ, ವದಿಲ್ಲಾ ಆ ನನ್ನ ಚರ್ಮ ಎಬ್ರಲಾ.. ಎಂದು ಬರೆಯುವ ಮೂಲಕ ಸಾಹಿತ್ಯಲೋಕವನ್ನು ಬೆಚ್ಚಿ ಬೀಳಿಸಿದರು. ಕಾವ್ಯದ ಒಂದು ಹೊಸ ಪ್ರಕಾರಕ್ಕೆ ಪ್ರವರ್ತಕರಾದರು. ಆ ನಂತರ ಉತ್ತಮ ಕಾವ್ಯಗುಣವುಳ್ಳ ಅನೇಕ ರಚನೆಗಳನ್ನು ಅವರು ನೀಡಿದ್ದಾರೆ. ಆ ತಲೆಮಾರಿನ ಕವಿಗಳಲ್ಲಿ ಅವರ ದನಿ ಅನುರಣಿತವಾದದ್ದು ಆಶ್ಚರ್ಯವೇನಲ್ಲ.

ಈ ಸಂಕಲನ ಸ್ವಾತಂತ್ರ್ಯೋತ್ತರ ಕಾಲದ ದಮನಿತರ ಕಾವ್ಯಧ್ವನಿಗಳನ್ನು ಬಿತ್ತರಿಸುವ ಸಂಕಲ್ಪ ಹೊಂದಿದೆ. ಭಾರತೀಯ ಸಂಸ್ಕೃತಿಯ ನಾಡಿಮಿಡಿತವಾದ ಜಾತಿಧರ್ಮವು ಹುಟ್ಟುಹಾಕಿದ ಊಳಿಗಮಾನ್ಯ ವ್ಯವಸ್ಥೆಯಿಂದ ಬಿಡಿಸಿಕೊಂಡು ಮೇಲೇಳುವ ಪ್ರಯತ್ನ ಒಂದು ಕಡೆಗೆ ವ್ಯಕ್ತಗೊಂಡರೆ ಅದರ ಅಂತಃಶತ್ರುಗಳಾದ ಮೇಲುಕೀಳಿನ ಅಸಮಾನತೆ ಮತ್ತು ಅಸ್ಪೃಶ್ಯತೆಗಳನ್ನು ಮೀರುವ ಪ್ರಯತ್ನವೂ ಅನೂಚಾನವಾಗಿ ವ್ಯಕ್ತಗೊಳ್ಳುತ್ತಾ ಬಂದಿದೆ. ಆದ್ದರಿಂದ ಆಗತಾನೆ ಅಕ್ಷರ ಕಲಿತು ಅಜ್ಞಾನದಿಂದ ಕೊಡವಿಕೊಂಡು ಮೇಲೆದ್ದ ಯುವ ಮನಸ್ಸುಗಳಲ್ಲಿ ಸಹಜವಾಗಿ ಸಿಟ್ಟು, ಸೆಡವು, ನಿಂದನೆ ಅಲ್ಲಲ್ಲಿ ನುಸುಳಿವೆ. ಭಾಷೆಯೂ ಸಂಸ್ಕೃತಿಯ ಒಳಗಿನಿಂದಲೇ ರೂಪು ಪಡೆಯುವುದರಿಂದ ಇದು ಅನಿವಾರ್ಯವೆ. ಆದ್ದರಿಂದ ಕಳೆದ ನಾಲ್ಕು ದಶಕಗಳಲ್ಲಿ ಉಂಟಾಗಿರುವ ಸಂಸ್ಕೃತಿಯ ಪಲ್ಲಟಗಳನ್ನು ವಿಶೇಷವಾಗಿ ದಲಿತ ಕಾವ್ಯಧಾರೆಯಲ್ಲಿ ನಾವು ಕಾಣಬಹುದಾಗಿದೆ.

ಭಾರತೀಯ ದಲಿತ ಸಾಹಿತ್ಯಕ್ಕೆ ಅಂಬೇಡ್ಕರ್ ಸಾಹಿತ್ಯವು ಬುನಾದಿಯಾದರೆ ಕನ್ನಡದ ಮಟ್ಟಿಗೆ ವಚನ ಸಾಹಿತ್ಯವು ಪ್ರೇರಣೆಯನ್ನು ಒದಗಿಸಿದೆ. ಸಂಸ್ಕೃತಿಯನ್ನು ಹೊಸದಾಗಿ ಕಟ್ಟುವಲ್ಲಿ ಸಕಲೆಂಟು ಜಾತಿಗಳು ಪಾಲುದಾರರಾದದ್ದು ಹನ್ನೆರಡನೆಯ ಶತಮಾನದ ಬಸವಯುಗದಲ್ಲಿ, ಅಲ್ಲಿ ಭಾಷಾಸಂಪತ್ತು ಬೆಳೆದಂತೆಯೆ ದಲಿತ ವಾಙ್ಮಯದಲ್ಲಿಯೂ ಭಾಷಾಸಂಪತ್ತು ಬೆಳೆದಿದೆ. ಮೌಖಿಕವಾಗಿಯೇ ಉಳಿದಿದ್ದ ಹಲವು

ಜಾನಪದೀಯ ಸೆಲೆಗಳು ದಲಿತ ಕಾವ್ಯವನ್ನು ಶ್ರೀಮಂತಗೊಳಿಸಿವೆ. ಚಾಮರಾಜನಗರದ ತಾಕಿನ ಕವಿಗಳಲ್ಲಿ ಮಂಟೇಸ್ವಾಮಿ ಕಾವ್ಯದ ಪ್ರಭಾವವು ನಿಚ್ಚಳವಾಗಿ ಕಂಡರೆ ಉತ್ತರ ಕರ್ನಾಟಕದ ಕವಿಗಳು ತತ್ವಪದಕಾರರ, ಸೂಫೀ ಕವಿಗಳ ಪ್ರಭಾವದಿಂದ ಬಿಡಿಸಿಕೊಳ್ಳಲಾಗಿಲ್ಲ ಎಂಬುದನ್ನು ಇಲ್ಲಿ ಗಮನಿಸಬಹುದು.

ಜನಮುಖಿಯಾದ ದಲಿತ ಕಾವ್ಯ ಅನುಭವನಿಷ್ಠವಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಅವರ ಅನುಭವ ಲೋಕವೇ ಬೇರೆ ರೀತಿಯದು. ಅದು ಅದುವರೆವಿಗೂ ಹೇಳಿಕೊಳ್ಳಲಾರದೆ ಮಾತಿನ ಹಸಿವಿನಿಂದ ಬಳಲುತ್ತಿದ್ದವರ ಕಥನ. ಅದು ಅರಿವಿನ ವಿಸ್ತಾರ ಪಡೆದಂತೆಲ್ಲಾ ತನ್ನ ಮಗ್ಗಲು ಬದಲಿಸುತ್ತಾ ಸಾಗಿದೆ. ಈ ಸಂದರ್ಭದಲ್ಲಿ ಜಿ. ಎಚ್. ನಾಯಕರ ಈ ಮಾತು ಉಲ್ಲೇಖನೀಯ. “ಕವಿ ತನ್ನ ಮೂಲಧಾತುಗಳಾದ ಚಿಂತನ ಮತ್ತು ಭಾವ ಇವುಗಳಲ್ಲಿ ಚಿಂತನ ಪಕ್ಷಪಾತಿಯ ನಿಲುವಿನಲ್ಲಿ ತನ್ನ ಸೃಜನಶೀಲ ಚೈತನ್ಯವನ್ನು ತೊಡಗಿಸುತ್ತಾನೆ. ಹಾಗೆಂದ ಮಾತ್ರಕ್ಕೆ ಅವನ ಕಾವ್ಯದಲ್ಲಿ ಭಾವ ದ್ರವ್ಯಕ್ಕೆ ಸ್ಥಾನವಿಲ್ಲವೆಂದಲ್ಲ.......... ಆದ್ದರಿಂದ ಅದು ಚಿಂತನ ಪ್ರಧಾನ ಎಂಬುದಕ್ಕಿಂತ ಚಿಂತನಪರ ಎಂದು ಹೇಳಬಹುದು” . ಈ ಹಿನ್ನೆಲೆಯಲ್ಲಿ ನೋಡಿದರೆ ದಲಿತ ಕಾವ್ಯ ಹೆಚ್ಚು ಚಿಂತನಪರವಾದುದು ಎಂದು ನಿಸ್ಸಂಕೋಚವಾಗಿ ಹೇಳಬಹುದು. ಹಾಗೆಂದರೆ ನವೋದಯ, ನವ್ಯ ಕಾವ್ಯದಲ್ಲಿ ಚಿಂತನಪರ ಕಾವ್ಯ ಇರಲಿಲ್ಲವೆಂದಲ್ಲ. ಆಗಲೂ ಸಮಾಜಮುಖೀ ಕಾವ್ಯವೂ ಇತ್ತು ಆದರೆ ಅದು ಗೌಣವಾಗಿತ್ತು ಅಷ್ಟೆ. ಅದಕ್ಕೆ ಪಂಜೆ ಮಂಗೇಶರಾಯರ 'ಹೊಲೆಯನ ಹಾಡು' ಕುವೆಂಪು ಅವರ 'ಕರಿಸಿದ್ದ' ಕೆಲವು ಉದಾಹರಣೆಗಳು.

ದಲಿತ ಬಂಡಾಯ ಸಾಹಿತ್ಯವು ನಾಲ್ಕು ದಶಕಗಳಿಂದಲೂ ಪ್ರಧಾನ ಧಾರೆಯಾಗಿಯೆ ಚಾಲ್ತಿಯಲ್ಲಿದೆ. ಇದೊಂದು ಅಚ್ಚರಿಯ ಬೆಳವಣಿಗೆ, ಮೇಲ್ವರ್ಗದ ಸಾಹಿತ್ಯವೂ ಈಗ ಸಮಾಜಮುಖಿಯಾಗಿದೆ. ಕುತೂಹಲವೇನೆಂದರೆ ಪ್ರತಿ ದಶಕಕ್ಕೊಮ್ಮೆ ತನ್ನ ಪಾತ್ರವನ್ನು ಬದಲಿಸಿಕೊಂಡು ನದಿಯಂತೆ ಹರಿಯುತ್ತಿದೆ. ಇಂದು ಬರೆಯುತ್ತಿರುವ ದಲಿತ ಕವಿಗಳಲ್ಲಿ ಸಿದ್ದಲಿಂಗಯ್ಯನವರ ಛಾಯೆ ಕಾಣಿಸುವುದಿಲ್ಲ. ಮುಳ್ಳೂರು ನಾಗರಾಜು 'ನೆಲದ ಜೋಗುಳ' ಎಂಬ ಮಹಾಕಾವ್ಯವನ್ನು ಬರೆದರು. ಆ ನಂತರ ಯಾರೂ ಪ್ರಯತ್ನಿಸಿದಂತೆ ಕಾಣಲಿಲ್ಲ. ಕೆ. ಬಿ. ಸಿದ್ದಯ್ಯ ಖಂಡಕಾವ್ಯಗಳನ್ನು ನೀಡಿದ್ದಾರೆ. ಜಯದೇವಿ ಗಾಯಕವಾಡ್ ಗಜಲ್‌ಗಳನ್ನು, ಸಿ. ರವೀಂದ್ರನಾಥ್ ಮುಂತಾದವರು ಚುಟುಕುಗಳನ್ನು ಪ್ರಯತ್ನಿಸಿದ್ದಾರೆ. ಹೀಗೆ ವೈವಿಧ್ಯಮಯವಾದ ಕಾವ್ಯ ರಚನೆಗಳು ದಲಿತ ಕಾವ್ಯದ ಒಡಲಲ್ಲಿವೆ. ನಾನು ಇಲ್ಲಿ ಬೇಕೆಂತಲೇ ವ್ಯಕ್ತಿಗತವಾಗಿ ಕವಿಗಳನ್ನು, ಅವರ ಕವಿತೆಗಳನ್ನು ಚರ್ಚಿಸಲು ಹೋಗುತ್ತಿಲ್ಲ. ಕವಿತೆಯ ಆಯ್ಕೆಯೆ ಆ ಕೆಲಸವನ್ನು ಮಾಡುತ್ತದೆ ಎಂದು ತಿಳಿದಿದ್ದೇನೆ. ೧೨೦ ಕವಿಗಳಿರುವಲ್ಲಿ ಅದು ಸುಲಭವಲ್ಲ, ಸಾಧುವೂ ಅಲ್ಲ.

ದಲಿತ ಸಾಹಿತ್ಯಕ್ಕೆ ವಿಮರ್ಶೆಯ ಕೊರತೆಯಿದೆ ಎಂದು ನಾನು ಹಲವಾರು ವೇದಿಕೆಗಳಲ್ಲಿ ಹೇಳಿದ್ದಿದೆ. ಆರಂಭಿಕ ಹಂತದಲ್ಲಿ ಮೇಲ್ವರ್ಗದ ವಿಮರ್ಶಕರು ಕೆಲವು ಬೆರಳೆಣಿಕೆಯ ಲೇಖಕರ ಮುಷ್ಠಿಗೆ ಸಿಗುವಷ್ಟು ಸಾಹಿತ್ಯವನ್ನೇ ಮತ್ತೆ ಮತ್ತೆ ಓಲೈಸುವ

ಪರಿಪಾಠವನ್ನು ಬೆಳೆಸಿಕೊಂಡಿದ್ದರು. ಉಳಿದ ಅನೇಕರು ಹಗುರವಾದ ಟೀಕೆಗೊಳಗಾದದ್ದು ನಿಜ. ದಲಿತ ವಿಮರ್ಶಕರ ಕೊರತೆಯೂ ಅದಕ್ಕೆ ಕಾರಣ. ದೇವಯ್ಯ ಹರವೆ ಮತ್ತು ಡಿ. ಆರ್. ನಾಗರಾಜರ ಅಕಾಲಿಕ ಮರಣ ದಲಿತ ವಿಮರ್ಶೆಗೆ ತುಂಬಲಾರದ ನಷ್ಟ ಎಂದರೆ ಕ್ಲೀಷೆಯಾಗದೇನೊ. ಜಿ. ಆರ್. ತಿಪ್ಪೇಸ್ವಾಮಿ ಮತ್ತು ಎಚ್. ದಂಡಪ್ಪ ದಲಿತ ಸಾಹಿತ್ಯವನ್ನು ಕುರಿತು ಬರೆದಿದ್ದಾರೆ. ಉಳಿದಂತೆ ಇತರೆ ಸೃಜನ ಪ್ರಕಾರಗಳಲ್ಲಿ ಗುರುತಿಸಿಕೊಂಡವರೇ ಹೆಚ್ಚು ವಿಮರ್ಶೆಯಲ್ಲೂ ಕೆಲಸಮಾಡಿದ್ದಾರೆ. ದಲಿತ ಲೇಖಕರು ವಿಮರ್ಶೆಯ ಪ್ರಕಾರಕ್ಕೆ ಯಾಕೆ ವಿಮುಖರಾದರು ಎಂಬುದು ಒಗಟಾಗಿಯೇ ಉಳಿದಿದೆ. ಆದರೂ ಗಟ್ಟಿ ಬರೆಹಗಳು ಅಲ್ಲಲ್ಲಿ ಚೆನ್ನಾಗಿಯೇ ಗುರುತಿಸಲ್ಪಟ್ಟಿವೆ. ಅರವಿಂದ ಮಾಲಗತ್ತಿಯವರ ಕಾವ್ಯ ಇಂಗ್ಲೀಷಿಗೆ, ಮೂಡಾಕೂಡು ಚಿನ್ನಸ್ವಾಮಿ ಕಾವ್ಯ ಸ್ಪ್ಯಾನಿಷ್ ಮತ್ತು ಇಂಗ್ಲೀಷಿಗೆ ಅನುವಾದಗೊಂಡು ಚರ್ಚೆಗೊಳಪಟ್ಟಿವೆ. ವೃತ್ತಪತ್ರಿಕೆಗಳ ಸಾಪ್ತಾಹಿಕಗಳು ಸಾಂಪ್ರದಾಯಿಕ ವಿಮರ್ಶೆಯಿಂದ ದೂರವಾಗಿದ್ದರೂ ಇಂದು ಸಾಮಾಜಿಕ ಮಾಧ್ಯಮಗಳು ಪ್ರಬಲವಾಗಿರುವುದರಿಂದ ಕಾವ್ಯ ಆಸಕ್ತರನ್ನು ತಲುಪುತ್ತಿದೆ ಎಂದು ಹೇಳಬಹುದು. ಇಲ್ಲಿನ ಅನೇಕ ಕವಿಗಳನ್ನು ನಾನು ಜಾಲತಾಣದಲ್ಲಿಯೇ ಗುರುತಿಸಿ ಕವಿತೆಗಳನ್ನು ತರಿಸಿಕೊಂಡಿದ್ದೇನೆ.

-೩-

ಈ ಕಾವ್ಯ ಸಂಪುಟದಲ್ಲಿ ೧೨೦ ಕವಿಗಳ ಅಷ್ಟೇ ಸಂಖ್ಯೆಯ ಕವಿತೆಗಳಿವೆ. ಇವುಗಳನ್ನು ಸಂಕಲಿಸುವುದು ಸುಲಭವಾಗಿರಲಿಲ್ಲ. ಆಶ್ಚರ್ಯವೆಂದರೆ ನನ್ನ ವೈಯಕ್ತಿಕ ಸಂಗ್ರಹಣೆಯಲ್ಲಿಯೇ ಸುಮಾರು ಎಪ್ಪತ್ತಕ್ಕೂ ಹೆಚ್ಚು ದಲಿತ ಕವಿಗಳ ಸಂಕಲನಗಳು ಸಿಕ್ಕಿದವು. ಹೊಸಬರ ಕವಿತೆಗಳನ್ನು ಹೆಚ್ಚಾಗಿ ಅಲ್ಲಿಂದಲೇ ಹೆಕ್ಕಿ ತೆಗೆದಿದ್ದೇನೆ. ಇನ್ನು, ಈಗಾಗಲೇ ಪ್ರಕಟಗೊಂಡಿರುವ ಕರ್ನಾಟಕ ಸಾಹಿತ್ಯ ಅಕಾಡೆಮಿಯ ದಲಿತ ಕಾವ್ಯ, ಬಂಡಾಯ ಕಾವ್ಯ, ಸುವರ್ಣ ಕಾವ್ಯ ಮತ್ತು ಶತಮಾನದ ಕಾವ್ಯಗಳು ನನ್ನ ನೆರವಿಗೆ ಬಂದಿವೆ. ಇನ್ನೂ ಉಳಿದ ಕವಿಗಳು ಬಿಟ್ಟುಹೋಗಬಾರದೆಂದು ಸ್ನೇಹಿತರ ಸಹಾಯವನ್ನೂ ಪಡೆದಿದ್ದೇನೆ. ಹೈದರಾಬಾದ್ ಕರ್ನಾಟಕ ಭಾಗದಿಂದ ಡಾ. ಜಯದೇವಿ ಗಾಯಕವಾಡ, ಮುಂಬೈ ಕರ್ನಾಟಕದಿಂದ ಡಾ. ಅರ್ಜುನ ಗೊಳಸಂಗಿ, ಹಳೆಯ ಮೈಸೂರು ಭಾಗದಿಂದ ಡಾ. ನಂಜುಂಡಸ್ವಾಮಿ ಹರದನಹಳ್ಳಿ, ಬೆಂಗಳೂರು ವಿಭಾಗದಿಂದ ಕವಿ ಎಚ್. ಲಕ್ಷ್ಮೀನಾರಾಯಣಸ್ವಾಮಿ ಇವರುಗಳು ಕವಿಗಳನ್ನು ಸಂಪರ್ಕಿಸಿ ಕವಿತೆಗಳನ್ನು ಪಡೆದು ಕಳಿಸಿಕೊಟ್ಟಿದ್ದಾರೆ. ಇವರೆಲ್ಲರಿಗೆ ನನ್ನ ಕೃತಜ್ಞತೆಗಳು. ಇಷ್ಟಾದರೂ ಕೆಲವು ಗಟ್ಟಿ ಕವಿಗಳು ಬಿಟ್ಟುಹೋಗಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಅದಕ್ಕಾಗಿ ಮೊದಲಿಗೇ ಕ್ಷಮೆ ಯಾಚಿಸುತ್ತೇನೆ. ಆಯ್ಕೆಯ ಮಾನದಂಡಗಳ ಪ್ರಕಾರ ಕವಿಯು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಅನುಸೂಚಿತ ಜಾತಿ ಮತ್ತು ಪಂಗಡಗಳಲ್ಲಿ ಹುಟ್ಟಿದ್ದು ಒಂದು ಸಂಕಲನವನ್ನು ಪ್ರಕಟಿಸಿರಬೇಕು. ಅಷ್ಟನ್ನು ಜಾಗರೂಕತೆಯಿಂದ ಪರಿಶೀಲಿಸಲಾಗಿದೆ. ಪಟಗಳ ಮಿತಿಯೂ ಸಹ ಆಯ್ಕೆಯನ್ನು ನಿಯಂತ್ರಿಸಿದೆ. ಮತ್ತೂ ಲೋಪಗಳು ಉಳಿದುಕೊಂಡಿದ್ದರೆ ಸಹೃದಯರು

ಮನ್ನಿಸುತ್ತಾರೆಂಬ ನಂಬಿಕೆಯಿದೆ. ಇಲ್ಲಿನ ಕವಿತೆಗಳನ್ನು ಬಳಸಿಕೊಳ್ಳಲು ಅನುಮತಿ ನೀಡಿದ ಎಲ್ಲ ಕವಿಗಳಿಗೆ ನಾನು ಕೃತಜ್ಞನಾಗಿದ್ದೇನೆ.



ನುರಿತ ಆಡಳಿತಗಾರರೆಂದು ಹೆಸರು ಮಾಡಿರುವ ಡಾ. ಮನು ಬಳಿಗಾರ್ ಈ ಮಹತ್ತರ ಯೋಜನೆಯ ಹಿಂದೆ ಬಿದ್ದು ಕಾಲಕಾಲಕ್ಕೆ ಸಭೆಗಳನ್ನು ಕರೆದು ಯೋಜನೆ ಫಲಪ್ರದಗೊಳ್ಳಲು ಶ್ರಮಿಸಿದ್ದಾರೆ. ಪ್ರಧಾನ ಸಂಚಾಲಕರಾಗಿ ವಿಶೇಷ ಆಸಕ್ತಿವಹಿಸಿ ಯೋಜನೆಯನ್ನು ಮುನ್ನಡೆಸಿದ ಪ್ರೊ. ಮಲ್ಲೇಪುರಂ ಅವರಿಗೆ, ನಮ್ಮೊಡನೆ ಸಹಕರಿಸಿದ ಪದ್ಮರಾಜ ದಂಡಾವತಿ, ಪರಿಷತ್ತಿನ ಪದಾಧಿಕಾರಿಗಳಾದ ವ. ಚ. ಚನ್ನೇಗೌಡ, ರಾಜಶೇಖರ ಹತಗುಂದಿ, ಪಿ. ಮಲ್ಲಿಕಾರ್ಜುನಪ್ಪ ಇವರೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕವಿತೆಗಳನ್ನು ಡಿಟಿಪಿ ಮಾಡಿದ ಸೋಮಶೇಖರ ಸೋಲೂರು, ಕರಡು ನೋಡಿದ ಕವಿ ಎಚ್. ಲಕ್ಷ್ಮೀನಾರಾಯಣಸ್ವಾಮಿ ಇವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

'ಇದು, ದುಃಖದ ಕೊನೆಯ ನಿಲ್ದಾಣ' ಎಂದು ಘಾನಾದ ಕಪ್ಪು ಕವಿಯೊಬ್ಬ ಹೇಳುತ್ತಾನೆ. ಶತಶತಮಾನಗಳಿಂದ ನೊಂದು ಬೆಂದ ಜೀವಗಳಿಗೆ ಈ ಕಾವ್ಯ ದುಃಖದ ಕೊನೆಯ ನಿಲ್ದಾಣವಾಗಲಿ ಎಂಬುದೇ ನನ್ನ ಆಶಯ.

೧೯-೦೨-೨೦೧೯ - ಮೂಡ್ನಾಕೂಡು ಚಿನ್ನಸ್ವಾಮಿ

ಬೆಂಗಳೂರು - ೫೬೦ ೦೯೮

**ಪರಿವಿಡಿ**


| | | | |
|---|---|---|---|
| ೧. | ಶತಮಾನದ ನೊಗ | : | ಬಿ. ಕೃಷ್ಣಪ್ಪ |
| 9. | ಕೆಂಪುತೋಟ | : | ಎಲ್.ರಂಗನಾಥ್ ಶಿರಾ |
| ೩. | ನಿಚ್ಚಣಿಕೆ | : | ಕೆ.ಬಿ. ಪವಾರ |
| ೪. | ಭೀಮಾವ ಅಂಬೇಡಕರನಿಗೆ | : | ಚೆನ್ನಣ್ಣ ವಾಲೀಕಾರ |
| ೫. | ಪೆಟ್ರೋಮ್ಯಾಕ್ಸ್ ಹೊತ್ತ ಕೊರವರು | : | ಜಂಬಣ್ಣ ಅಮರಚಿಂತ |
| ೬. | ನೆಲದ ಜೋಗುಳ (ಗರಿ ಒಂಬತ್ತು) | : | ಮುಳ್ಳೂರು ನಾಗರಾಜು |
| ೭. | ನಂ ರೂಪ್ಲಿ ಮತ್ತು ಕಚ್ಚೆ ಹರನಾಯಿ | : | ಬಿ.ಟಿ.ಲಲಿತಾ ನಾಯಕ್ |
| ೮. | ಕಪ್ಪು ಚಿರತೆಯ ಡಂಗುರ | : | ರಾಮದೇವ ರಾಕೆ |
| ೯. | ಕರಿಯ ಪ್ರತಿಮೆ | : | ಬರಗೂರು ರಾಮಚಂದ್ರಪ್ಪ |
| ೧೦. | ಹಸಿವು ಅವಮಾನ | : | ವಿ. ಮುನಿವೆಂಕಟಪ್ಪ |
| ೧೧. | ಸಾಕ್ಷಿ | : | ಸಿ. ಬಸವಲಿಂಗಯ್ಯ |
| ೧೨. | ತರಂಗ | : | ಎಸ್.ಎಂ.ಜನವಾಡಕ |
| ೧೩, | ಯಕ್ಷಪ್ರಶ್ನೆ | : | ಡಿ.ಎಸ್.ವೀರಯ್ಯ ಕಾಡುಕೊತ್ತನಳ್ಳಿ |
| ೧೪. | ಕೂಗು | : | ಬಾನಂದೂರು ಕೆಂಪಯ್ಯ |
| ೧೫. | ಅಧೋ ಜಗತ್ತು | : | ಎ.ಕೆ. ಹಂಪಣ್ಣ |
| ೧೬. | ಸಾವಿರಾರು ನದಿಗಳು | : | ಸಿದ್ದಲಿಂಗಯ್ಯ |
| ೧೭. | ಬರುತಿಹೆವು ನಾವು | : | ಕೆ.ರಾಮಯ್ಯ |
| ೧೮. | ನಾನೊಂದು ಮರವಾಗಿದ್ದರೆ | : | ಮೂಡ್ನಾಕೂಡು ಚಿನ್ನಸ್ವಾಮಿ |
| ೧೯. | ಒಂದು ದಹನದ ಕಥೆ | : | ಕೆ.ಬಿ.ಸಿದ್ದಯ್ಯ |

೧೦. ನನ್ನ ಹಾಡು : ಎಸ್.ಪಿ. ಸುಳ್ಳದ್

೧೧. ವೀರಯೋಧರು : ಶಂಭುಲಿಂಗ ವಾಲದೊಡ್ಡಿ

೧೨. ಕಣಗಿಲೆಗಿಡ : ಎಂ. ವೆಂಕಟಸ್ವಾಮಿ

೧೩. ಸಾಗರಕ್ಕೆ ಸವಾಲು : ಎಸ್.ಶಿವಮಲ್ಲು

೧೪. ವಾಸ್ತವ : ಲಕ್ಷಣ

೧೫. ದಲಿತ ಮಕ್ಕಳ ಹಾಡು : ಅರವಿಂದ ಮಾಲಗತ್ತಿ

೧೬. ಬೇಡತಿಯರು : ಸುಕನ್ಯಾ ಬಿ.

೧೭. ಬಲಿ : ಆಲೂರು ದೊಡ್ಡನಿಂಗಪ್ಪ





೧೮. ಅ ಆ ಮತ್ತು : ಎಚ್.ಗೋವಿಂದಯ್ಯ

೧೯. ಕವಚ : ಎಲ್.ಹನುಮಂತಯ್ಯ

೨೦. ಊರು-ಕೇರಿಯ ವಚನಗಳು : ಎಲ್ಲಪ್ಪ ಕೆಕೆಪುರ

೨೧. ಗೋವು ತಿಂದು ಗೋವಿನಂತಾದವನು : : ಎನ್.ಕೆ.ಹನುಮಂತಯ್ಯ

೨೨. ಮುರಿದ ಕತ್ತಿಯ ಬಂಟನ ಹಾಡು : ತೇಜಸ್ವಿ ಕಟ್ಟಿಮನಿ

೨೩. ಕಲ್ಲಿಗೂ ಗೊತ್ತಿರುವ ಕಥೆ : ಸತ್ಯಾನಂದ ಪಾತ್ರೋಟ

೨೪. ಹೊಸಗಾಳಿ : ಟಿ.ಎಂ.ಭಾಸ್ಕರ್

೨೫. ಯುಗಾದಿ : ಅಪ್ಪಗೆರೆ ತಿಮ್ಮರಾಜು

೨೬. ಚಂಡಾಲರ ಕೂಗು : ಗಂಗಾರಾಂ ಚಂಡಾಲ

೩೭. ಸೂಜಿಗಾತ್ರದ ಕೊಳವೆಯಿಂದ

ಮನುಷ್ಯನೊಬ್ಬನ ಹಾಡು : ಸುಬ್ಬು ಹೊಲೆಯಾರ್

೩೮. ಅವ್ವ : ದು.ಸರಸ್ವತಿ

೩೯. ಅಗ್ರಹಾರದ ಒಂದು ಸಂಜೆ : ಆರ್.ಮೋಹನ್ ನಾಗಮ್ಮನವರ

೪೦. ಗಾಯಗಳ ಹಾಡು : ಟಿ.ಯಲ್ಲಪ್ಪ

೪೧. ಕಪ್ಪು ಮನುಜರು : ಇಂದೂಧರ ಹೊನ್ನಾಪುರ

೪೨. ಉರಿಗದ್ದಿಗೆ ಮೇಲೆ ಬೋಳು ಜಂಗಮನ : ಮಹಾದೇವ ಶಂಕನಪುರ

ತಂಬೂರಿಪದ

೪೩. ಚಟ್ಟೋಡು : ಎಂ.ಎಸ್.ಶೇಖರ್

೪೪. ನಾವು ಏನಾಗಿದ್ದೇವೆ? : ಜೆ.ಪಿ.ದೊಡ್ಡಮನಿ

೪೫. ನೇಣು : ಸೂರ್ಯಕಾಂತ ಸುಜ್ಯಾತ್

೪೬ ಪೇಟೆ ಹನುಮನ ಕನಸು ಹರೀಶ್ ಕಟ್ಟೆ ಬೆಳಗುಲಿ

೪೭ ನನ್ನವರು : ಕೃಷ್ಣ ಜನಮನ

೪೮. ನೆರಳಿಗೂ ಮೈಲಿಗೆ : ಸದಾಶಿವ ದೊಡ್ಡಮನಿ

೪೯, ಕಾಕಾ - ಕಾಂಕ್ಷೆ : ಕೃಷ್ಣಮೂರ್ತಿ ಚಮರಂ

೫೦. ಹೆಜ್ಜೆಗಳು : ಶಾಂತನಾಯ್ಕ ಶಿರಗಾನಹಳ್ಳಿ

೫೧. ಹಾಲು ಚೆಲ್ಲಿದ ಬೆಳ್ಳಂಬೆಳಕ ದಂಡೆ : ವಡ್ಡಗೆರೆ ನಾಗರಾಜಯ್ಯ

೫೨. ನೊಂದವರ ನೋವುಗಳು : ರಾಜಶೇಖರ ಮಾಂಗ್

೫೩. ಮೂರು ಸಾಲು ಮರ (ಹಾಯ್ಕುಗಳು) : ರವೀಂದ್ರನಾಥ್ ಎಸ್

೫೪. ತಮಟೆ ಕೇಳುತ್ತೈತೆ? : ಡಾ.ಎಂ.ನಂಜಯ್ಯ
ಹೊಂಗನೂರು



೫೫. ಸ್ವಾಭಿಮಾನಕ್ಕಿಲ್ಲ ಸೋಲು : ಹನಸೋಗೆ ಸೋಮಶೇಖರ

೫೬ ಕಪ್ಪು ಮೋಡಗಳು : ಹೊಸೂರು ಮುನಿಶಾಮಪ್ಪ

೫೭ ಹೊಸ ಹೊಲಗೇರಿಗಳು : ಅರ್ಜುನ ಗೊಳಸಂಗಿ

೫೮. ಅನಕ್ಷರಸ್ಥ ನ್ಯಾಯಧೀಶನ ಮನೆ
ಮಾರಾಟಕ್ಕಿದೆ! : ಸೋಮಶೇಖರ ಬಿಸಲವಾಡಿ

೫೯. ನಾಳೆಗಳಿಲ್ಲ ಈ ಕನಸುಗಳಿಗೆ : ಎಚ್.ಬಿ.ಪೂಜಾ

೬೦. ಕಾಡದಿರಿ ನೆನೆಪುಗಳೇ : ಸಮತಾ ಬಿ. ದೇಶಮಾನೆ

೬೧. ಗಜಲ್ : ರಮೇಶ್ ಗಬ್ಬೂರು

೬೨. ಗನ್ನು ನಿಮ್ಮದು ಪೆನ್ನು ನಮ್ಮದು : ಕಾ.ವೆಂ.ಶ್ರೀನಿವಾಸಮೂರ್ತಿ

೬೩. ಜೋಗೇರ ಹುಡುಗಿ : ಅನುಸೂಯ ಕಾಂಬಳೆ

೬೪. ದೊಡ್ಡುಚ್ಚನ ಪದ : ದಿಲೀಪ್ ಎನ್ನೆ

೬೫. ದೇವದಾಸಿ : ಬಿ.ಕೆ.ಹೊಂಗಲ

೬೬. ಸಾಲ ಬೇಕಾಗಿತ್ತು : ದೀಪಕ ಎನ್.ಶಿಂಧೆ

೬೭ ಬೆಳಕಿನೊಳಗಣ ಬೆಳಕು : ನಾಗೇಶ್ ಸೋಸ್ಲೆ

೬೮. ಮಾರಿಕೋಳಿ : ಮಂಜು ಕೋಡಿಉಗನೆ

೬೯. ಜಾತಿಯ ಭೂತ : ಲಿಂಗಣ್ಣ ಗೋನಾಲ

೭೦. ಇದು ನನ್ನ ಭಾರತ : ಹಾಲ್ಕುರಿಕೆ ಶಿವಶಂಕರ್

೭೧. ಕಪ್ಪು ಹುಡುಗಿಯ ಹಾಡು : ಜಯದೇವಿ ಗಾಯಕವಾಡ್

೨. ಒಡಲ ಕಿಚ್ಚಿನ ಹಿಲಾಲು ಹಿಡಿದು : ನಾಗೇಶ್ ಜೆ. ನಾಯಕ

೭೩. ನೀರ ಕುಲುಮೆ : ಬ್ಯಾಡರಹಳ್ಳಿ ಶಿವರಾಜ

೭೪, ಜಲಜಂಬೂಕನ್ನೆ : ರವಿಕುಮಾರ ನೀಹ

೭೫. ಇದ್ದಿಲು ಮಾರುವ ಹೆಂಗಸರು : ವಿ. ಎಂ. ಮಂಜುನಾಥ

೭೬. ಕಪ್ಪು : ಕವಿತಾ ಸಿ. ಕುಸುಗಲ್ಲ

೭೭. ಊರು ಬಿಟ್ಟು ಊರು ಸೇರುವ ಮುನ್ನ : ಎನ್.ಸಿ.ವೆಂಕಟರಾಜು

೭೮. ನಿಮ್ಮನ್ನೇನೆಂದು ಭಾವಿಸಲಿ? : ಮರಿಯಪ್ಪ ನಾಟೇಕರ್

೭೯. ನಮ್ಮದೇ ಗೋವು ನಮ್ಮ ಆಹಾರ : ಬಿದಲೋಟಿ ರಂಗನಾಥ್

೮೦. ನಿನ್ನ ಕೈ ಕೌದಿಯಾಗಿ ಅರಳುವ ಪರಿ : ಅರುಣ್ ಜೋಳದ ಕೂಡ್ಲಗಿ

೮೧. ದಲಿತ ಹುಡುಗ : ಎಂ.ಲೋಕೇಶ್

೮೨. ನೆಲದ ಕಾವಿಗೆ ಕರುಣೆ : ಲಕ್ಕೂರು ಸಿ ಆನಂದ

೮೩, ಉಳಿ ಮೊನೆಯ ಮೋಹಕ ಹುಡುಗಿ : ವಿ.ಆರ್.ಕಾರ್ಪೆಂಟರ್

೮೪. ನಮ್ಮೂರಿಗೆ : ಹುಲಿಕುಂಟೆ ಮೂರ್ತಿ

೮೫. ಬಾನು ನೀವೇ ಹಂಚಿಕೊಳ್ಳಿ : ರಮೇಶ್ ಅರೋಲಿ

೮೬. ಯುಗ ಯುಗಗಳು ಕಳೆದರೂ...... : ಅಪ್ಪಗೆರೆ ಟಿ. ಡಿ. ಲಂಕೇಶ್

೮೭ ರೆಕ್ಕೆ ಬಿಚ್ಚಿದ ಪ್ರಶ್ನೆಗಳು : ದೊಡ್ಡಕಲ್ಲಹಳ್ಳಿ ನಾರಾಯಣಪ್ಪ

೮೮. ಯಾರ ಹಂಗಿಲ್ಲ ಬೀಸುವ ಗಾಳಿಗೆ : ಸತ್ಯಮಂಗಲ ಮಹಾದೇವ

೮೯. ವೇಶ್ಯ : ಗುರುಪ್ರಸಾದ್ ಕಂಟಲಗೆರೆ

೯೦. ನನ್ನ ಬುಡದ ಕತ್ತಲು : ಅಂಜಲಿ ಬೆಳಗಲ್

೯೧. ಕೇಳೆ ಸಖಿ, ಕೇಳು! : ಬೊಮ್ಮಕಲ್ಲು ವೆಂಕಟೇಶ

೯೨. ಹೆಗಲ ಮೇಲೆ ಕ್ಷಣ ಹೊತ್ತಿನ ದ್ವೇಷದ
ಸವಾರಿ : ಅನಿಕೇತನ ಟಿ.ಎಸ್

೯೩ ನೆಡದಿರು ಶಿಲುಬೆಯನ್ನು ನನ್ನ : ಬಸವರಾಜ ಹೃತ್ಸಾಕ್ಷಿ
ಗೋರಿಯ ಮೇಲೆ

೯೪. ಪಾರ್ಥೇನಿಯಂ ಗಿಡಗಳು : ಎನ್.ಕೆ.ಇಬ್ಬನಿ

೯೫. ದಲಿತರೊ ನಾವು ದಲಿತರೊ : 'ಡಾ. ನಂಜುಂಡಸ್ವಾಮಿ
ಹರದನಹಳ್ಳಿ

೯೬ ನೀರ ತೇರು : ಎಸ್.ಕೆ.ಮಂಜುನಾಥ್

೯೭ ಬೆಂಕಿ ಸುಡುವ ಜಲ : ಕುಮಾರ ಇಂದ್ರಬೆಟ್ಟ

೯೮. ಮಾದಿಗರ ಹುಡುಗ : ಎಚ್.ಲಕ್ಷ್ಮೀನಾರಾಯಣಸ್ವಾಮಿ

| | | |
|---|---|---|
| ೯೯. ಉರಿವ ದೀಪದ ಕೊನೆಗೆ ಅಪ್ಪನದೇ ರೂಪ | : | ಮಂಜುಳಾ ಹುಲಿಕುಂಟೆ |
| ೧೦೦. ಇಲ್ಲ ನಿಮ್ಮ ಹಾಗೆ | : | ವಾಯ್.ಎಂ.ಯಾಕೊಳ್ಳಿ |
| ೧೦೧. ನಾನೂ ಒಬ್ಬ ಮನುಷ್ಯ | : | ಜೆ.ಬಿ.ಪೂಜಾರಿ |
| ೧೦೨. ಅಂತರಾಳ | : | ಅಮೃತಾ ಆರ್.ಕಟಕ |
| ೧೦೩. ದಲಿತರು ಬೇಕೆ? | : | ಈಶ್ವರ ಸಿ, ತಕೋಳ |
| ೧೦೪. ನಮ್ಮನೆಯ ದೇವರು | : | ಕುಪೇಂದ್ರ ಎಸ್.ವಠಾ |
| ೧೦೫. ನಲಿದಾಡಿ ಹೊಳೆಯುವ ಮುತ್ತುಗಳು | : | ಭೀಮಸೇನ ಗಾಯಕವಾಡ |
| ೧೦೬. ಚೆಂದಿ ಬಟ್ಟೆ ಮತ್ತು ದೀಪಾವಳಿ | : | ಸುರೇಶ ಎಲ್.ರಾಜಮಾನೆ |
| ೧೦೭. ಇರಿಚಲು ಕೆರೆಯ ಹುಡುಗಿ | : | ಸುಜಾತ ಚಲವಾದಿ |
| ೧೦೮. ಹುಟ್ಟು - ಸಾವು | : | ವೈ. ಎಂ. ಭಜಂತ್ರಿ |

೧೦೯. ಅಳುವುದಾದರೆ ಅತ್ತುಬಿಡು.... : ಸಿ.ಎಸ್.ಭೀಮರಾಯ

೧೧೦. ಬಡವನಾದರೂ ಗೆಳತಿ : ಶೋಭ ಹರಿಜನ

೧೧೧. ದಲಿತರ ಯುಗಾದಿ ಹಾಡು : ಎಂ.ಲಕ್ಷ್ಮಣ (ಗಂಗಾವತಿ)

೧೧೨. ಸತ್ವಪರೀಕ್ಷೆ : ವಿ. ನಾರಾಯಣಸ್ವಾಮಿ

೧೧೩. ಕತ್ತಲೆಯೆಂಬ : ಮಿತಾ ದೇವನೂರ

೧೧೪. ಕತ್ತಲು : ಅಭಿಷೇಕ ವೈ.ಎಸ್.

೧೧೫. ನನ್ನವ್ವ : ಎಚ್.ಪಿ. ಪೂರ್ಣಿಮಾ

೧೧೬ ನನ ನೆಂಟ : ವೆಂಕಟರವಣ ಎನ್.ನಾವೆಂಕಿ

೧೧೭. ಸರಿಯೇನು? : ವಿ.ರಾಘವೇಂದ್ರ

೧೧೮. ಕು. : ಸೋಸಲೆ ಗಂಗಾಧರ

೧೧೯. ಅಂತರಾಳ : ಕೆ.ನರಸಿಂಹಪ್ಪ ಮೂಡಲಗೊಲ್ಲಹಳ್ಳಿ

೧೨೦. ಸೂರ್ಯ ಹುಟ್ಟಿದ ನಾಡು : ಈಶ್ವರ ಕಟ್ಟಿಮನಿ


*********

# ಶತಮಾನದ ನೊಗ

- ಪ್ರೊ. ಬಿ. ಕೃಷ್ಣಪ್ಪ

ಎಷ್ಟು ಶತಮಾನಗಳಿಂದ ಇವರು ನನ್ನ

ಹೆಗಲ ಮೇಲೆ ಕುಳಿತಿದ್ದಾರೆ ಎಂಬ ಅರಿವು ನನಗಿರಲಿಲ್ಲ.

ಆಗ ನಾನು ನಿರಕ್ಷರ ಕುಕ್ಷಿಯಾಗಿದ್ದೆ. ಅಜ್ಞಾನಿಯಾಗಿದ್ದೆ.

(ಹೌದು ಹಾಗೆ ಮಾಡಲ್ಪಟ್ಟಿದ್ದೆ.)

ಈಗ ಇತ್ತೀಚೆಗೆ ನಾನು ಅ ಆ ಇ ಈ

ಕಲಿಯಲು ಆರಂಭಿಸಿದ ನಂತರ ನನಗೆ ಅರ್ಥವಾಗತೊಡಗಿದೆ,

ನನ್ನ ಹೆಗಲ ಮೇಲೆ ನಾಲ್ಕಾರು ಜನ ಕುಳಿತಿದ್ದಾರೆ ಎಂದು.

ಮೊದಲು ನನಗೆ ಭಾರವೇ ಕಾಣಿಸುತ್ತಿರಲಿಲ್ಲ.

ಈಗೀಗ ಭಾರ ನೂರುಪಟ್ಟು - ಸಾವಿರಪಟ್ಟು

ಕುತ್ತಿಗೆ ಮುರಿದಂತೆ, ನಾನು ಸತ್ತಿದ್ದೇನೆ ಅನ್ನಿಸುತ್ತಿದೆ.

ಹಂದಿಯಂತೆ, ಕತ್ತೆಯಂತೆ, ನನ್ನ ಮೇಲೆ ಇವರು ಸ

ವಾರಿ ಮಾಡಿದ್ದಾರೆ. ಕಂತೆ ಹೇರಿದ್ದಾರೆ.

ಬೆನ್ನು ಮೂಳೆ ಮುರಿದು, ಸೊಂಟ ಬಿದ್ದರೂ

ಒತ್ತಿ ಒತ್ತಿ ಖುಷಿ ಪಡುತ್ತಿದ್ದಾರೆ

ನನ್ನ ನರನರಗಳು ಬೇಯುತ್ತಿವೆ, ಸಿಡಿಯುತ್ತಿವೆ. ಕೂಗುತ್ತಿವೆ.

ನನ್ನ ದುಃಸ್ಥಿತಿ ಕಂಡು ಮರುಗಿ ನಿಟ್ಟುಸಿರ ಕರೆದವರು,

ಬೆರಳೆಣಿಕೆಯಷ್ಟು

ನನ್ನ ಕರೆದರು, ಕೈ ಹಿಡಿದು ಜಗ್ಗಿದರು

ನಾನು ಹೋಗಲಿಲ್ಲ, ಅಲ್ಲಲ್ಲ, ನನ್ನ ಬಿಡಲಿಲ್ಲ

ನನ್ನೊಟ್ಟಿಗಿದ್ದವರು, ಈ ನೊಗವ ಕಿತ್ತೊಗೆದು - ಒದ್ದು

ಮುಕ್ತರಾದರು, ಬಿಡುಗಡೆಯ ಹೊಂದಿದರು.

ನಾನು ಗುದ್ದಿ ಕಟ್ಟಿದ ದನದಂತೆ ಒದ್ದಾಡುತ್ತಿದ್ದೇನೆ.

ಈ ಹಗ್ಗ ಹರಿಯಬೇಕು, ಈ ಗುದ್ದಿ ಕೀಳಬೇಕು.

ಹೆಗಲ ಮೇಲಿನ ಭಾರ ಕಿತ್ತು ಎಸೆಯಬೇಕು!

ಹೆಗಲ ಬಿಟ್ಟು ಇಳಿವ ಮನಸಿಲ್ಲ.

ಇವರಿಗೆ ಶಾಂತಿ ಮಂತ್ರವ ಹೇಳಿ, ಮಣ್ಣು ಮುಕ್ಕಿದ ಜನಕೆ,

ಲೆಕ್ಕವಿಲ್ಲ, ಇತಿಹಾಸ ಚಕ್ರಗಳ ಉರುಳಿಸಿಲ್ಲ.

ನಾನು ಚೆನ್ನಾಗಿ ಕಣ್ಣು ತೆರೆದು ನೋಡಿದ್ದೇನೆ.

ಈ ನೀಚರಿಗೆ ಎದೆಯಲ್ಲಿ ಗುಂಡಿಗೆಗಳೇ ಇಲ್ಲ.

ದೊಮ್ಮೆಯಲ್ಲಿ ಉಸಿರಿಲ್ಲ.

ಹುಡುಕಿದರೂ ಹೊಟ್ಟೆಯಲ್ಲಿ ಕಳ್ಳುಪಚ್ಚೆಗಳಿಲ್ಲ.

ಮುಖ್ಯ ಇವರ ಮುಖದಲ್ಲಿ ಕಣ್ಣು-ಕಿವಿಗಳೇ ಇಲ್ಲ.

ಇವರ ಕಾಲುಗಳು ಹಿಂದು ಮುಂದಾಗಿವೆ.

ಇವರು ಮನುಷ್ಯರೇ ಅಲ್ಲ, ರಾಕ್ಷಸರು, ಅಸುರರು

    ಈ ರಾಕ್ಷಸರಿಂದ ನನಗೆ ಬಿಡುಗಡೆ ಬೇಕು

    ಹೌದು ಬಿಡುಗಡೆ ಬೇಕು.

    ಹಾಗಾದರೆ ಬಿಡುಗಡೆ ಹೇಗೆ, ಹೇಗೆ, ಹೇಗೆ?

ಸಂಘರ್ಷ

ನನ್ನ ಹೆಗಲ ಮೇಲೆ ಕುಳಿತು ಕೆಳಗೆ ಇಳಿಯದ

ಈ ಧೂರ್ತರನ್ನು

ನಾನು ಎತ್ತಿ ನೆಲಕ್ಕೆ ಕುಕ್ಕಬೇಕು – ಒಗೆಯಬೇಕು.

ಒಗೆಯಲೇಬೇಕು.

ಈ ರಕ್ತ ಬೀಜಾಸುರರು ಮತ್ತೆ ಏಳದಂತೆ ಅಲ್ಲಿ ಮೆಟ್ಟಿ ತುಳಿಯಬೇಕು.

ಆಗಲೆ ನನಗೆ ಬಿಡುಗಡೆ

ನಿನಗೆ ಬಿಡುಗಡೆ – ಮುಕ್ತಿ - ಸ್ವಾತಂತ್ರ

ಇತಿಹಾಸದ ಪಾಠ.



## ಕೆಂಪುಕೋಟ

**- ಎಲ್.ರಂಗನಾಥ್ ಶಿರಾ**

ಕಪ್ಪು ರೆಟ್ಟೆಯ ಮಮಟಿಯಿಂದ

ಕಲ್ಲೆದೆಯ ಗುಂಡಿಯ ತೋಡುವೆ

ಐದು ಬೆರಳಿನ ಸಲಿಕೆಯಿಂದ

ಪಕ್ಕೆಲುಬ ಸಾಲನು ಮಾಡುವೆ.

ಕಪ್ಪು ಕೈ ಬಿಳಿ ಉಗುರಿನಿಂದ

ದಾರ-ವಾರದ ಬೇರ ಬಿಡಿಸುವೆ

ಕಪ್ಪು ಕೈಬಳೆ ಬೆರಳಿನಿಂದ

ನೆಣದ ಹೆಂಡೆಯ ಹಿಸುಗುವೆ

ಹಲ್ಲು ಮುಳ್ಳಿನ ಅಲುವೆಯಿಂದ

ಬೊಜ್ಜು ನೆಲವನು ಹರಗುವೆ

ತೊಡೆಯ ಹಂಡಿನ ಮರಗಳಿಂದ

ಬೊಜ್ಜಾದ ಬೆನ್ನನು ಹೊಡೆಯುವೆ.

ಎದೆಯ ಗುಂಡಿಯ ಬಾವಿಯಿಂದ

ಕೆನ್ನೀರ ಕಾಲುವೆ ಹರಿಸುವೆ

ಕೆಂಪು ತೋಟದ ಬಾಯಿಯಿಂದ

ಉಳ್ಳವರ ನೆತ್ತರ ಕುಡಿಸುವೆ

ಹೊಡೆದ ತಲೆ ಬಾಂಡಲಿಗಳಿಂದ

ನೆಣದ ಗೊಬ್ಬರ ಚೆಲ್ಲುವ

ನೊಂದ ಕಯ್ಯಲಿ ನಾಟಿ ಹಾಕಿ

ಕೆಂಪು ತೋಟವ ಬೆಳಸುವೆ

ಕಣ್ಣ ಬಾವಿಯ ಆಳದಿಂದ

ಕಣ್ಣೀರ ತೋಟಕೆ ಹೊಯ್ಯುವ

ತುಳಿದ ಬೆನ್ನಿನ ತೋಟದಿಂದ

ಕೆಂಗುಲಾಬಿಯ ಕೊಯ್ಯುವೆ.

# ನಿಚ್ಚಣಿಕೆ

**- ಕೆ.ಬಿ. ಪವಾರ**

ನಿಚ್ಚಣಿಕೆಯನೇರಿ

ಉಚ್ಚಸ್ಥಿತಿ ಕಂಡವರೆ

ಹುಚ್ಚಿನಲಿ ಮತ್ತೇರಿ

ನಿಚ್ಚಣಿಕೆಯ ಮರೆತವರೆ

ಅಲ್ಲಿಗ್ಹೋಗಿ

ನಿಲ್ಲುವಂತಾಗಿದ್ದುದನು ಬಲ್ಲಿರಾ?

ಕೆಲವೇ ಕೆಲವು ಬಲವಂತ ಈಸುಗಳು

ನಿಮಗೆ ಬರಿ ಆಸರೆಯಾದದ್ದು

ಹಲವಾರು ಬಡ ಹಲ್ಲುಗಳೇ ನಿಮ್ಮನು

ಆ ಗತಿಗೆ ಮೇಲೇರಿಸಿದ್ದು

ಏರಿಕೆಗೆ ಸೋಪಾನವಾದದ್ದು!

ಏಣಿಯ ಹಲ್ಲುಗಳ

ಗಣಿಸಿದ್ದಿರೋ?

ಅವುಗಳನೆಣಿಸಿದ್ದಿರೋ?

ಕಾಣೆಯಾದವಲ್ಲವೆ ನಿಮಗೆ

ಬೆಳೆದ ನಿಮ್ಮ ಕಣ್ಣ ಪೊರೆಯೊಳಗೆ?!

ಹಲ್ಲುಗಳವು ನಿಮ್ಮನು
ಹಂತ ಹಂತ ಎತ್ತಿದ್ದವು ಅ
ವುಗಳ ಗಣನೆಯಿರದೆ
ಅವುಗಳಿಗೆ ಗೌರವವಿರದೆ
ಬೇಸರದಿ ಅವು ಸರಿದವೆಂದರೆ
ಮೆಟ್ಟಿಲಾಸರೆಯಿರದೆ ಬೀಳುವಿರಿ ಕೆಳಗೆ
ಇಂತಹ ಘಟನೆಗಳೇಕ ಇತಿಹಾಸದೊಳಗೆ!



## ಭೀಮ್ರಾವ ಅಂಬೇಡಕರನಿಗೆ

**- ಚೆನ್ನಣ್ಣ ವಾಲೀಕಾರ**

ಭೀಮ್ರಾವ ಅಂಬೇಡ್ಕರ | ಭೀಮ್ರಾವ ಅಂಬೇಡ್ಕರ
ಅಮವಾಸಿ ರಾತ್ರ್ಯಾನ ಹುಣ್ಣಿ ಚಂದ್ರಾಮನೆ ||ಪಲ್ಲ|| ||೧||

ಕೋಟಿ ದಲಿತರ ಎದೆಯ | ಹುಣ್ಣಿಂದ ಆದಂಥ
ನೀಬರಲು ನಾವಾದವ್ ಮೂಕ ನಾಯಕನೆ ||೨||

ಧರ್ಮ ಗಾಂಜಾದಿಂದ | ಇಲಿತನಕ ಬಿದ್ದಂಥ

ನಮಜನಕೆ ಎಬ್ಬಿದ ಬೋಧಿಸತ್ವನೆ ||೩||

ಸಂದು ಸಂದಿಗಾದ | ನಮ್ಮ ಎದೆಯ ಬ್ಯಾನಿ

ಅಳಿಸಿ ಹಾಕಿದ್ ಕಲ್ಯಾಣದಣ್ಣ ಬಸವಣ್ಣನೆ ||೪||

ಬೆವರು ಸುರಿಸುವ ಜನಕೆ | ಬೆಣ್ಣೆ ಹೊಡೆಯುವ ಹಕ್ಕು

ತಂದು ಕೊಟ್ಟಂಥ ನೀ ಕಾರ್ಲಮಾರ್ಕ್ಸನೆ ||೫||

ಕಿವಿ ಕಣ್ಣು ಕೈಯಿಂದ | ಮುಟ್ಟಂಗೆ ಇದ್ದೋರ್ಗೆ

ಸ್ವಾಭಿಮಾನವನಾಗಿ ಮಾಡಿದ ಲಿಂಕನನೆ ||೬||

ಹುಚ್ಚು ಸ್ವಾತಂತ್ರ್ಯದಾ | ಎಂ.ಕೆ.ಗಾಂಧಿಗೆ

ಕಣ್ಣು ತೆರೆಸಿದ ಸಿಡಿಲೆ ಭೂಕಂಪದವನೆ ||೭||

ಇನ್ನೆಲ್ಲಿ ಇನ್ನೆಲ್ಲಿ ನಿನ್ನಂಥಂವಿನ್ನೆಲ್ಲಿ

ನಾವೆಲ್ಲ ನೀನಾಗಲು ಬಾರೊ ಭೀಮನೆ ||೮||

ಕಪ್ಪು ಖಂಡದ ಕತ್ತು ಪೂರ್ಣ ಅಳಿವದಕೆ

ನಮನೆಲ್ಲ ಸೂರರನು ಮಾಡೊ ಮಂಡೆಲನೆ ||೯||

## ಪೆಟ್ರೋಮ್ಯಾಕ್ಸ್ ಹೊತ್ತ ಕೊರವರು

**- ಜಂಬಣ್ಣ ಅಮರಚಿಂತ**

| ಯಾರಿವರು |

ಯಾರಿವರು? ಯಾರಿವರು?

ಯಾವ ಕಡೆಗೆ ನಡೆದಿರುವರು?

ತಲ ತಲಾಂತರ ತಲೆಯ ಮೇಲೆ

ಬೆಳಕು ಹೊತ್ತು ಸಾಗಿದವರು

ಅವರಿವರು, ಯಾರಿಗ್ಯಾಕೆ

ತಮ್ಮ ನೆರಳಿಗೆ ಅಪರಿಚಿತರು

ಪಂಡಿತ ಕವಿಗಳು ಮರೆತ

ಜಾನಪದ ಛಂದಗಳು | ಯಾರಿವರು |

ತಲೆಯ ಮೇಲೆ ಬಿಜಲಿನ ಕಾವು

ಹೊಟ್ಟೆಯೊಳಗೆ ಹಸಿವಿನ ಗಾವು

ಜೀವನವೆಲ್ಲ ಕುದ್ದು ಕುದ್ದು

ಆವಿಯಾಗಿ ಹೋದವರು ನಿ

ತ್ಯ ನಿತ್ಯ ಹೊಟ್ಟೆಯಿಂದ

ಹಸಿವನ್ನು ಹೆತ್ತವರು | ಯಾರಿವರು |

ಇದ್ದವರು, ಕದ್ದವರು

ಚುನಾವಣೆ ಗೆದ್ದವರು,

ಇವರು ಹೊತ್ತ ಬೆಳಕಿನಲ್ಲಿ

ಲಕಲಕ ಹೊಳೆದರು !

ಯಾರಯ್ಯಾ ; ಯಾರಿವರು ?

ಕಣ್ಣಿಗಂತೂ ಕಾಣರು

ಪೆಟ್ರೋಮ್ಯಾಕ್ಸ್ ಹೊತ್ತವರು ಬೆ

ಳಕಿನಡಿಯ ಕತ್ತಲಲ್ಲಿ

ಕತ್ತಲಾಗಿ ನಿಂತವರು

ಕತ್ತಲೆಯ ಹುದಲಲ್ಲಿ

ಹೂತು ಹೋಗುತ್ತಿರುವವರು | ಯಾರಿವರು |



**ನೆಲದ ಜೋಗುಳ**

**(ಗಲಿ ಒಂಬತ್ತು)**

**- ಮುಳ್ಳೂರು ನಾಗರಾಜ್**

ಯಾಕಲೆವೆ ಹೊಲೆಯ ಶಂಬೂಕ

ಪ್ರೀತಿ ಹೂ ತೋಟದಲ್ಲಿ?

ಕಾಡಿನ ಗಿಣಿ ನಾನು ಬಯಕೆ

ಬೆಳದಿಂಗಳ ತೋಟದಲ್ಲಿ

ಹೇಗೆ ಕೂಡುವ ನಾವು

ಹಗಲು ರಾತ್ರಿಯ ಜಾತ್ರೆಯಲ್ಲಿ?

ಕನಸುಗಳ ಕೇರಿಯಲಿ

ಹರಯದ ಹೂ ಮನೆಗೆ

ನೀನು ಬಂದಿರುವೆ ಪ್ರೇಮಕೋರಿ

ನಾನಲ್ಲ ನಿನ್ನ ಲೋಕದ ಚಂದ್ರಚಕೋರಿ

ಮೃದು ಕನಸುಗಳ ಕನ್ನೈದಿಲೆಯ

ದೋಚಲು ಬಂದಿರುವ ಕರಿದುಂಬಿ ನೀನು

ಬೆಳದಿಂಗಳ ಹೂ ನಾನು ಜಾತಿಕುಲಗಳ

ಕ್ರೂರ ಸೆರೆಮನೆಯಲ್ಲಿ ಇಹೆನು

ಕನಸಿನಾಕಾಶದಲ್ಲಿ ಯಾಕಲೆವೆ;

ಹೊಲೆಯೂರ ಚೆಲುವ ಶಂಬೂಕ?

ಹಬ್ಬ ಬಯಸುವೆ ನಾ ನಿನ್ನ

ನರನಾಡಿಗಳಲ್ಲಿ ಪ್ರೇಮ ಪ್ರವಾಹವಾಗಿ!

ಬಯಕೆ ಬೆಳದಿಂಗಳ ಚೆಲ್ಲಿ

ಕೊಲ್ಲಲಾರೆನು ನಿನ್ನನ್ನು ಕೋಗಿಲೆ;

ಓ ನನ್ನ ಕಪ್ಪು ಕೋಗಿಲೆ;

ಕೊಲೆಗಾರರ ನಾಡಿನಲ್ಲಿ

ನಿನ್ನ ಹಾಡಿನ ಮೋಡಿಗೆ

ಕರಗಲಾರದು ಗೆಳೆಯ

ಕಲ್ಲು ಸಕ್ಕರೆ ಹಕ್ಕಿಯು

ಕೊರಗದಿರು ಮನಸಿನಲ್ಲಿ

ಕರಗದಿರು ಕನಸಿನಲ್ಲಿ



ಜೇನು ತಿನ್ನಬೇಡ

ಬೆಂಕಿ ತಿನ್ನಬೇಡ

ಕಲ್ಲು ತಿನ್ನಬೇಡ

ಮಣ್ಣು ತಿನ್ನಬೇಡ

ಆಕಾಶದ ಮಲ್ಲಿಗೆಯ

ಸೆರಗಿನಲಿ ಮರೆಯಾಗಬೇಡ!

ಮನದ ಮಾತುಗಳ ಕೇಳಿ

ನಾನಿನ್ನ ಕೂಡಲಾರೆನು ಗಾಢವಾಗಿ

ಹುಲಿಯ ಕಣ್ಣುಗಳು ಕಾವಲಿವೆ.

ನನ್ನ ಸೆರಗಿನ ಮರೆಯಲಿ

ಜ್ವಾಲಾಮುಖಿಗಳಿವೆ

ಹಂತಕರ ಕತ್ತಿಗಳ ಪಹರೆಯಲಿ

ಮುದ್ದಿನ ಗಿಣಿ ನಾನು ಮುಲುಗುತಿರುವೆ

ಮುತ್ತಿಟ್ಟ ತುಟಿಗಳ ಸುಟ್ಟು

ನೆಲದ ಹೊಲಗೇರಿಯಿಂದ

ಮುಗಿಲ ಹೊಲಗೇರಿಗೆ

ಹಕ್ಕಿಗಳು ಹಾರಿವೆ;

ನೆಲದ ಹೊಲೆತನವ

ತೊಳೆವ ಜಲವ ಕಾಣದೆ

ಕಂಗಾಲಾಗಿವೆ;

ದಿಕ್ಕುದಿಕ್ಕುಗಳಲ್ಲಿ

ಅನಂಗ ಸಂಗೀತ ಚಲಿಸಿವೆ!

ಹಕ್ಕಿಗಳ ಆತ್ಮಕ್ಕೆ ಪ್ರೇಮವಿಲ್ಲ

ಚಿಕ್ಕೆಗಳ ಸರಸಕ್ಕೆ ಸ್ವರ್ಗವಿಲ್ಲ

ಕೊಲೆಗಾರನೆದೆಯಲ್ಲಿ ನಾಳೆಗಳಿಲ್ಲ

ತುಳಿವ ಕಾಲುಗಳ ಮೇಳಕ್ಕೆ ಕೊನೆಯಿಲ್ಲ

ದಿಕ್ಕು ಇಲ್ಲದ ದಿಕ್ಕು ಮತ್ತುವಿನ

ಹಕ್ಕು ಮುನ್ನೆಡೆಸುತಿದೆ ಬದುಕನ್ನ!

ಚರಿತ್ರೆಯ ಕಿರೀಟಕ್ಕೆ ಗೆದ್ದಲು ಹತ್ತಿದೆ

ಕತ್ತಿಗಳು ತುಕ್ಕು ಹಿಡಿದಿವೆ

ಆತ್ಮಗಳು ಕತ್ತಲಾಗಿವೆ ಮಸಣದಲ್ಲಿ

ಮಾತುಗಳು ಮೊಳೆವ ಮುನ್ನ

ಇತಿಹಾಸದ ಚರಂಡಿಗಳಲ್ಲಿ

ವರ್ತಮಾನದ ರಕ್ತದ ವಾಸನೆ ಹಬ್ಬಿದೆ
ನರಭಕ್ಷಕ ಹದ್ದುಗಳು ಹಾರಾಡುತ್ತಿವೆ
ಈ ಲೋಕದ ತುಂಬ!

ಎಲ್ಲ ತಪಸಿನ ಮೂಲ ಒಂದೇ
ಎಲ್ಲ ಕನಸಿನ ಮೂಲ ಒಂದೇ
ನಿನ್ನೆಗಳ ತೆಗೆದು ನಾಳೆಗಳಾಗಿಸುವ
ಕಾಲದಂಡದ ಸಿರಿಬೆಳಕು ಒಂದೇ
ಜಗದ ಮುಗಿಯದ ಗಾಯ ಒಂದೇ

ಪ್ರೇಮ ಕೊಲ್ಲುವ ಜನರು ನಾಡಿನಲ್ಲಿಹರು
ವ್ಯೋಮ ಗೆಲ್ಲುವ ಜನರು ಕಾಡಿನಲ್ಲಿಹರು
ಹೋಮ ಹವನದ ಬೀಡು ಕಾಡು ಬೇಗೆ ನಡುವೆ
ನನ್ನ ನರನಾಡಿಗಳಲ್ಲಿ ಉರಿಯುತ್ತಿಹುದು
ಈ ನಾಡಿನ ಸೋಲು ಜ್ವಾಲೆಯಾಗಿ;
ರಕ್ತದಾಹದ ನೆಲದ ಕೆಂಪಿಗೆ
ತಂಪಾಗುವರು ಅರಸರು
ಬಡವರ ರಕ್ತ ಕುಡಿದು
ಮೆರೆಯುವರು ನಾಡಿನಲ್ಲಿ!

ಮರೆಯಲುಂಟೆ ನಿನ್ನ ಪ್ರೀತಿಯ

ತೆರೆಯಲುಂಟೆ ಹರಿವ ಮನಸು

ಮುಟ್ಟಲುಂಟೆ ಬೆಂಕಿ ಜಲಪಾತ

ಮುಟ್ಟಿ ಮುಟ್ಟದ ಮಂತ್ರದಂಡಕೆ ಮಾತು ಉಂಟೆ

ಏಳು ನಾಗರ ಸೆಳೆತಕೆ ಹಾರಲುಂಟೆ ಪಂಚೇಂದ್ರಿಯ

ಅರಿವಿನಾಚೆಯ ತೊಗಲ ಮಿಲನಕೆ ಸೇರಲುಂಟೆ?

ಸೋರುವಾತ್ಮದ ಸಿರಿಯ ಸುಂದರ ಕುವರನೆ

ಕತ್ತಿ ಹೀರುವ ಜೀವಧಾತು ಸುರಸುಂದರನೆ

ಕಾಡು ಮನೆಯ ಮಾಡಿನಲ್ಲಿ ನಿನ್ನ ಜೀವದ

ನಿಗೂಢಗಳ ಹುಗಿದಿಟ್ಟು ಪಡೆದಿರುವೆ ದುಃಖಗಳ

ಮುಗಿಯದಂಥ ಸುಖದುಃಖ ಸಾಮ್ರಾಜ್ಯದಲ್ಲಿ

ಕೆಂಪು ಕನಸಿನ ಕನ್ನೆಯರು ಹಲವು ಮಾತಿನ ಸೊನ್ನೆಯರು

ದಿವ್ಯಲೋಕದ ಯಕ್ಷ ಯಕ್ಷಿಯರು ಜೀವ ಪಕ್ಷಿಯರು ನಿನ್ನ

ಅಚಲ ಕ್ರಾಂತಿಯ ಚಲಕೆ ಮಾರು ಹೋಗಿರುವರು

ಚಲವು ಚಂಚಲ ಹಕ್ಕಿಯು ನಿನ್ನ ಪ್ರೀತಿಯ ಕುಕ್ಕಲು

ನಿನ್ನ ನೋವಿನ ಬೆಂಕಿಯೊಳಗೆ ಉರಿಯುತಿವೆ ಏಕಾಂತ ಸುಸ್ವಪ್ನಗಳು.

ಕೆಲಸದಲ್ಲೇ ಕಳೆದುಹೋದ ಕಥೆಗಳ ಹುಡುಕುತ್ತಲೇ ಕರಗುತ್ತಾಳೆ,

ಬದುಕು ಗಾಳಿಪಟವಾಗುವ ಮೊದಲೆಷ್ಟು ಮುದವಿತ್ತು

ಜೊತೆ ನಡೆದವನ ಬಂಧನದೊಳಗೆ ಭರವಸೆಯಿತ್ತು,

ನೇಮ, ಪೂಜೆ, ಹವನ ಬಂದವರಿಗಿಷ್ಟು ದಾನ ದಕ್ಷಿಣೆ

ಕೇಳಿ ಬಂದವರಿಗೆಲ್ಲ ಕೈತುಂಬ ನೀಡಿದ ನೆಮ್ಮದಿ

ಗಂಡನೆಂಬವ ಇಲ್ಲವಾದ ಮರುದಿನವೇ ಬೀಸಿಕೊಂಡ

ಬದಲಾವಣೆಯ ಬಿರುಗಾಳಿಯೆದುರು ಗಾಳಿಗಿಟ್ಟ ಸೊಡರಾದಳು.

ಕೈಬಿಟ್ಟ ಭೂಮಿ, ಬಳಗ, ಬಾಯ್ದಿಟ್ಟ ಕಾನೂನು

ರಾಗವಿಲ್ಲದ ಹಾಡಾದಳು, ಪರಿಹಾರ ಬೇಡಿ ಕೈ ಚಾಚಿದಳು

ಮಗನಿಗಿಂತ ಮೊದಲು ಹುಟ್ಟಿದ ಮಗಳೋ,

ಹುತ್ತಗಟ್ಟಿದ ಬಯಕೆಗಳ ಮೇಲೆ ಹರಿದು ಹಾವು

ಸೇರದೆ ಬಿಲ, ಅಲೆಯುತ್ತ ಹೊಲ, ಅಗ್ರಹಾರದ ಕತ್ತಲಿನಲಿ ಬಾವಲಿಗಳ ಸಂವಾದ!

ಬೆಳಗಾದಾಗ ತುಳಸಿಯೆದುರಿನ ರಂಗೋಲಿಯಾಗುತ್ತಾಳೆ,

ಹಿತ್ತಲಿನ ಪಪ್ಪಾಯಿ ಗಿಡದ ಕೆಳಗೆ ಇವಳ ಕಣ್ಣೀರ ಒರತೆ!!

ಮಾತುಗಳಾಚೆ ಮೌನ ಸರೋವರದಲ್ಲಿ ನೆಲಕಚ್ಚಿಕೊಂಡ ದೋಣಿಯಾದ

ಸೀತಮ್ಮನಂಗೈ ಗೆರೆಗಳೇ ಸವೆದು, ನಿನ್ನೆಯೂ ಒಂದೇ, ನಾಳೆ ಕೂಡ

ಇಲ್ಲ ಸ್ವಂತದೆನ್ನುವ ಹಸ್ತರೇಖೆ!

ಬೇಸಿಗೆಯ ಬೇಗೆ ಕೂಡ ಎಷ್ಟೋ ತಂಪು, ಇವಳೊಡಲ ಕಿಚ್ಚಿಗಿಂತ!!

## ನಂ ರೂಪ್ಲಿ ಮತ್ತು ಕಜ್ಜಿ ಹರ್‍ಯೆ ನಾಯಿ

**- ಬಿ.ಟಿ. ಲಲತನಾಯಕ್**

ಬೆಟ್ಟ ಗುಡ್ಡ ಅಲೆಯುತ್ತಿದ್ದ ಕಾಡು ಜನಗಳು

ನಾವು

ಸೈನ್ಯದಲ್ಲಿ ದುಡಿಯುತ್ತಿದ್ದ ವೀರ ಜನಗಳು

ಶಿವಾಜಿ-ಪ್ರತಾಪರಂಥ ರಾಜರನ್ನು ಗೆಲ್ಲಿಸುತ್ತ

ಗಾದಿಯಲ್ಲಿ ಕೂರಿಸುತ್ತ

ಹಿದೆ ಹಿಂದೆ ಉಳಿದುಹೋದ

ಹಿಂದು ಜನಗಳು

ನಾವು

ಅಡವಿ ಜನಗಳು.

ಹಿಂಡು ದನವ ಅಟ್ಟಿಕೊಂಡು

ಉಪ್ಪು ಮೆಣಸು ಹೇರಿಕೊಂಡು

ಬಿಸಿಲು ಮನೆಗೆ ಒಗ್ಗಿಕೊಂಡು

ಮಾರಿಕೊಂಡು ಬದುಕುತ್ತಿದ್ದ

ಗಿರಿಯ ಜನಗಳು

ಲಂಬಾಣಿ ಜನಗಳು.

ಅಡವಿ ಬಿಟ್ಟು ತಾಂಡೆ ಕಟ್ಟಿ

ಹಲವು ಹತ್ತು ಕಸುಬು ಕಲಿತು

ನಾಡು ಜನರು ನಾವು ಈಗ

ಎಂದು ಹೆಮ್ಮೆಪಟ್ಟೆವು

ದುಡಿಮೆ ದೇವರೆಂದು ತಿಳಿದು

ದುಡಿವ ಜನಗಳಾದವು.

ಒರಟು ಚೆಂದಿ ಉಡುಪು ತೊಟ್ಟು

ಮೈಯ ಬೆವರು ರಕ್ತ ಬಸಿದು

ಉತ್ತು ಬಿತ್ತಿ ಬೆಳೆದೆವು

ಬೆಳೆದುದನ್ನು ಧಣಿಗೆ ತೆತ್ತು

ದೀನರಾಗಿ ಉಳಿದೆವು!

ನಮ್ಮ ರೂಪ್ಲಿ ರಮಣಿಯರನು
ಕಚ್ಚೆ ಹರುಕ ಧನಿಯ ನಾಯಿ
ಕಣ್ಣುಹಾಕಿ ಕಾಡುತಿರಲು
ಮೌನವಾಗಿ ಅತ್ತೆವು
ಒಳಗೊಳಗೇ ಸತ್ತೆವು.
ಹಿಟ್ಟು ನುಚ್ಚಿ ಗಿಟ್ಟದಾಗ
ತುಣುಕು ರೊಟ್ಟಿ ಸಿಕ್ಕದಾಗ
ಒಲೆಯು ಉರಿಯ ಕಾಣದಾಗ
ಹಾಡಿ ಹಾಡಿ ಕುಣಿದೆವು
'ರಸಿಕ ಜನ'ಗಳಾದೆವು!

ಅದರೀಗ ಮನದ ನೋವು
ನಿಜದ ಅರ್ಥಪಡೆದಿದೆ.
ತಡೆಯಲಾಗದಂಥ ರೋಷ
ಉಕ್ಕಿ ಭರತವಾಗಿದೆ.
ನಮ್ಮ ರಸಿಕ ಹಾಡು ಈಗ
ಗುಡುಗಿನಂತೆ ಮೊಳಗಿದೆ
ಕುಣಿತ ರುದ್ರ ನಾಟ್ಯವಾಗಿ
ವಂಚಕರೆದೆಯು ನಡುಗಿದೆ.

ಕಾಡು ಕಡೆಯಬಲ್ಲ ಕತ್ತಿ

ನಾಡು ಕಟ್ಟಬಲ್ಲ ಶಕ್ತಿ

ದಲಿತ ತೋಳಲಡಗಿದೆ

ಕೊಬ್ಬಿ ಮೆರೆವ ವರ್ಗಕಿದನು,

ಕೂಗಿ ಹೇಳಬೇಕಿದೆ......



**ಕಪ್ಪು ಚಿರತೆಯ ಡಂಗುರ**

**- ರಾಮದೇವ ರಾಕೆ**

ಇಂಡಿಯಾ

ನಾನೊಬ್ಬ ಕಲಿತ ಬಿಸಿರಕ್ತದ ಕಪ್ಪು ಹುಡುಗ

ಇಂದಿನ ಅಸಮಾನತೆ, ದಬ್ಬಾಳಿಕೆಗೆ, ಶೋಷಣೆಗೆ, ಜಾತಿ ವ್ಯವಸ್ಥೆಗೆ

ಊಳಿಗಮಾನ್ಯ ಪದ್ಧತಿಯ ಕ್ರೂರ ಹಿಂಸೆಗೆ

ಎದುರಾಗಿ ಬುಲೆಟ್ ತುಂಬಿ ರೆಡಿಯಾದ ಬಂದೂಕ.

ಇಂಡಿಯಾ

ನಿನ್ನ ೫೦೦೦ ವರ್ಷಗಳ ಇತಿಹಾಸ ತಿರುವಿದ್ದೇನೆ

ಗೀತೆ, ವೇದ, ಪುರಾಣ, ಧರ್ಮ ಇಂಥ ವಗೈರೆ ವಗೈರೆ

ವಿಷಬೀಜಗಳ ಪಠಿಸಿ ಸುಟ್ಟಿದ್ದೇನೆ.

ಯಾಕೆ ಗೊತ್ತಾ?

ಅಲ್ಲಿ ನನಗೆ ಕಂಡದ್ದು

ನಿನ್ನ ವೈಭವದ ಈಸ್ಟ್ಮನ್ ಕಲರ್ ಚಿತ್ರಗಳಲ್ಲ;

ನೋವು, ನಿರಾಸೆ, ಎಲ್ಲವನ್ನೂ ತುಂಬಿಕೊಂಡು

ಕ್ರೂರ ಹಿಂಸೆಗೆ ತುತ್ತಾಗಿ ನೆಲಹಿಡಿದ

ನನ್ನ ಜನರ ದುರಂತ ಕಥೆಯನ್ನ.

ಅದೆಲ್ಲಾ ಹಳೆ ಮಾತು ಅಂತ ತೇಲಿಸಿ ಬಿಟ್ಟರೆ

ಇಕಾ

ಸಾವಿರದ ಒಂಭೈಂನೂರ ಎಪ್ಪತ್ತಾರರ ಕಥೆ ಉಂಟಲ್ಲಾ ಹೊಸತಾಗಿಯೇ

ಅದಕ್ಕೇನೇಳುತ್ತೀಯ ಜವಾಬು?

ಅಂದಾಗ; ನಿನ್ನ ಬಾಯಿ ಕಟ್ಟುತ್ತದೆ.

ಕಾಂಗ್ರೆಸ್ ಒಡೆಯಾ ಇದು ನಿನಗೆ

ನಿನ್ನ ಪಂಚವಾರ್ಷಿಕ ಯೋಜನೆಗಳಿಂದಾದದ್ದೇನು

ಕೇಳಿದರೆ, ನೀನು

ನೂರೆಂಟು ಅಸಮಾನತೆಗಳ ಪಟ್ಟಿ ಕೊಟ್ಟುಬಿಡುತ್ತೀಯ

ಅದು ನಿನಗೆ ಮಹತ್ವದ್ದೆನಿಸುತ್ತದೆ.

ಕೋಟಿ ಕೋಟಿ ಚೆಲ್ಲಿ ಚಂದ್ರನಗರಿಗೇರಿದ್ದು

ಬಾಂಬ್ ಸ್ಫೋಟಿಸಿದ್ದು, ಅರಭಟನಟ್ಟಿದುದನ್ನು

ಹೇಳುತ್ತಾ ಜಂಬ ಕೊಚ್ಚುತ್ತೀಯಾ

ಮುಚ್ಚು ಬಾಯಿ-

ನಿನ್ನ ಯೋಜನೆಗಳಿಂದ ದಲಿತರು, ಭೂಹೀನರು, ಬಡರೈತರಿಗೆ

ಅನ್ನ ಸಿಕ್ಕಿತಾ?

ಸಮಾಜವಾದ, ಗರೀಬಿ ಹಠಾವೋ, ಹಸಿರು ಕ್ರಾಂತಿ, ಜನತಾ ಆಡಳಿತ

ಇಂಥ ಗಿಲೀಟು ಘೋಷಣೆಗಳ ಎತ್ತಿ ಎತ್ತಿ ಹೇಳಿದೆಯಲ್ಲಾ

ಅನ್ನ ಸಿಕ್ಕಿತಾ ?

ನನ್ನೊಡಹುಟ್ಟಿದ ದಲಿತರಿಗೆ,

ಗೊತ್ತು ನನಗಿದೆಲ್ಲವೂ

ಇಲ್ಲಿಯ ತನಕ ನೀನು ಹಾಕಿದ ಮುಖವಾಡಗಳ

ಹಿಂದಿನ ಮುಖ ನನಗೆ ಗೋಚರಿಸುತ್ತದೆ.

ಅದಕ್ಕೇನೂ ಭೂತಗನ್ನಡಿ ಹಿಡಿದು

ತಡುಕಬೇಕಿಲ್ಲ - ಹುಡುಕಬೇಕಿಲ್ಲ,

ಇಂಡಿಯಾ–

ನೋಡು–

ಮನೆಯಿಲ್ಲ-ಉಣಲಿಲ್ಲ-ಉಡಲಿಲ್ಲ

ಸರಾಗ ಬದುಕಲೇನೂ ಇಲ್ಲದ

ಅನ್ನ ಅನ್ನ ಎಂದರಚಿ ದಿಕ್ಕು ದಿಕ್ಕಿಗೂ ಅಲೆವ

ಬೆತ್ತಲೆಯ ಫುಟ್‌ಪಾತ್ ದಲಿತ ಬಾಂಧವರ

ಇವರೊಳಗಿನ ಕಿಚ್ಚನ ಬಿಸಿ ತಟ್ಟಲಿಲ್ಲ ನಿನಗೆ

ನೋಡು ನೋಡು

ಕಿಚ್ಚು ತುಂಬಿಕೊಂಡ ಹೊಲೆಮಾದಿಗರಾಲಾಪಕೇರಿಗಳ

ಶತ ಶತಮಾನಗಳುರುಳಿದರೂ ಕತ್ತಲ ವ್ಯೂಹದೊಳಗೊದ್ದಾಡಿ

ಉಸಿರು ಬಿಟ್ಟು-ಎಳೆದೂ ಮಾಡುವ ಸತ್ತವರ ನೋಡು.

ಹಗಲಲ್ಲವ ಇದು-ಇರುಳಲ್ಲವ ಇದು

ಅನ್ನುವುದೇನೂ ಇಲ್ಲದೆ ದುಡಿದು ದುಡಿದು

ಹಸಿದ, ಬೆವೆತ ಮುಖಗಳ

ಅಸ್ಥಿಪಂಜರ ಯಾಸ ನೋಡು

ಮಾಡಿದಪ್ಪನ ಸಾಲಕ್ಕೆ ಮಾತ ಕಲಿಯುವ ಮುಂಚೆ

ದಣಿಗಳ ಮನೆಯ ತೊತ್ತಾಗುವ ಕ್ಯೂ ನಿಂತ ಆಳುಗಳ

ಇವರ ರಕ್ತವೆ ಬೆವರಾಗಿ ಬೆನ್ನೆಲುಬಾಗುವುದು
ಸಾಹುಕಾರರ ಮನೆಗೆ ಮತ್ತು ಅವರ ನೆಟ್ಟಗೆ ನಿಂತ
ಇನ್ನೆಷ್ಟೋ ಇತ್ಯಾದಿ ಇತ್ಯಾದಿಗಳಿಗೆ,
ಅಸಹಾಯಕ ನನ್ನಪ್ಪ ಅಣ್ಣ ತಮ್ಮಂದಿರ ಎದುರೇ ಓ
ನನ್ನವ್ವ ಅಕ್ಕ ತಂಗಿಯರ ಸೀರೆ ಸೆಳೆದು
ಹಾಡು ಹಗಲೇ ಸಂಭೋಗಿಸುವುದ ಕಂಡು
ದಿನವೂ ಕೊಲೆ ಸುಲಿಗೆಗೆ ಸಿಕ್ಕಿ ತತ್ತರಿಸುವ
ನನ್ನ ಹತಾಶ ಮುಗ್ಧ ಜನತೆಯ ಕಂಡು
ನನ್ನೊಡಲ ಬೆಂಕಿ ಧಗಧಗಿಸುವುದಿಲ್ಲವಾ ಹೇಳು ?
ಹೀಗೆ ಕೇಳಿದರೆ ನಿನ್ನ ನಾಲಿಗೆ ಏಳುವುದೇ ಇಲ್ಲ

ಇಂಡಿಯಾ-
ಇಲ್ಲೆ, ಇಲ್ಲಿ ಸತ್ತ ಬದುಕ ಬದುಕುವ ನನಗೆ
ಇಲ್ಲೆ ಅಡ್ಡಾಡುವ ನನಗೆ
ಇಲ್ಲೆ ಹುಟ್ಟಿಕೊಂಡಿದ್ದು ಬೆಂಕಿ.
ಕಬಳಿಸುತ್ತಿರುವ ನನ್ನ ಕಡು ದಾರಿದ್ರ ಭಯಾನಕ
ಗಹಗಹಿಸುವುದು ನಾಳೆಗಳ ಇಂದೇ ತಂದು.
ಇದಕ್ಕುತ್ತರ ಇದೆಯಾ ನಿನ್ನಲ್ಲಿ ?
ಇದೆಲ್ಲ ಕಂಡೂ

ಸುಮ್ಮನೆ ಒಳಗೆ ಕುದಿಕುದಿದು

ದಹಿಸುತ್ತಾ ಕೂರಲಾರೆ.

ನನ್ನ ಜನರ ಕಿಚ್ಚ ತುಂಬಿಕೊಂಡವ

ನಾನು, ನನ್ನವರು ಬದುಕಬೇಕು

ನಿಜ ಬದುಕ ಬದುಕಬೇಕು.

ಆದ್ದರಿಂದಲೇ ಸುಮ್ಮನೆ ಕೂರುವುದಂತು

ನನ್ನಿಂದ ಖಂಡಿತಾ ಸಾಧ್ಯವಿಲ್ಲ

ಇಂಡಿಯಾ

ಹೇಳಿದ್ದೆನಲ್ಲಾ, ನಾನೊಬ್ಬ ಕಲಿತ ಬಿಸಿರಕ್ತದ ಕಪ್ಪುಹುಡುಗ

ಇಂಥ ಅಸಮಾನತೆಗಳ ಎದುರು ಎದೆ ಎತ್ತಿ

ಸಿಡಿಯುತ್ತ ನಿಂತಿರುವ ಬುಲೆಟ್ ತುಂಬಿದ

ಬಂದೂಕ ನಾನು.

## ಕಲಿಯ ಪ್ರತಿಮೆ

- ಬರಗೂರು ರಾಮಚಂದ್ರಪ್ಪ

ನಮ್ಮೂರಿನ ಕರಿಯ

ಕಂಠದೊಳಗಿನ ಕೆಂಡದುರಿಯಲ್ಲಿ

ಕೊಂಡ ಹಾಯುವ ಗೆಳೆಯ

ಬಯಸುತ್ತಾನೆ ಮಳೆಯ

ಕನಸುತ್ತಾನೆ ಬೆಳೆಯ

ತೆನೆ ತೂಗೀತು! ಮನೆ ಮಾಗೀತು

ಕುಡಿಕೆ ಮಡಿಕೆಗಳಲ್ಲಿ ಒರತೆ ಹುಟ್ಟಿತು ಎಂದು?

ಆಗಸ್ಟ್ ಹದಿನೈದು ಹರಿಯಿತು

ಚಿಂದಿ ಬಾಳಿನ ಬಟ್ಟೆ

ಜನವರಿ ಇಪ್ಪತ್ತಾರು

ಮರೆಯಿತು

ಜನಮನದ ಚಿಟ್ಟೆ

ಏಪ್ರಿಲ್ ಹದಿನಾಲ್ಕು ಮತ್ತೊಂದು ಮೆಲುಕು.

ಅಂಬೇಡ್ಕರ್ ಆತ್ಮವಿಶ್ವಾಸ ಹರಿದದ್ದು

ಕೆಂಡಮಂಡಲ ಮನಸಿನಲ್ಲಿ

ಚಲನೆ ಚಕ್ರ ಜಡತೆಯನ್ನು ಜರೆದದ್ದು

ಕೊಳಕು ಮಂಡಲ ಮೆದುಳಿನಲ್ಲಿ.

ನಮ್ಮ ಕರಿಯ, ಮೇಲೆದ್ದು ಮೆರವಣಿಗೆ ಸೇರಿದ

ಹೋರಾಟ ಹೊತ್ತಿ ಉರಿಯುವಾಗ ಒಳಗೇ ಕರಗಿದ

ಕಾಣಲೇಬೇಕು ಅಂಬೇಡ್ಕರ್ ಎಂದು ಕೊರಗಿದ

ಬೀದಿ ಬೀದಿಯಲ್ಲಿ ಬೆವರು ಬಿತ್ತಿ ಕಂಗಾಲಾಗಿ ತಿರುಗಿದ

ಬಿರುಗಾಳಿಯಲ್ಲಿ ತರಗಲೆ ಹಾರುತ್ತಿರುವಾಗ

ವಿಧಾನಸೌಧದ ಮೆಟ್ಟಿಲು ಬಂದು

ಕೂಗುತ್ತಿರುವ ಕಂಠಗಳು ಸೊಂಟಮುರಿದು

ಬಿಕ್ಕುವ ಮನಸ್ಸು ಕಣ್ಣಿಗೆ ಬಂದು ನೋಡಿದ

ಕರಿಯ ಮೈ ಕಲ್ಲಾಗಿ ನಿಂತಿರುವ



ಅಂಬೇಡ್ಕರ್ ಪ್ರತಿಮೆ ಕಂಡ ಕರಿಯ ಅಂಬೆಗಾಲಿಡುತ್ತ ಹತ್ತಿರ ಬಂದ

ತನಗೇ ಕೋಟು ಬೂಟು ಹಾಕಿ

ಕಲ್ಲು ನಿಲ್ಲಿಸಿದಂತೆ ಕಂಡು

ದೊಪ್ಪನೆ ಮೂರ್ಛೆಗೆ ಸಂದ!

ಅಂಬೇಡ್ಕರ್ ಕೈ ಕೆಳಗಿಳಿಯಲಿಲ್ಲ

ಕರಿಯನ ಮೈ ಸವರಲಿಲ್ಲ!

ಮೂರ್ಛೆಯೊಂದಿಗೆ ಮಾತಾಡಲಿಲ್ಲ

ಯಾಕೆಂದರೆ ಅದು ಸರ್ಕಾರಿ ಪ್ರತಿಮೆ

ಆಚರಣೆಗೆ ಹುಟ್ಟಿದ ಹದಿನಾಲ್ಕರ ಒಲುಮೆ.

## ಹಸಿವು ಅವಮಾನ

**- ವಿ.ಮುನಿವೆಂಕಟಪ್ಪ**

ಬಿರಿದ ನೆಲ ಬೆಂದ ದಿನಗಳು

ಬಂಗಾರ ಬೆಳೆವ ಬೀಡು

ಬಸಿದ ಜಲ ನೊಂದ ಜೀವಗಳು

ಬತ್ತಿದ ನದಿಗಳ ನಾಡು

ಕರುಳು ಕುದಿವ ಕಥೆ

ಕಣ್ಣೊಳಗೆ ಹೊಗೆಯಾಡಿ

ಮನಸು ಮಿಡಿದ ವ್ಯಥೆ

ಮುಖದಲ್ಲಿ ಸುಕ್ಕು ಸುಳಿದಾಡಿ

ಕಾದಕಲ್ಲು ಮುಳ್ಳುಗಳು

ಚುಚ್ಚಿದ ಕಾಲುಗಳು

ನಿಲ್ಲಲು ನೆರಳಿಲ್ಲ

ಮರಗಳಲ್ಲಿ ಎಲೆಗಳಿಲ್ಲ

ಕಾಡು ಮೇಡುಗಳನು ಅಲೆದು

ಭೂತಾಳ ಬುಡದ ಗೆಡ್ಡೆಗಾಗಿ

ಉರಿಬಿಸಿಲಿನಲ್ಲಿ ದಣಿದ ದೇಹಗಳು

ಅಲ್ಲಿ ಗಿಡಗಳಲ್ಲಿ ಹಸಿರಿಲ್ಲ.

ಅಲ್ಲೆ ಕಂಡಿತೊಂದು ಕಲ್ಯಾಣಿ

ತುಂಬಿ ತುಳುಕುವ ಬಾವಿ

ಅದರಲ್ಲಿ ಪ್ರಾಣಿಪಕ್ಷಿಗಳ ಹಿಂಡು

ಕರೆಯಿತೆನ್ನ ಬಾರೋ ಮಗು

ಹಸಿದ ಒಡಲು ಕುದಿವ ಕರುಳು

ಮೊಗದೆ ಒಂದು ಬೊಗಸೆ ನೀರು



## ಸಾಕ್ಷಿ

- ಸಿ. ಬಸವಲಿಂಗಯ್ಯ (ಐಸೂ)

ಬೆಳ್ಳಿ ಮುಖದ ಚೆಲುವೆಯ

ಕಣ್ಣ ನಕ್ಷತ್ರಗಳು ಹೊಳೆದು

ಬಣ್ಣದ ಏಳು ಬಿಲ್ಲುಗಳು

ಬಿಟ್ಟ ಬಾಣ ನಾಟಿ ಎದೆಗೆ

ಮಳೆಯಾಗಿ ಸುರಿಯಿತು

ಹೊಳೆಯಾಗಿ ಹರಿಯಿತು

ಅಲೆಗಳ ಬಡಿತಕೆ

ಡಿ ಬೆಟ್ಟ ಹತ್ತಿ ಬಾನೆತ್ತರ

ನಕ್ಕ ಕಿಲಕಿಲ ಚುಕ್ಕಿಗಳು.

ಮೋಡಗಳ ಮರೆಯಲಿ

ಬಿರುಗಾಳಿಗೆ ಕೊಚ್ಚಿ ಬಂದೆವು

ಕಡಲ ದಡದ ಮೇಲೆ

ಸಂಜೆಗತ್ತಲ ಮಂಜಿನ ಕೊರೆಗೆ

ಮೆತ್ತಗೆ ತಲೆ ಎತ್ತಿದೆ

ಕತ್ತಲಲಿ ಕಾಣೆಯಾದಳು

ಸುಟ್ಟ ಹೃದಯ ಗಾಯಗೊಂಡು

ಹುಡುಕುವುದೆಲ್ಲಿ; ಅವಳ ಕರಿ ನೆರಳಲ್ಲಿ

ಹಾಗೇ ಉಳಿದ ಹಸಿರು ಗಿಡ ಮರ ಬಳ್ಳಿ

ಬೀಸಿ ತಂಪು ಗಾಳಿ ಹೂ ಬಿಟ್ಟಿವೆ

ನಾಳೆಗಳಿಗೆ ನಿತ್ಯ ನೆನಪಿನ ಸಾಕ್ಷಿ.



## ತರಂಗ

ಎಸ್.ಎಮ್.ಜನವಾಡಕರ್

ಲೀನವಾಯಿತು ಮಿತ್ಯ ಸತ್ಯದಲ್ಲಿ

ಹಸನಾಯಿತು ಹಿಂಸೆ ಅಹಿಂಸೆಯಲ್ಲಿ

ಮಾಯವಾಯಿತು ಮಮತೆ ಮರಣದಲ್ಲಿ

ಹರಿಯಿಸು ಶೀಲ ತರಂಗ ವಿಶ್ವದಲ್ಲಿ ||೧||

ಗೌಪ್ಯವಾಯಿತು ಗೌರವ ಕಿರಿಯಲ್ಲಿ

ಭುಗಿಲೆದ್ದಿತು ಕೌದ ಅಂಧತೆಯಲ್ಲಿ

ಮೌಲ್ಯ ಮಾಸಿತು ಕಾಣದೆ ತರುಣರಲ್ಲಿ

ಹರಿಯಿಸು ಶೀಲ ತರಂಗ ವಿಶ್ವದಲ್ಲಿ ||೨||

ನಶಿಸಿ ನಾಗರಿಕತೆ ನವಯುಗದಲ್ಲಿ

ಸುಟ್ಟಿತು ಸಂಸಾರ ಕುಟುಂಬದಲ್ಲಿ

ಕೆಟ್ಟಿತು ನಡಾವಳಿ ಸ್ತ್ರೀಪುರುಷರಲ್ಲಿ

ಹರಿಯಿಸು ಶೀಲ ತರಂಗ ವಿಶ್ವದಲ್ಲಿ ||೩||

ಸುರುವಾಯಿತು ಸುಲಿಗೆ ಸಮಾಜದಲ್ಲಿ

ಕೊಲೆಯಾಯಿತು ಜಗದಿ ಎಲ್ಲೆಡೆಯಲ್ಲಿ

ಬಲೆಯಾಯಿತು ಮೃದುತ್ವ ಕಠೋರದಲ್ಲಿ

ಹರಿಯಿಸು ಶೀಲ ತರಂಗ ವಿಶ್ವದಲ್ಲಿ ||೪||

ಭಕ್ತಿ ಬಯಲಾಯಿತು ಡಾಂಬಿಕದಲ್ಲಿ

ಮುಕ್ತಿ ಮರೆಯಾಯಿತು ಕರ್ಮದಲ್ಲಿ

ಶಕ್ತಿಕುಂದಿತು ಟೊಳ್ಳು ಹರಟೆಯಲ್ಲಿ

ಹರಿಯಿಸು ಶೀಲ ತರಂಗ ವಿಶ್ವದಲ್ಲಿ ||೫||

ಪಾವನ ಹರಿಯಿತು ಹೇಯದಲ್ಲಿ

ನೆಮ್ಮದಿ ಮುಳಗಿತು ಆಸೆಯಲ್ಲಿ

ಶಾಂತಿ ಸಡಿಲಾಯಿತು ಗಳಿಕೆಯಲ್ಲಿ

ಹರಿಯಿಸು ಶೀಲ ತರಂಗ ವಿಶ್ವದಲ್ಲಿ ||೬||

ಶೀಲ ಮುಳುಗಿತು ಅಶ್ಲೀಲದಲ್ಲಿ
ಸಹಕಾರ ಸವೆಯಿತು ಸ್ವಾರ್ಥದಲ್ಲಿ
ಸೌಜನ್ಯ ಕಳೆಯಿತು ಸಮರದಲ್ಲಿ
ಹರಿಯಿಸು ಶೀಲ ತರಂಗ ವಿಶ್ವದಲ್ಲಿ ||೭||

ಚಿಂತನೆ ಉರಿಯಿತು ಚಿಂತೆಯಲ್ಲಿ
ಮಂಥನ ಸೆಳೆಯಿತು ಮದದಲ್ಲಿ
ಸಹನೆ ಮೀರಿತು ಗರ್ವದಲ್ಲಿ
ಹರಿಯಿಸು ಶೀಲ ತರಂಗ ವಿಶ್ವದಲ್ಲಿ ||೮||

## ಯಕ್ಷಪ್ರಶ್ನೆ

**- ಡಿ.ಎಸ್.ವೀರಯ್ಯ ಕಾಡುಕೊತ್ತನಹಳ್ಳಿ**

ನೀಲಾಕಾಶದಿ ತೇಲುವ ಬಿಳಿಯ ಮೋಡಗಳ

ಬಾಗುತ ಬಳುಕುತ ಹರಿಯುವ ನದಿಗಳ

ಸೊಂಯ್ಯನೆ ಬೀಸುವ ತಣ್ಣನೆ ಗಾಳಿಯೆ

ನಿಮಗಿಲ್ಲ ಅಂತರ; ನಮಗೇಕೀ ಅವಾಂತರ

ಎಳೆಯ ಬೀಸುವ ಹೊಳೆಯುವ ಹಿಮವೆ

ಜಂಭದಿ ತುಳುಕುವ ತೆನೆಗಳ ಸಾಲೆ

ಆಗಸದಿ ಹಾರುವ ಹಕ್ಕಿಗಳ ಮಾಲೆ

ನಿಮಗಿಲ್ಲ ಅಂತರ: ನಮಗೇಕೀ ಅವಾಂತರ,

ಹಸಿರ ಸೀರೆ ಹೊದ್ದು ನಿಂತ ಭೂದೇವಿ ತಾಯೆ

ಆಕಾಶದಗಲ ಹರಡಿ ನಿಂತ ಸಾಲು ಸಾಲು ಮರಗಳೆ

ಕತ್ತಲೆಯ ದೂಡಿ ಹೊಳೆವ ಹೊಂಬಿಸಿಲ ಕಿರಣಗಳ

ನಿಮಗಿಲ್ಲ ಅಂತರ; ನಮಗೇಕೀ ಅವಾಂತರ,

ಸುಳಿವ ಕಂಪ ಮಲರನೊತ್ತು ಅರಳಿ ನಿಂತ ಹೂಗಳೆ

ತಣ್ಣನೆಯ ಆಗಸದಲಿ ಝುಗ ಝುಗಿಸುವ ಚುಕ್ಕಿಗಳೆ

ತಂಪುಚೆಲ್ಲಿ ಬೆಳಗುತ್ತಿರುವ ಹುಣ್ಣಿಮೆಯ ಚಂದ್ರಮನೆ

ನಿಮಗಿಲ್ಲ ಅಂತರ; ನಮಗೇಕೀ ಅವಾಂತರ,

ಪ್ರಕೃತಿಯ ಸ್ವಾತಂತ್ರ್ಯ ಹಾಯಾಗಿ ನಿಮಗಿದೆ

ನಿನ್ನದೇ ಸುಪುತ್ರರ ಕಾದಾಟ ಹೆಚ್ಚಿದೆ

ಮೇಲುಕೀಳು ಭಾವನೆ ಭೂಮಿಯಗಲ ಹಬ್ಬಿದೆ.

ನಿಮಗಿಲ್ಲ ಅಂತರ: ನಮಗೇಕೀ ಅವಾಂತರ.



## ಕೂಗು

- ಬಾನಂದೂರು ಕೆಂಪಯ್ಯ

ಭೂ ಬಿಸಿಯ ಕಾವಿಗೆ

ನುಂಗಲಾರದ ಸಾಮಾಜಿಕ ನೋವಿಗೆ

ರಕ್ತ ಬೆಚ್ಚಗಾಗಿ, ಬುಸುಗುಟ್ಟಿ,

ಉಸಿರಾಡುವ ನಮ್ಮ ಕಂಡು :

ಅಂಗಾಂಗ ತನ್ನ ಸತ್ವ ಕಳೆದುಕೊಂಡು

ನಿಂತ ಬರದ ಬರಡು ಭೂಮಿಯಲ್ಲಿ

ಬಾನೆತ್ತರಕ್ಕೆ ಆಸೆ ಚಿಗುರಿಸಿ

ಶೂನ್ಯ ದೃಷ್ಟಿಯಲ್ಲಿ ಅನೇಕ ಭಾವನೆ ಕಟ್ಟಿ

ಬದುಕಿದ್ದೂ ಸತ್ತಂತಿರುವ ನಮ್ಮ ಕಂಡು

ಮುಂಗಾರು ನೀ ಬೇಗ ಬಾ,

ಕರಿಮೋಡಗಳ ಕಲಸಿ, ಡಿಕ್ಕಿ ಹೊಡೆಸಿ

ಸಿಡಿಲು ಬಡಿಸಿ, ಮಿಂಚು ಘಳಾರಿಸಿ

ಸುಂಟರಗಾಳಿ ಸುತ್ತಿಸಿ, ಚಂಡ ಮಾರುತಗಳೆಬ್ಬಿಸಿ

ಖಗೋಳವನ್ನೇ ಡೋಲಾಯಮಾನಮಾಡಿ

ಬಿಸಿಯನ್ನು ತಂಪು ಮಾಡಿ

ಬೋರ್ಗರೆದು ಧಾರಾಕಾರವಾಗಿ ಸುರಿದು

ಬರಿಬಾಯಿ, ತೊರೆ ಕೆರೆ ಬಾವಿ ತುಂಬಿ

ಹರಿದು ಬಾ.

ಕೊಳೆಯಿಂದ ಕರೆಗಟ್ಟಿದ ಭೂ-ಮೈತೊಳೆದು,

ಅಗ್ಗು ತಿಟ್ಟುಗಳ ಸಮಮಾಡಿ

ನೊಂದ ಜೀವಗಳಿಗೆಲ್ಲ ನೆಮ್ಮದಿಯ ಹೊಸ ಬದುಕು

ಕೊಡಲು

ಮುಂಗಾರು ನೀ ಬೇಗ ಬಾ.

## ಅಧೋ ಜಗತ್ತು

**- ಎ.ಕೆ.ಹಂಪಣ್ಣ**

ಅಧೋ ಸಾಮ್ರಾಜ್ಯದಂಚಿಂದ ಧುಮ್ಮಿಕ್ಕುವ ಕಕ್ಕುಲತೆ
ಅಸಾಂಗತ್ಯ ಸಂಗತ ತರ್ಕಗಳವರೆವಿಗೂ ನಿಲುಕುತ್ತಿಲ್ಲ
ಸುಡು ಬಿಸಿಲ ಧಾರೆಯಂತೆ ಗೆಬರು ವಾಸನೆ ಮುಕ್ತವಾಗಿದೆ
ಅಂಗಾತ ಮಲಗಿ ನಿದ್ರಿಸುವಂತಿಲ್ಲ ಒಲೆಯೊಳಗೆ ಬೆಂಕಿ ರುಂಡ
    ನಮಗೋ ಭುವಿಗೆ ಬಂದು ಮೈನೀಡಿ ಸುಖಿಸುವಾಸೆ
    ತದೇಕ ವೇದನೆ ಉತ್ತರುತ್ತರಕ್ಕೆ ನಿರುತ್ತರವೆಂಬಂತೆ
    ಹಾಡಬಲ್ಲವರಾರು ಕತೆ ಕಂತೆಗಳ ಬುಟ್ಟಿ ಹೆಣೆದು ಮುಗಿಲು
    ಮುಸ್ಸಂಜೆಗೆ ಬಿಸಿ ಮಾಡಿ ಹಾಡು ಪಲುಕಿಸುವಾಸೆ
ದಾಪುಗಾಲು ವೇಗದಲಿ ನಡೆವೆವು ಮತ್ತು ಕೇಳುವೆವು
ನೆನಪುಗಳ ದಿಕ್ಕರಿಸಿ ಹೋಗುವುದು ಬೇಡ ಓಂಕಾರ
ನಾದ ಲಯ ಸಮುದ್ರ ತಳದ ಮುತ್ತು ರತ್ನವು ಬೇಡ
ಶತಮಾನಗಳ ಅಂತರದಲ್ಲಿ ದೂರವಿದ್ದವರು ಹತ್ತಿರವಿರಲಿ
    ಬೇಕಾಗಿದೆ ಬಯಲು ತಗ್ಗು ನೆನೆಹಾಕಿ ಒಂದಾಗಿಸುವ
    ಸೂರುಗಳು ನೆರಳುಗಳಾಗುತ್ತಿಲ್ಲ ತೆಂಗು ಗರಿ ಹೊದಿಸಿ
    ಗಂಜಿ ಕುದಿಸಿ ನಾಳೆಗಳ ಸಾಮ್ರಾಜ್ಯದ ಕನಸುಗಾರರಿಗೆ
    ಎವೆ ತೆರೆದು ನಾಲಗೆ ಒಣಗು ಹಾಕಿ ಕಾದು ಕುಳಿತಿದ್ದೇವೆ
ಪಂಚಮ ವೇದವೆಂಬುದು ಪುರಾಣ ಕಿಂಪುರುಷ ಶಾಸ್ತ್ರ

ವಲ್ಲ ಬೆವರು ಬೆವರು ಹರಿಸಿದವರು ಮಣ್ಣು ಮಣ್ಣಾಗಿಸಿ

ಮುತ್ತಾಗಿಸಿ ಪ್ರೀತಿಯಿಲ್ಲದ ಜಗತ್ತಿನೆದುರು ಹಸಿದು ನಿಂತ

ವರು ಕದ ತೆರೆದರೆ ಕತ್ತಲು ಒಳನುಗ್ಗಿ ಆರ್ಭಟಿಸುತ್ತೆ

ಇತ್ಯಥವಾಗದ ಬೇನೆಗಳು ಬೇಗೆಗಳು ಅವು ತಂದಿ

ಡುವ ತಾಪ ಸಂಭ್ರಮಗಳು ಬೆಂಕಿಯಲ್ಲಿದ್ದು ಬೇಯದ

ನೋಯದ ಚಿತ್ರಪಟಗಳು ಚರಿತ್ರೆಯಲ್ಲಿ ಮೂಲೆ ಮುಡುಕು

ತಡಕಿ ಎದೆ ಮೂಲೆಯ ಗೂಡೊಳಗೆ ದುಮ್ಮ್ಮಾನದುರಿ



ಸೀಗೆ ಮೆಳೆಯೊಳಗೆ ಕಳೆದು ಹೋದವರು ತಿರುಗಿ

ಬರಲಾರರು ಗುಡ್ಡದೋರೆಯ ಕಣಿವೆಗಳಲ್ಲಿ ಬಗೆ

ಬಗೆಯ ಭಾವ ಭಂಗಿ ಲಹರಿಯಲ್ಲಿ ಧೂಮಕೇತು

ಉಲ್ಕಾಪಾತ ಉದುರಿ ಬಿತ್ತು ಕೆಟ್ಟ ಶಕುನವೆಂದರು

ಅಳುವ ಮಗುವಿನ ಬೆರಳು ನರಳಿದೆ ತುಟಿ ಅಲು

ಗಿದೆ ನಮ್ಮೆದೆಯ ರಾಗವ ಬೀದಿಗೊಗೆದು ಬೇಲಿ

ಸಂದಿಯಲಿ ತೂರಿ ಬಿಕ್ಕಳಿಸುತ್ತ ಬಡಬಡಿಸುತ್ತ

ತಡಕಾಡುವ ಹುಂಜದಂತೆ ಹುಡುಕಾಟ ಮಿಡುಕಾಟ

ಧಗ ಧಗಿಸುವ ಧರೆಯಲಿ ಧರೆಗೆ ದೊಡ್ಡವರು

ಹಾಡುಗಳಿಲ್ಲ ಪಾಡುಗಳೆಲ್ಲ ನಿಸ್ತಂತು ಜೀವ ನಿಲ್ಲ

ದಾಗಿದದು ಕಾದು ಕೆಂಪಾದ ಸರಪಳಿ ಕೈಲಿಡಿದು ಜಾಲಿಮರದ ನೆರಳಿನಡಿ ದದ್ದು ಬಿದ್ದ ಸುಖ ನಿದ್ದೆ

## ಸಾವಿರಾರು ನವಿಗಳು

**-ಸಿದ್ಧಲಿಂಗಯ್ಯ**

ನೆನ್ನೆ ದಿನ

ನನ್ನ ಜನ

ಬೆಟ್ಟದಂತೆ ಬಂದರು.

ಸಾವಿರಾರು ನವಿಗಳು

ಕಪ್ಪು ಮುಖ ಬೆಳ್ಳಿಗಡ್ಡ ಉರಿಯುತ್ತಿರುವ ಕಣ್ಣುಗಳು

ಹಗಲು ರಾತ್ರಿಗಳನ್ನು ಸೀಳಿ ನಿದ್ದೆಯನ್ನು ಒದ್ದರು

ಕಂಬಳಿಗಳು ಕೊರಗಿದವು ಎದ್ದೇಳುವ ರೊಚ್ಚಿಗೆ

ಭೂಕಂಪನವಾಯಿತು ಅವರು ಕುಣಿದ ಹುಚ್ಚಿಗೆ

ಇರುವೆಯಂತೆ ಹರಿವಸಾಲು ಹುಲಿಸಿಂಹದ ದನಿಗಳು

ಧಿಕ್ಕಾರ ಧಿಕ್ಕಾರ ಅಸಮಾನತೆಗೆ

ಎಂದೆಂದಿಗು ಧಿಕ್ಕಾರ ಶ್ರೀಮಂತರ ಸೊಕ್ಕಿಗೆ

ಲಕ್ಷಾಂತರ ನಾಗರಗಳು ಹುತ್ತಬಿಟ್ಟು ಬಂದಂತೆ

ಊರ ತುಂಬ ಹರಿದರು

ಪಾತಾಳಕೆ ಇಳಿದರು

ಆಕಾಶಕೆ ನೆಗೆದರು

ಬೀದಿಯಲ್ಲಿ ಗಲ್ಲಿಯಲ್ಲಿ

ಬೇಲಿಮೆಳೆಯ ಮರೆಗಳಲ್ಲಿ

ಯಜಮಾನರ ಹಟ್ಟಿಯಲ್ಲಿ ಧಣಿ ಕೂರುವ ಪಟ್ಟದಲ್ಲಿ

ಎಲ್ಲೆಲ್ಲೂ ನನ್ನಜನ ನೀರಿನಂತೆ ನಿಂತರು.

ಇವರು ಬಾಯಿ ಬಿದ್ದೊಡನೆ

ಅವರ ಬಾಯಿ ಕಟ್ಟಿತು

ಇವರ ಕಂಠ ಕೇಳಿದೊಡನೆ

ಅವರ ದನಿ ಇಂಗಿತು

ಕ್ರಾಂತಿಯ ಬಿರುಗಾಳಿಯಲ್ಲಿ ಕೈಬೀಸಿದ ನನ್ನ ಜನ

ಛಡಿಯ ಏಟು ಹೊಡೆದವರ

ಕುತ್ತಿಗೆಗಳ ಹಿಡಿದರು.



ಪೋಲಿಸರ ದೊಣ್ಣೆಗಳು ಏಜೆಂಟರ ಕತ್ತಿಗಳು

ವೇದಶಾಸ್ತ್ರ ಪುರಾಣ ಬಂದೂಕದ ಗುಡಾಣ

ತರಗೆಲೆ ಕಸಕಡ್ಡಿಯಾಗಿ

ತೇಲಿ ತೇಲಿ ಹರಿದವು

ಹೋರಾಟದ ಸಾಗರಕ್ಕೆ

ಸಾವಿರಾರು ನದಿಗಳು,

## ಬರುತಿಹವು ನಾವು

**- ಕೆ.ರಾಮಯ್ಯ**

ಬರುತಿಹೆವು ನಾವು ಬರುತಿಹೆವು

ಬರುತಿಹೆವು ನಾವು ಬರುತಿಹೆವು

ಯುಗಯುಗಗಳಿಂದ ನೀವ್ ತುಳಿದ ಜನಗಳ

ಕೊರಳ ದನಿಗಳು ನಾವು ಬರುತಿಹೆವು॥

ಅಸಮಾನತೆಯನು ಸುಟ್ಟು ಬಿಡಲು ಬುಗಿಲೆದ್ದ

ಬೆಂಕಿಯ ಜ್ವಾಲೆಗಳು

ಬೆಲ್ಲಿ ಗ್ರಾಮದಲ್ಲಿ ನೀವು ಸುಟ್ಟ ಬಡಜನರ

ಬೂದಿಯಿಂದೆದ್ದವರು

ಪಂತ ನಗರದಲ್ಲಿ ಕೂಲಿ ಜನಗಳು ಬಸಿದ ನೆತ್ತರ ಬಾಂಬುಗಳಾಗಿ

ಬೆಳೆದು ಬಂದಿಹ ಧೀರರು ಬರುತಿಹೆವು॥

ಹಸಿದ ಜನಗಳ ಬೆವರು ಮೈಗಳು

ನೊಂದವರೆದೆಯ ನೋವಿನ ಕೂಗು

ನಮ್ಮನು ನಡೆಸುವ ಸಿದ್ಧಾಂತ

ಕೂಲಿ ಜನಗಳ ಗೋಳು ತೊಡೆಯಲು

ನಡೆದಿದೆ ನಮ್ಮ ಹೋರಾಟ ಬರುತಿಹೆವು||

ಧರ್ಮ ಗುರುಗಳ ಮಠಾಧಿಪತಿಗಳ ದಗಲು ಬಾಜಿತನ

ಬೀದಿಗೆಳೆಯಲು

ಖಾದಿ ಕವಿಗಳ ತಾಯಿಗಂಡರ ಬಂಡತನವನು ಬಯಲು

ಮಾಡುತ ಬರುತಿಹೆವು॥

ಭಾಷೆ ಧರ್ಮದ ವಿಷದ ಬೇಲಿಯ ಕಡಿದು ಕೀಳುತ

ಗಾಳಿಗೆ ಚಲ್ಲುತ

ಜಾತಿಮತಗಳ ಆಚೆಗೆ ನಿಂತ ಬಡವರೆಲ್ಲರ

ಒಂದು ಮಾಡುತ ಬರುತಿಹೆವು॥



ಸಿರಿವಂತರ ಸೊಕ್ಕಿನ ಭದ್ರಕೋಟೆಗೆ

ಬರಸಿಡಿಲಾಗಿ ಬಂದೆವು ನಾವು

ಸುಲಿಗೆಕೋರರ ಒಡಲ ಸೀಳಲು ||ಬರುತಿಹೆವು||

ಕೂಲಿ ರಾಜ್ಯದ ಕನಸುಗಳೊತ್ತು

ಹೊಸ ನಾಡೊಂದರ ಬಯಕೆಗಳೊತ್ತು

ಕೆಂಪು ಮಣ್ಣಿನಲಿ ಒಕ್ಕಲೊಡಲು

ಬರುತಿರುವ ಬಂಡಾಯಗಾರರು ||ಬರುತಿಹೆವು||

## ನಾನೊಂದು ಮರವಾಗಿದ್ದರೆ

**- ಮೂಡ್ನಾಕೂಡು ಚಿನ್ನಸ್ವಾಮಿ**

ನಾನೊಂದು ಮರವಾಗಿದ್ದರೆ

ಹಕ್ಕಿಗೂಡು ಕಟ್ಟುವ ಮುನ್ನ

ಕೇಳುತ್ತಿರಲಿಲ್ಲ ನೀನು ಯಾವ ಕುಲ

ಬಿಸಿಲು ನನ್ನ ಅಪ್ಪಿಕೊಂಡಾಗ

ನೆರಳಿಗಾಗುತ್ತಿರಲಿಲ್ಲ ಮೈಲಿಗೆ

ತಂಬೆರಲ ಕೂಡ ಎಲೆಗಳ ಸ್ನೇಹ

ಮಧುರವಾಗಿರುತ್ತಿತ್ತು.

ಮಳೆ ಹನಿಗಳು ನಾನು ಶ್ವಪಚನೆಂದು

ಹಿಂದೆ ಸರಿಯುತ್ತಿರಲಿಲ್ಲ ನಾನು

ಬೇರೂರಿ ಕುಡಿಯಿಡುತ್ತಿರುವಾಗ ಭೂ ದೇವಿ

ಮಡಿಮಡಿ ಎಂದು ಓಡುತ್ತಿರಲಿಲ್ಲ

ಪವಿತ್ರ ಗೋವು ನನ್ನ ತೊಗಟೆಗೆ ತನ್ನ ಮೈ ಉಜ್ಜಿ

ತುರಿಕೆ ತೀರಿಸಿಕೊಳ್ಳುವಾಗ ಅದರ ಅಂಗಾಂಗಗಳಲ್ಲಿ

ಅಡರಿಕೊಂಡ ಮುಕ್ಕೋಟಿ ದೇವತೆಗಳು

ನನ್ನನ್ನು ಮುಟ್ಟಿಸಿಕೊಳ್ಳುತ್ತಿದ್ದರು.

ಯಾರಿಗೆ ಗೊತ್ತು

ನನ್ನ ಅಂತ್ಯಕಾಲದಲ್ಲಿ

ಕಡಿದು ತುಂಡಾದ ಒಣಸೀಳೊಂದು

ಹೋಮಾಗ್ನಿಯಲ್ಲಿ ಬೆಂದು

ಪಾವನವಾಗುತ್ತಿತ್ತೇನೊ

ಅಥವಾ

ಸತ್ಪುರುಷನೊಬ್ಬನ ಹೆಣಕ್ಕೆ ಚಟ್ಟವಾಗಿ

ನಾಲ್ಕು ಜನ ಸಜ್ಜನರ ಹೆಗಲೇರಬಹುದಿತ್ತೆ?

## ಒಂದು ದಹನದ ಕಥೆ

**- ಕೆ.ಜಿ.ಸಿದ್ದಯ್ಯ**

ಈ ನಾಡ ಮಣ್ಣಿನಲ್ಲಿ

ಮಣ್ಣಾದ ಜನಗಳ ಕತೆಯ

ಈ ನಾಡ ಮಣ್ಣಿನಲ್ಲಿ

ಹೂವಾಗಿ ಅರಳಿದ ಜನರ

ಹಣ್ಣಿನ ಗಿಡಗಳಲ್ಲಿ

ಹಣ್ಣಾಗಿ ಉದುರಿದೋರ

ಕತೆಯನು ಹೇಳುತೀವಿ

ಕಿವಿಗೊಟ್ಟು ಕೇಳಿರಣ್ಣ

ನೋವಿನ ರಾಗವನ್ನು.

ಒಂದು :

ಭಾರತ ದೇಶದಲ್ಲಿ

ಬಿಹಾರ ರಾಜ್ಯದ

ಬಿಲ್ಲಿಯ ಗ್ರಾಮದಲ್ಲಿ

ಹನ್ನೊಂದು ಜನ ದಲಿತರನ್ನು

ನಿನ್ನಣ್ಣ ತಮ್ಮಂದಿರನ್ನು

ಹಾಡು ಹಗಲಿನಲ್ಲೇ

ಸುಟ್ಟು ಬೂದಿ ಮಾಡಿದರಲ್ಲೋ......

ಎರಡು :

ಕರ್ನಾಟಕ ರಾಜ್ಯದಲ್ಲಿ

ತುಮಕೂರು ಜಿಲ್ಲೆಯ

ದಾಸನ ಪುರದಲ್ಲಿ

ಚಿಕ್ಕ ತಿಮ್ಮಯ್ಯನೆಂಬ

ನನ್ನಣ್ಣ ದಲಿತನನ್ನು

ಸಾಲದ ಮಾತಿಗಾಗಿ

ಹೀನ ಮಾನ ಬಡಿದರಲ್ಲೋ......

ಏಟು ತಿಂದು ನೊಂದ ದಲಿತ

ಪೋಲಿಸಿಗೆ ದೂರು ಕೊಡಲು

ಅವಮಾನ ಆಯಿತೆಂದು

ದೂರ್ತ ಗೌಡರು ಸೇರಿ



ಮಾರನೆ ದಿವಸ ರಾತ್ರಿ

ಕಲ್ಲು ನೀರು ಕರಗೋವತ್ತು

ದಲಿತನ ಗುಡಿಸಲು ನುಗ್ಗಿ

ನಾಯಂಗೆ ಎಳೆದು ತಂದು

ಅಲ್ಲೊಂದು ಕಣದಲಿ ಹಾಕಿ ತುಂಡು

ತುಂಡು ಮಾಡಿದರಲ್ಲೋ......

ರಕ್ತವ ಚೆಲ್ಲಿದರಲ್ಲೋ.........

ಗುಡಿಸಲಿನಲಿ ಗುಡ್ಡೆ ಹಾಕಿ

ಸುಟ್ಟು ಬೂದಿ ಮಾಡಿದರಲ್ಲೋ........

ಈ ಕರಾಳ ಗಳಿಗೆಯಲ್ಲಿ

ಮೋಡಗಳು ಚದುರದೆ ನಿಂತು

ಕಪ್ಪು ಕಪ್ಪಾಗಿದೆ

ಮೂಡಲ ಸೀಮೆಯ

ಹದ್ದುಗಳು ಹಾರಾಡದಿದ್ರೆ

ಗಾಳಿಯ ಸುಳಿಯದೆ ನಿಂತು

ಬೂದಿ ತೂರಾಡದಿದ್ರೆ

ನನ್ನ ಮನಸು ನಗುತ್ತಿತ್ತಲೋ.........

ಚಿಕ್ಕ ತಿಮ್ಮಯ್ಯ ಉಸಿರು

ನನ್ನತ್ತಿಗೆ ಜಯಮ್ಮನಿಗೆ

ಹಣೆಯಲ್ಲಿ ಕುಂಕುಮವಿಲ್ಲ

ಕೈಯಲ್ಲಿ ಬಳೆಗಳಿಲ್ಲ

ಭೂಮಿಯ ತಬ್ಬಿ ಕೊಂಡವಳ

ಆಕಾಶವ ಕವುಚಿ ಕೊಂಡವಳ

ಕನಸಿನ ಊರಿನೊಳಗೆ

ಅದ್ದೂರಿ ಮಾರಿ ಹಬ್ಬ

ಗಗನದಲಿ ತಮಟೆಯ ಸದ್ದು

ಊರಿನಲಿ ಗೌಡರ ಗತ್ತು

ಕೋಣದ ಮೆರವಣಿಗೆ

ಮಾರಿಯ ಗುಡಿ ಮುಂದೆ

ಕೋಣನ ಬಾಯಿಗೆ ಕೋಣನ ಕಾಲು

ಭೂಮಿಯ ಗುಡಿಗಿದಂಗಾಗಿ

ಜಯಮ್ಮ ಎದ್ದಳಲ್ಲೋ.........

ಮುಗ್ಗರಿಸಿ ಬಿದ್ದಳಲ್ಲೊ.........



ಒತ್ತಾರೆ ಅವುಳು ಎದ್ದು

ತಾಲಿಯ ನೆನೆದು ನೆನೆದು

ತಲೆಯಕ್ಕೆದರಿಕೊಂಡು

ಕಣ್ಣ ಕೆಂಡಗಳ ಎರಚಿ

ಗಂಡನ ಕುಡುಗೋಲಿಡಿದು

ಕೂಲಿಗೆ ಹೊಂಟಾಳು

ಉಳ್ಳವರ ಬೆಳೆಯಲ್ಲಿ ಕೂತು

ಕರಗಿದ ಕಣ್ಣುಗಳ

ಕಗ್ಗತ್ತಲೆ ಕಿಂಡಿಯಿಂದ

ರಕ್ತವ ಸುರಿಸುತ್ತಾಳೇ.........

ಈ ನಾಡ ಮಣ್ಣಿನಲ್ಲಿ

ಮಣ್ಣಾದ ನನ್ನ ಜನರ

ಸುಟ್ಟು ಬೂದಿ ಮಾಡುವಾಗ

ರುಂಡಗಳ ಚಂಡಾಡುವಾಗ

ನಮ್ಮ ರಕ್ತ ಕುದಿಯುತ್ತೈತೆ

ರಕ್ತದ ಒಂದೊಂದು ಕಣವು

ಅಣುವಾಗಿ ಸಿಡಿಯುತ್ತೈತೆ

ಈ ನಾಡ ಮಣ್ಣಿನಲ್ಲಿ

ಮಣ್ಣಾದ ನನ್ನ ಜನರು

ಸಂಘಟಿತರಾಗಬೇಕು

ದಲಿತ ಸಂಘವ ಸೇರಿ

ಗುಡುಗಾಗಿ ಗುಡುಗಬೇಕು

ಸಿಡಿಲಾಗಿ ಸಿಡಿಯಬೇಕು

ಸುರಿ ಮಳೆಯು ಸುರಿಯುವಾಗ

ನಾವೆಲ್ಲ ಕುಣಿಯಬೇಕು

ಸುರಿ ಮಳೆಯು ಸುರಿಯುವಾಗ

ಮಾನವರಾಗಬೇಕು

## ನನ್ನ ಹಾಡು

**ಎಸ್.ಪಿ.ಸುಳ್ಳದ್**

ನನ್ನ ಹಾಡು
ಬುದ್ಧ, ಬಸವ-ಅಂಬೇಡ್ಕರ್
ಹಾದಿಯಲ್ಲಿ ನಡೆಯಲು ಹೇಳುತ್ತದೆ
ಶಿಕ್ಷಣ ಕಲಿಯಲು, ಸಂಘಟನೆ ಮಾಡಲು
ಹೋರಾಟಕ್ಕಿಳಿಯಲು ಪ್ರಚೋದಿಸುತ್ತದೆ
ನನ್ನ ಹಾಡು ಸಂಘರ್ಷ ಮಾಡಲು ಹುರಿದುಂಬಿಸುತ್ತದೆ
ನನ್ನ ಹಾಡು.......

ಗೊಳ್ಳು ಪುರಾಣ, ಸುಳ್ಳು ಶಾಸ್ತ್ರ
ಮೋಸ, ವಂಚನೆ, ಬಿಟ್ಟು ಬರಲು ಹೇಳುತ್ತದೆ
ದಮನ, ದಬ್ಬಾಳಿಕೆ ಎದುರಿಸಲು ಕಲಿಸುತ್ತದೆ
ನನ್ನ ಹಾಡು ವೈಚಾರಿಕ ಕ್ರಾಂತಿಗೆ ಕರೆಕೊಡುತ್ತದೆ
ನನ್ನ ಹಾಡು........

ದೇವದಾಸಿಯ ನನ್ನ ಅಕ್ಕ-ತಂಗಿಯರಿಗೆ
ಸಾವಿತ್ರಿಬಾಯಿ ಫುಲೆ , ರಮಾಬಾಯಿ ಅಂಬೇಡ್ಕರ್
ಕಿರಣಬೇಡಿ, ಮಾಯಾವತಿ ಮಹಾತಾಯಿಯರ
ಆದರ್ಶಗಳ ಅನುಕರಣೆ ಮಾಡಲು ಹೇಳುತ್ತದೆ
ನನ್ನ ಹಾಡು ಮಾನಸಿಕವಾಗಿ ಧೈರ್ಯ ಕಲಿಸುತ್ತದೆ
ನನ್ನ ಹಾಡು........

ರೈತ, ಕೂಲಿಕಾರ್ಮಿಕರ ಸಮಸ್ಯೆಗಳಿಗೆ
ಸ್ಪಂದಿಸುತ್ತದೆ. ಬೆಂಬಲಿಸುತ್ತದೆ, ಪರಿಹಾರ ನೀಡುತ್ತದೆ
ಮನೆಯಲ್ಲಿ, ಗಣಿಯಲ್ಲಿ, ಹೊಲಗದ್ದೆಗಳಲ್ಲಿ
ದುಡಿ, ದುಡಿದು, ಸತ್ತು ಹೋಗುವವರ ಕುರಿತು
ಸಂಘಟಿತರಾಗಿ ಸಂಘರ್ಷ ಮಾಡಲು ಹೇಳುತ್ತದೆ
ನನ್ನ ಹಾಡು..... ಕ್ರಾಂತಿ ಮಾಡಲು ಕರೆಕೊಡುತ್ತದೆ
ನನ್ನ ಹಾಡು.......



ಶೋಷಣೆ, ಭ್ರಷ್ಟಾಚಾರವ
ಬುಡಸಹಿತ ಕಿತ್ತಲು ಕೂಗಿ ಹೇಳುತ್ತದೆ.
ಜಾತಿ-ಮತ ಆಚರಿಸುವವರಿಗೆ
ಬಗ್ಗು ಬಡೆಯಲು ಬೋಧಿಸುತ್ತದೆ
ನನ್ನ ಹಾಡು ಸ್ವಾಭಿಮಾನದ ಪಾಠ
ಕಲಿಸುತ್ತದೆ, ದೇಶಭಕ್ತಿ ಹುಟ್ಟಿಸುತ್ತದೆ
ನನ್ನ ಹಾಡು.....

## ವೀರ ಯೋಧರು

**- ಶಂಭುಲಿಂಗ ವಾಲದೊಡ್ಡಿ**

ತಾಯಿ ಮಣ್ಣಿಗಾಗಿ ತಮ್ಮ ಪ್ರಾಣ ಕೊಟ್ಟ ಯೋಧರೆ
ಕೋಟಿ ಕೋಟಿ ವಂದನೆ ನಿಮಗೆ ||ಪಲ್ಲವಿ|

ಗಡಿ ರೇಖೆಯಲ್ಲಿ ಅಡ್ಡಗೋಡೆಯಾಗಿ ನಿಂತವರೇ
ಗುಡುಗಾಗಿ ಗುಡುಗಿದವರೇ
ಸಿಡಿಲಾಗಿ ಸಿಡಿದವರೇ
ಗುಂಡೇಟಿಗೆ ಎದೆಯನೊಡ್ಡಿದ ಓ ನಮ್ಮ ಯೋಧರೇ
ದೇಶ ರಕ್ಷಣೆಗಾಗಿ ತಮ್ಮ ಪ್ರಾಣಾರ್ಪಣೆ ಮಾಡಿದವರೇ
ಕೋಟಿ ಕೋಟಿ ವಂದನೆ ನಿಮಗೆ
ವೀರ ಯೋಧರೆ ನಿಮಗಭಿನಂದನೆ ||ತಾಯಿ|| || ೧||

ಅಡಿಗಡಿಗೆ ಅಂಜದವರೇ, ಜೀವ ಹಂಗು ತೊರೆದವರೇ
ನುಡಿದಂತೆ ನಡೆದವರೇ, ಓ ನಮ್ಮ ಯೋಧರೇ
ಭಂಡ ಶತ್ರುಗಳ ರುಂಡ ಚಂಡಾಡಿದ ವೀರರೇ
ದೇಶ ರಕ್ಷಣೆಗಾಗಿ ತಮ್ಮ ಪ್ರಾಣಾರ್ಪಣೆ ಮಾಡಿದವರೇ
ಕೋಟಿ ಕೋಟಿ ವಂದನೆ ನಿಮಗೆ
ವೀರ ಯೋಧರೆ ನಿಮಗಭಿನಂದನೆ ||ತಾಯಿ|| || ೨||

ಮಳೆಯನ್ನದೆ ಚಳಿಯನ್ನದೆ ಹೋರಾಡಿದ ವೀರರೇ
ಚಳಿಯಲ್ಲಿ ಬಿಸಿಲಿನಲ್ಲಿ ಹಿಮವಾಗಿ ಕರಗಿದವರೇ ಕಳ್ಳ,

ಬಳ್ಳಿಗಳ ಬಿಟ್ಟು ಕಾರ್ಗಿಲಿಗೆ ಹೋದವರೇ

ದೇಶ ರಕ್ಷಣೆಗಾಗಿ ತಮ್ಮ ಪ್ರಾಣಾರ್ಪಣೆ ಮಾಡಿದವರೇ

ಕೋಟಿ ಕೋಟಿ ವಂದನೆ ನಿಮಗೆ

ವೀರ ಯೋಧರೆ ನಿಮಗಭಿನಂದನೆ ॥ತಾಯಿ॥ ॥ ೩॥



## ಕಣಗಿಲೆಗಿಡ

**ಎಂ. ವೆಂಕಟಸ್ವಾಮಿ**

ಅಪ್ಪನು ಸತ್ತು

ಅಂದಿಗೆ ಒಂದು ವರುಷ ಕಳೆದಿತ್ತು

ಅವನ ಮೇಲೆ ನೆಟ್ಟ

ಕಣಗಿಲೆಗಿಡ ಎಲೆಹತ್ತು ತೊಟ್ಟಿತ್ತು

ಅಷ್ಟ ದಿಕ್ಕುಗಳು ಸುತ್ತಿ ಬಂದ

ಎಡ ಅವನ ಮುಂದಿತ್ತು.

ಭೂಮಿ ಆಕಾರದ ಮುದ್ದೆ ಅನ್ನ

ಉಪ್ಪುಕಾರ ಸವರಿದ ಬೇಳೆ, ನುಗ್ಗೆ ಹೋಳು

ಅವನಿಗೆ ಪ್ರಿಯವಾದ ಮಾಂಸ,

ಶರಾಬು ಕೂಡ ಅಲ್ಲಿತ್ತು.

ಅವರ ಬರುವಿಗಾಗಿ ಕಾದೆವು ದೂರದಲ್ಲಿ

ಕಪ್ಪುಕಾಗೆ ಅಪ್ಪನೆ ಸರಿ, ಹಾರಿ ಬಂದು

ಕುಕ್ಕಿತು ಕೊಕ್ಕಿನಲ್ಲಿ

ಎಂತಹ ತೃಪ್ತಿ ಮುಖದಲ್ಲಿ

ಗುಡುಗು ಸಿಡಿಲು ಮಿಂಚು

ಮಳೆ ಸುರಿಯಿತು ಧಾರಾಕಾರವಾಗಿ :

ಭೂಮಿ ತಣಿಯುತ್ತಿತ್ತು ಆ ಗಿಡ

ಹತ್ತು ಎಲೆಗಳ ಪುಟ್ಟಗಿಡ ಏಕೋ ಏನೋ

ನನ್ನೊಳಗೆ ಇಳಿಯುತ್ತಿತ್ತು ; ಒಳಗೊಳಗೆ

ಆಳವಾಗಿ ಬೆಳೆಯುತ್ತಿತ್ತು.



## ಸಾಗರಕ ಸವಾಲು

**ಎಸ್.ಶಿವಮಲ್ಲು**

ಈ ಧರೆಯೊಳೆಸಗೆ ಸಮರಿನ್ನಾರು ಇಲ್ಲೆನುತ

ಬಲುಸೊಕ್ಕಿ ಮೊರೆಯುತ್ತ ಮೆರೆಯುತಿಹ ಹುಲು ಜಲಧಿ

ನರನ ಮನಕಿಂತ ನೀನಾವ ಪರಿಯಲಿ ಮಿಗಿಲು

ಓಟದಲೆ ಬಲೆಯಲೆ ಆಳಬಿತ್ತರಗಳೆಲೆ?

ಅರೆಚಣದಿ ಮೂಜಗವ ಸುತ್ತುವುದೊ ನರನಮನ

ಕಲ್ಪನೆಯ ಬಾಯ್ದೆರೆಯೆ ನುಂಗುವುದು ವಿಶ್ವವನೆ,

ನಳಮಕರ ನಕ್ರ ವಿಷ ಜಂತುಗಳನುದರಲಿ

ಹೊಂದಿ ನೀ ದುರುಳತನದಿಂದ ಮೆರೆದಿರುವೆಯಾ

ಮನುಜ ಮನದೊಳಗಿರಲು ದುರುಳ ಅರಿಷಡ್ವರ್ಗ

ನಿನಗದರ ದುರುಳತನ ಮೀರಲಾಗುವುದೆ?

ವಿಜ್ಞಾನಿ ಮನಮುನಿಯೆ ನಿನ್ನ ಪುಂಡಾಟಕ್ಕೆ

ಸಂಕೋಲೆಯನ್ನಿಕ್ಕಿ ತನ್ನ ಆಳಾಗಿಸದೆ

ಬಿಡನು ನಿನ್ನನ್ನು, ಎಚ್ಚರಿಕೆ ಜೋಕೆ!



## ವಾಸ್ತವ

ಮೊನ್ನೆ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ

ಒಂದಜ್ಜಿಯನು

ನಾಯಿಗಳು ತಿಂದು ತೇಗಿದ್ದವಂತೆ

ಇಲ್ಲಾ ಇಲ್ಲಾ

ತಿಂದಿರಬಹುದು, ತೇಗಿರಲಾರವು

ಯಾಕೆಂದರೆ

ಆ ಅಜ್ಜಿ ಬಿಕ್ಷುಕಿಯಂತೆ

ಬಿಕ್ಷುಕರ ಮೈಯರಕ್ತ ಮಾಂಸಗಳು

ಚಳಿ ಗಾಳಿ ಮಳೆ

ಬಿಸಿಲಾಗಿರುತ್ತವೆ.

ಮೂಳೆ

ಚಕ್ಕಳ ಮುಲ ಮುಲ ನಾಟ್ಯವಾಡುತ್ತಿರುತ್ತವೆ

ಪಾಪ ನಾಯಿಗಳೂ

ಮೂಳೆ ಚಕ್ಕಳಗಳನ್ನಾ ನುಂಗಲಾರವು

ನಾಯಿ ಒಡಲುತುಂಬುವುದಾದರೂ ಹೇಗೆ?

ಇನ್ನುತೇಗುವುದಾದರೂ ಹೇಗೆ?

ನನಗ್ಯಾಕೋ ಪದೇ ಪದೇಕೆಟ್ಟ ಕನಸು

ಆ ಅಜ್ಜಿ ಯಾರೋ ಅಲ್ಲ

ಭಾರತಾಂಬೆಯಿರಬೇಕೆಂದು

ಮನುಷ್ಯರು ನಾಯಿ ಪಾಲಾಗುವುದಾ?

ನಾಯಿಗಳು ರಣ ಹದ್ದುಗಳ ಪಾಲಾಗುವುದಾ?

ಇದು ನಿರಂತರವಾಗಬಹುದಾ?

ಏಕೆಂದರೆ

ಮೊನ್ನೆ ಭೂಪಾಲಿನ ಹೆಮ್ಮಾರಿ ಎಚ್ಚರಿಕೆ

ಗಂಟೆ ಬಾರಿಸಿದ್ದಾಳೆ

ಗಾಳಿ ವಿಷವಾಗುತ್ತದೆ ಎಂದು

ಜೀವರಾಶಿಕಾಣೆಯಾಗುತ್ತದೆ ಎಂದು

ಯಾಕೋ ನನ್ನ ಮುಖ ಸ್ಮಶಾನ ಮೌನವಾಗುತ್ತಿದೆ

ಯಾಕೋ ನನ್ನುಸಿರು ಶೋಕ ಗೀತೆ ಹಾಡುತ್ತಿದೆ

ಮನುಷ್ಯರು ನಾಯಿ ಪಾಲಾಗುತ್ತಿರುವ

ನಾಯಿಗಳಿಗಾಗಿ ರಣಹದ್ದುಗಳು ಕಾಯುತ್ತಿರುವ

ಈ ಕರಾಳ ಕಥೆಗೆ ಮುನ್ನುಡಿಯಾಗಿರಬಹುದಾ

ಈ ನನ್ನದೆಯ ತಳಮಳ....?

## ದಲಿತ ಮಕ್ಕಳ ಹಾಡು

**- ಅರವಿಂದ ಮಾಲಗತ್ತಿ**

ಹೊಡಿಯ ಬ್ಯಾಡೆ ಯವ್ವ ನನ್ನ
ಕಡಿಯಲಾರೆ ಯಾರನ್ನ
ಕೇಳಿದ್ದ ಕೊಡುವೆಯಾದರೆ
ಮುಟ್ಟಲಾರೆನೆ ಯಾರನ್ನ

ತಿಪ್ಪೆ ತಿಪ್ಪೆ ತಿರುಗಲಾರೆ
ಹಾಲ ಮೊಸರು ಬೇಡಲಾರೆ
ಹುಳ್ಳಾನುಚ್ಚು ಕೊಡುವೆಯಾದರೆ
ಕುಡಿದು ಮಾತ ಕೇಳುವೆ

ಬೆಳ್ಳಿಯುಡದಾರ ಬೇಡಲಾರೆ
ಜರದ ಅಂಗಿ ಕೇಳಲಾರೆ
ಚೊಣ್ಣಿಯೊಂದು ತಂದು ಕೊಟ್ಟರೆ
ಗೆಣ್ಣನಾಗಿ ತೊಟ್ಟು ಬರುವೆ

ಬೆರಳನೆಂದು ಚೀಪಲಾರೆ
ಛಾಪಾ-ಗುಟ್ಟಲಿ ಆಯಲಾರೆ
ಹಲಗೆ ಬಳಪ ಕೊಡುವೆಯಾದರೆ
ಜಾಣನಾಗಿ ಬರೆದು ತೋರುವೆ

ಹೊಲೆಯ ಹೊಲೆಯ ಹೊಲೆಯನೆಂದು

ಹೊಡೆವ ಛಡಿಯು ಎದುರು ಹಿಡಿದು

ಕಲಿಸು ಶಾಲೆಗೆ ಕಳಿಸದಿದ್ದರೆ

ಗಂಡನಾಗುವೆ ಶಾರೆಗಮ್ಮ

ಮಗನ ಪ್ರಳಯ ಮಾತಕೇಳಿ

ಕಣ್ಣ ತುಂಬ ನೀರ ತಂದು

ತೋಳತೆಕ್ಕೆಯಲಿ ಬಿಗಿದು ಅಪ್ಪಿ

ತಾಯಿ ಹೇಳಿದಳೇ

ಬರಿದು ಕೈ ಬಿಳಿದು ಮನ

ಯಾರ ಮುಂದೆ ಹೇಳಲಿ ?

ಮನಕೆ ಬಂದಂತಿರುವು ಎನದೆ

ಬಿಕ್ಕಿ ಬಿಕ್ಕಿ ಅತ್ತಳು.

**ಬೇಡಕಿಯರು**

**- ಸುಕನ್ಯಾ ಚಿ.**

ನಾವು ಬೇಡತಿಯರು ಸ್ವಾಮಿ

ಬೇಡತಿಯರು,

ಗುಡ್ಡಗಾಡಿನಿಂದ

ಹರಿದು ಬಂದ ನೀರೆಯರು,

ದಾರಿ ಬಿಡಿ

ತೀರ ಸೇರುತ್ತೇವೆ.

ನಿಮ್ಮ ಹರಿಗೋಲಿಗೆ

ಹುಟ್ಟು ಹಾಕಿ ದಣಿದಿದ್ದೇವೆ,

ಇನ್ನು ಮಟ್ಟ ಹಾಕುವುದೊಂದು

ಬಾಕಿ ಇದೆ.

ನಾವು ವೇಶ್ಯೆಯರು,

ನಿಮ್ಮ ದಾಸಿಯರು "ಆಗಿದ್ದ ಕಾಲ"

ಈಗಿಲ್ಲ ಎನ್ನುವಂತಿಲ್ಲ

ಆದರೂ ಅಲ್ಲಲ್ಲಿ

ಕಾಸುತ್ತಿದ್ದೇವೆ.

ನಿಮ್ಮ ಬುರುಡೆಗೆ

ಬಿಸಿನೀರು.

ಗಿರಿಬಾಲೆಯರು ನಾವು

ಕಪ್ಪಿದ್ದರೂ ಕಸ್ತೂರಿ,

ಶಾಪಗ್ರಸ್ತ ಲಕ್ಷ್ಮಿಯರು

ಕಣ್ಣು ಕಮಲ

ಕನಸು ಅಮಲ

ಮನಸು ಮುಗ್ಧ

ಅದಕ್ಕೇ ಈ ತನಕ

ಯಾರೋ ಆಗಿದ್ದವರು

ಈಗ ನಾವು ವಿದಗ್ಧೆಯರು,

ಮಾತಿನ ಈಟಿ ಭಲ್ಲೆಗಳ

ಎಸೆಯಬಲ್ಲವರು,

ಸಮಯ ಬಂದರೆ

ಬಿಲ್ಲು ಹಿಡಿಯಬಲ್ಲವರು

ಬೇಟೆ ಆಡಬಲ್ಲವರು

ನಿಮಗಿಂತ ಗೋಣೆತ್ತರ

ಬೆಳೆಯಬಲ್ಲವರು

ಇಂದಲ್ಲ ನಾಳೆ

ಆಗ ಬಲ್ಲೆವು ನಿಮ್ಮ

ಒಡತಿಯರು

ನೆನಪಿರಲಿ ನಾವು

ಬೇಡತಿಯರು.

## ಬಲ

**- ಆಲೂರು ದೊಡ್ಡನಿಂಗಪ್ಪ**

ಮಾರಿ ಮುಂದೆ ಕತ್ತರಿಸಿ ಹಾಕಿದ
ಮರಿಯ ಮುಂಡದಂತೆ
ಹಲುಬುತ್ತಿದ್ದವು ನನ್ನ ನರ ನಾಡಿಗಳು
ಕಣ್ಣು ಮುಚ್ಚಿ ಕಿವಿ ತೆರೆದಿದ್ದ ಹಾಸಿಗೆಯಲಿ
    ಅಪ್ಪನ ಸದ್ದು ಕೇಳಿ ಕಣ್ಣು ಬಿಟ್ಟು
    ಮಕ್ಕಳು ಕೈ ಬಾಯಿ ನೋಡುವ ಹಾಗೆ
    ಉಂಗುಟ ಕಿತ್ತು ಹೋದ ಚಪ್ಪಲಿಯ ನೋಡಿದೆ.
ಬಾಯಿಂದ ಮಾತುಗಳು ಹೊರಡಲಿಲ್ಲ
ತಲೆಯೊಳಗೆ ಸಿಡಿತ
ಜೇಡ ಬುದ್ಧಿವಂತಿಕೆಯಿಂದ ನೇಯ್ದು ಬಲೆಗೆ
ಬಿದ್ದ ನೊಣಗಳ ಕಬಳಿಸುತ್ತಿದ್ದ ಕಂಡು ಹೊರಳಿದೆ.

## ಅ ಆ ಮತ್ತು .

**- ಎಚ್. ಗೋವಿಂದಯ್ಯ**

ಕಣ್ಣುಬಿಟ್ಟು ನಾನು ಕೈಕಾಲು ಆಡಿಸಿದಾಗ;
ಕತ್ತಲೆಗೂಡಿನ ಅವ್ವನ ಕಣ್ಣೊಳಗೆ
ಒಲೆ ಉರಿಯುತ್ತಿತ್ತು
ಕಪ್ಪು ಕೈಕಾಲುಗಳ ಬೆಂಕಿಗೆ ಒಪ್ಪಿಸಿಕೊಳ್ಳುತ್ತಾ
ಅಪ್ಪ ಮೋಟು ಬೀಡಿಯೊಂದಿಗೆ ಉಸಿರಾಡಿದ
ಕುದಿವ ಗಂಜಿಗೆ ಜೀವಗಳು ಕುದಿಯುತ್ತಿದ್ದವು

ಅವ್ವನ ಎದೆಗೂಡೊಳಗೆ ತೆವಳಿ- ನಿಂತು - ನಡೆದಾಡಿದ ಹೆಜ್ಜೆಗಳು
ಇಸ್ಕೋಲು ಗೋಡೆಗಳ ನಡುವೆ ನಿಂತೇಬಿಟ್ಟಾಗ
ಕರಿಕೆನ್ನೆಯ ಮೇಲೆ ಹುರಿಗೊಂಡಿದ್ದ ಅಪ್ಪನ ಮೀಸೆ
ನಾಮದ ಮೇಸ್ಟರ ಕಾಲಿಗೆ ಬಿದ್ದು ನೆಲ ನೋಡಿತು!

ಕತ್ತಲೆ ಬೋರ್ಡಿನ ಮೇಲೆ ಕಲಿತ ಅ ಆ
ಅಕ್ಷರಗಳ ನಡುವೆ ಅವ್ವ ಅಪ್ಪನ ಆಶೆಗಳು ಸಿಕ್ಕಿದವು
ನಮ್ಮ ಊರು, ಕೇರಿ, ಸಮಾಧಿಗಳು ಸಿಕ್ಕಿದುವು
ಅಸ್ತಿಪಂಜರಗಳ ಪಾತಾಳದಲ್ಲಿ ಒಂದಿಷ್ಟು
ಮಾತುಗಳು ಸಿಕ್ಕಿದುವು

ಹುಡುಕುತ್ತಾ ಹುಡುಕುತ್ತಾ
ಕೆಳಕ್ಕೆ ಇಳಿದಾಗ ಎದ್ದ ಪ್ರಶ್ನೆಗಳಿಗೆ

ಕಾಕಿ ಡ್ರೆಸ್ಸಿನ ಕೈಕಾಲುಗಳು ಮೂಡಿ

ಮೀಸೆಗಳು ಬೆಳೆದು ಅಡರಿಕೊಂಡು

ಕತ್ತಲಲ್ಲಿ ಕರಗಿ ಹೋದೆ!

ಆದರೆ ಪ್ರಿತಾರ್ಜಿತ ಗುಡಿಸಲ ಹರಕು ಗೋಡೆಗಳ ಮೇಲೆ

ಅ ಆ ಮೂಡಿಸಿದಾಗ ಅಂದು

ಅವ್ವ  ಕೊಟ್ಟ ಮುತ್ತುಗಳು ಕೆನ್ನೆ ಮೇಲೆ ಇನ್ನೂ ಇವೆ

ಅಪ್ಪ ಕೊಟ್ಟ ತೂತು ಕಾಸು ಉಡುದಾರದಲ್ಲಿ ಹಾಗೇ ಇದೆ!



## ಕವಚ

**ಎಲ್.ಹನುಮಂತಯ್ಯ**

ಹುಟ್ಟಿನೊಂದಿಗೆ ಕಟ್ಟಿಕೊಂಡೀ

ಕವಚ ಬೀಳಲೊಲ್ಲದು ಏಳಲೊಲ್ಲದು

ಕರ್ಣದಾನಿಗಳಂತಿಟ್ಟರೂ ಕತ್ತರಿಸಿ

ಮೈಯ ಪಾರ್ಶ್ವಗಳನೊಂದೊಂದೆ

ಕಳೆಯಲೊಲ್ಲದು ಜನುಮ ಮೋಹ.

ದೇಹಿಯೆಂದರೂ ದಾಹ ತೀರದು

ಹೋಗಲೊಲ್ಲದು ವಜ್ರದೇಹಿಗಳಂತೆ.

ಭೂಮಿಯೊಡಲನು ಬಗೆದು

ತೆಗೆದ ಚಿನ್ನವ ಕರಗಿಸಿ ಕರವಸ್ತ್ರ

ಮಾಡಿ ಒರೆಸಿಕೊಂಡರೂ ಕರಗಿ
ಹೋಗದು ಕನಸಿನಲ್ಲೂ.

ಕೋಶವನೋದಿ ದೇಶವನು ಸುತ್ತಿ
ಬಂದರೂ ಬಗಲಲ್ಲೆ ಭುಗಿಲೇಳುವುದು
ಧರ್ಮವೆಂಬ ಅಧರ್ಮದೊಳಗಿನ
ಬೀಜಬಿದ್ದು ಮೊಳೆತು ಮರವಾಗಿ
ಹಣ್ಣಿನಂಗಡಿಯಲ್ಲಿ ನಳನಳಿಸಿ
ನಗುವಾಗ ಕವಚ ಬಿಗಿಯಾಗಿತ್ತು.

ಕಳೆಯಲೆಂದೇ ಸುಳಿದವರೆಷ್ಟೋ
ಮಹಾತ್ಮರು ಮೌನ ದೋಣಿಯಲಿ
ಶಾಸ್ತ್ರದ ವಸ್ತ್ರದೊಳಗೆ ಸುತ್ತಿ
ಶರಧಿಯಾಚೆಗೆಸೆದರೂ ಹಡಗುಹತ್ತಿ
ಗುಡುಗಾಗಿ ಮಿಂಚಾಗಿ ಮಳೆಯ
ಹನಿಹನಿಯಾಗಿ ಮಣ್ಣಸೇರಿತು ಕವಚ
ಕಣವಾಗಿ ಅಣುವಾಗಿ ವ್ರಣವಾಗಿ
ನೆತ್ತರಂಗಳ ಸೇರಿ ಕೆಂಪು ಬಿಳಿ
ಕಣಗಳಲ್ಲಿ ಪ್ರಾಣಧಾತು

ಅಹಿಂಸ ಅಸ್ತ್ರವನು ಹೆಗಲಲ್ಲಿ
ಹೊತ್ತುಬಂದ ಸಜ್ಜನಿಕೆಯ
ಬುದ್ಧದೇವನನು ಸದ್ದಿಲ್ಲದೆ
ದೂರವಿರಿಸಿ ಕಾಲಾಂತರಗಳ
ಹೆಜ್ಜೆಗಳಲ್ಲಿ ಲಾಳವಾಗಿದೆ ಕವಚ.

ರಾಮಾನುಜರಾಶ್ರಮದಿ
ಕೂಡಿದರೂ ಕೊಂಡಿ ಅಕ್ಷರದ
ಸುತ್ತಿಗೆ ತುಂಡರಿಸಿತ್ತು ಮಂಡಿಯೂರಿ.
ಬಸವ ಬೆಸೆದರೂ ಬಿಸಿಯಲ್ಲೇ
ತುಕ್ಕು ಹಿಡಿದಿತ್ತು ಪಕ್ಕದಲ್ಲೇ
ನಾಳೆಯ ನಾಲಿಗೆ ಸುಡುವ
ದರ್ಭೆಯನಿಟ್ಟು ಸೇರಿಹೋಯಿತು
ಮಾಯೆಚರಿತೆಯ ಚಕ್ರದಲಿ.

ನೂರು ಯೋಜನ ದಾರಿ ತುಳಿದರೂ
ಮೂಲೆ ಮುಕ್ಕಾಗಿಲ್ಲ ಸವೆದಿಲ್ಲ ಚೂರೂ
ಕಾಲುಗಳು ಕುಂಟಿಲ್ಲ ಸೊಂಟ ಮುರಿದರೂ

ಹುಟ್ಟಿನೊಂದಿಗೆ ಗಟ್ಟಿಯಾಗಿದೆ

ನೆರಳಂತೆ ಬಿಸಿಲಂತೆ ಬಳ್ಳಿ ಹೂವಂತೆ

ಹುಟ್ಟಿನೊಂದಿಗೆ ಕಟ್ಟಿಕೊಂಡೀ

ಕವಚ ಕಳೆಯಲೊಲ್ಲದು

ಬೀಳಲೊಲ್ಲದು ನನ್ನ ತೊರೆದು.

ಹುಟ್ಟಿನೊಂದಿಗೆ ಬೆಸೆದುಕೊಂಡಿದೆ

ಕವಚ, ಮುಟ್ಟಬಾರದ ಕವಚ.



## ಊರು-ಕೇರಿಯ ವಚನಗಳು

**- ಎಲ್ಲಪ್ಪ ಕೆಕಪುರ**

"'ಅಯ್ಯಾ', ಕೇರಿ ಹಸಿದು, 'ಅಮ್ಮಾ' ಎಂದು, ಕೂಗಿದೊಡೆ,

ಊರವರು.... ನೀವು, ಏನ ನೀಡುವಿರಯ್ಯಾ?!'

ಕೆರಕಲು, ಮುರುಕಲು, ಹಳಸಿ, ಅರೆಬೆಂದ.....

ಜ್ವಾಳ, ರಾಗಿ, ಸಜ್ಜಿ, ಮಿದ್ದೆ.... ಎತ್ತಿ ಹಾಕುವಿರಯ್ಯ!

ಮಿಗಿಲು ಕಟ್ಟಂಬಲಿ, ಆರಾ, ಸಜ್ಜಿರಟ್ಟಿ!

ಇನ್ನು ಸತ್ತ ದನ, ಕರು, ಹೇಲು, ಉಚ್ಚೆ ಕುಡಿಸಿ,

ಹಸಿವು... ಹಿಂಗಿಸುವಿರಯ್ಯ!

೧.

"ಅಯ್ಯಾ, ಕೇರಿಗರಿಗೆ, ಛಳಿ..... ಛಲಿಯಾದೊಡೆ,

ಉಳ್ಳವರು.... ನೀವು! ಏನ ಹೊದಿಸುವಿರಯ್ಯಾ?!'

ಬೇವಿನ ಹುಟುಗಿ, ಕಾನಿಗಿ ತಪ್ಪು, ಸಪ್ಪೆ, ನವಣೆ, ನೆಲ್ಲೊಲ್ಲು....

ಕಾಗದದ ಸೀಲ, ಕೊಪ್ಪೆ, ಈಚಲು ಚಾಪೆ, ಗ್ವಾಣೆ ತಾಟು....

ನೆರೆತವರ, ಹಡೆದವರ, ಗಂಡಸತ್ತವರ, ಚೀರೆ, ಕುಬುಸ....

ಚಿಂದಿ ಕೌದಿ, ಹೆಣದ ಮೇಲಿನ ಬಟ್ಟೆ.....

ಆಗಾಗ ನಮ್ಮ ಮೈಗೆ, ಮನೆಗಳಿಗೆ.... ಬೆಂಕಿ ಕೊಟ್ಟು

ನಮ್ಮ ಮಾನ, ಪ್ರಾಣ, ಎರಡು ಕಾಯುವಿರಯ್ಯ.....

೨

"ಅಯ್ಯಾ.... ಈ ನಿಮ್ಮ ಋಣ, ನಮ್ಮ ಮೇಲೆ ಬಹಳೆಂದು,

ಮನ ಕರಗಿ, ನಾವು ಗಂಗೆ, ತುಂಗೆ, ಭದ್ರೆ, ಕಾವೇರಿಯಾಗಿ

ನಿಮ್ಮ ಪಾದದ ಸುತ್ತ ಹರಿದು, ಮೈಲಿಗೆ ಕಳೆದು,

ಇಂದಿಗೂ ನಾವು, ಹೊರಗೆ ಬಹಿಷ್ಕೃತರಯ್ಯ

ನಿತ್ಯ ಮೂರೊತ್ತು, ನಿಮ್ಮ ಅಂಗಳ ಗುಡಿಸಿ, ರಂಗೋಲಿ ಬಿಡಿಸಿ,

ಜೋಗುಳ ಹಾಡಿ, ಜೀತ ದುಡಿದು,

ಮನೆ ಮಂದಿ ಪುನೀತರಯ್ಯ

೪

ದಿನ ಹೊಲಗದ್ದೆ, ತೋಟ, ಕಣದೊಳಗೆ-

ಈ ನಿಮ್ಮ ಎತ್ತುಗಳೊಟ್ಟಿಗೆ, ತೊತ್ತಾಗಿ, ಹೊತ್ತಾಗಿ, ಬೆತ್ತಲಾಗಿ,

ಉರಿಬಿಸಿಲಿಗೆ, ಕತ್ತೆಗಳಂಗೇ ದುಡಿಯುತ್ತಿದ್ದೇವೆ!

ಈ ನಿಮ್ಮ ಎತ್ತುಗಳಿಗೋ.... ದಿನವೂ ಸ್ನಾನ,

ಹೊಟ್ಟೆ ತುಂಬಾ ಖಾನಾ....

ಕಡ್ಲೆ, ಗೋಧಿ, ನೆಲಗಡಲೆ ಹೊಟ್ಟು, ಹಿಂಡಿ, ವಡೆತೆನೆದಂಟು,

ಕುಡಿಯಲು ಹಂಡೆ ತುಂಬಾ ಹುಳಿ..... ಮಜ್ಜಿಗೇ....

ಮೈ ತುಂಬಾ ಜೂಲು, ಕುಚ್ಚು, ಸವರೇ ಕೂದಲು, ಗಂಟೆಸರ,

ಕೊಡಣಸು, ಗಗ್ರಿ, ಕಾಲಿಗೆ ಲಾಳಗಳೂ.....

ಮಲಗಲು ಬೆಚ್ಚನೇ ಕೊಟ್ಟಿಗೇ.!!

ಅಬ್ಬಾ! ಈ ಎತ್ತುಗಳಗತ್ತು, ತಾಕತ್ತು, ಸಿಂಗಾರ, ನಮಗುಂಟೇ??

ಹೌದೌದು.....! ನಮಗುಂಟುಃ ಗಾಡದಿ ಗುದ್ದು....!!

## ಗೋವು ತಿಂದು ಗೋವಿನಂತಾದವನು

**- ಎನ್.ಕೆ.ಹನುಮಂತಯ್ಯ**

ಅಸ್ಪೃಶ್ಯ!

ಹೌದು; ನಾನು ವಿದ್ಯುತ್ತಿನ ಹಾಗೆ

ನಿಮ್ಮ ತಣ್ಣನೆಯ ಸ್ಪರ್ಶಕ್ಕೆ

ಸಿಕ್ಕಲಾರೆ

ಅಸ್ಪೃಶ್ಯ!

ಹೌದು; ನಾನು ಕಡಲ ಆಳದ ಹಾಗೆ

ನಿಮ್ಮ ಸುಡುಗಣ್ಣು ಸ್ಪರ್ಶಕ್ಕೆ

ಸಿಕ್ಕಲಾರೆ

ಅಸ್ಪೃಶ್ಯ!

ಹೌದು ; ನಾನು ಮೊಲೆ ಮೂಡಿದ ನೆಲ

ಜೀವ ಪ್ರೇಮದ ತೊಗಲ

ಸಂಭೋಗಿನಿ

ಹುಟ್ಟುತ್ತವೆ ನನ್ನೊಳಗೆ ಕಾಡು ಕಣಿವೆ

ನದಿ ಪರ್ವತಗಳು

ಅಸ್ಪೃಶ್ಯ!

ಹೌದು : ನಾನು ಸ್ವ

ತಂತ್ರವನ್ನು ಭೋಗಿಸುವ ನಿಮ್ಮಂಥ

ಸಲಿಂಗ ಕಾಮಿಗಳಿಗೆ

ಹೆದರಲಾರೆ

ಪಕ್ಕೆ ತಬ್ಬಿದ ಮರಿ ಕಾಯುತ್ತ

ಮರದಿಂದ ಮರಕ್ಕೆ ಹಾರುವ

ಕೋತಿಗೆ ಹೆದರುತ್ತೇನೆ.

ಅಸ್ಪೃಶ್ಯ!

ಹೌದು; ನೀರು ನಾಳೆಗಳಿಲ್ಲದೆ

ಹಣ ಅಣ್ವಸ್ತ್ರಗಳ ಕುಲುಮೆಯಾಗಿರುವ

ನಿಮ್ಮ ಕಣ್ಣಿನ ಪ್ರಭೆಗೆ

ಹೆದರಲಾರೆ

ನಿಮ್ಮ ಮಲ ತಿಂದು ನಿಮ್ಮ ಮನೆಯ ಕಾಯುವ
ನಾಯಿಗೆ ಹೆದರುತ್ತೇನೆ.
ಕೃತಕ ಕಣ್ಣಿಗೆ ಕನಸು ಕಾಣುವುದಿಲ್ಲ.

ಅಸ್ಪೃಶ್ಯ!
ಹೌದು; ನಾನು ಗೋವು ತಿನ್ನುತ್ತೇನೆ
ಗೋವು ತಿಂದು ಗೋವಿನಂತಾಗಿ
ಗಿರಿ ಕಣಿವೆ ಬಯಲೊಳಗೆಲ್ಲ
ಕುಣಿಯುತ್ತೇನೆ
ನೆಲದ ಮೇಲೆಯೇ ನಿಂತು
ಬಾಲ ಎತ್ತಿ ಕಾಮನಬಿಲ್ಲಿಗೆ
ಬಡಿಯುತ್ತೇನೆ.
ಮಳೆ ಮೋಡಗಳ ತಿವಿದು
ಸುಡುಗಾಡಿಗೆ ಕೆಡವುತ್ತೇನೆ

ಅಸ್ಪೃಶ್ಯ!
ಹೌದು; ನಾನು ಗೋವು ತಿನ್ನುತ್ತೇನೆ
ಗೋವು ತಿಂದು ಗೋವಿನಂತಾಗಿ
ರೋಮ ರೋಮಗಳಲ್ಲು ಕೆಚ್ಚಲನು ಹೊತ್ತು

ತಿರುಗುತ್ತೇನೆ

ಕಸದ ತೊಟ್ಟಿಯಲ್ಲಿ ಬಿದ್ದ ಕೂಸುಗಳಿಗೆ

ಹಾಲು ಕುಡಿಸುತ್ತೇನೆ.

ಅಸ್ಪೃಶ್ಯ!

ಹೌದು; ನಾನು ಗೋವು ತಿಂದು

ಗೋವಿನಂತಾದವನು

ನೀವು ನೀಡುವ ಮೇವು ತಿಂದು

ನಿಮ್ಮಂಥ ಮನುಷ್ಯನಾಗಲಾರೆ

ಮನುಷ್ಯರನ್ನು ತಿನ್ನಲಾರೆ



**ಮುಲಿದ ಕತ್ತಿಯ ಬಂಟನ ಹಾಡು**

**- ತೇಜಸ್ವಿ ಕಟ್ಟಮನಿ**

ಬರೆ ಬರೆಯೆಂದರೆ

ಏನು ಬರೆಯಲಿ

ಗೆಳೆಯಾ!

ಧಾರವಾಡದ ಈ

ಸುಡುಗಾಡ ಮಳೆಯಲ್ಲಿ

ನೆನೆಯುತ್ತ,

ಬಿಸಿಲು ಬಿದ್ದಾಗ ಒಣಗುತ್ತ

ಸಿಕ್ಕಾಗ ಹೊಟ್ಟೆ ಬಿರಿಯುವಷ್ಟು

ತಿನ್ನುತ್ತಾ, ಇಲ್ಲದಿದ್ದರೆ

ಆರೋಗ್ಯಕ್ಕೆ ಒಳ್ಳೆಯದೆನ್ನುತ್ತಾ

ತಿರುಗುವುದನ್ನು ಬರೆಯಲೇ ಗೆಳೆಯಾ!

ನೀನು ಬಂದಾಗೊಮ್ಮೆ

ಗುಂಡು ಹಾಕುತ್ತಾ

ಮಜವಾಗಿ ಮಾತನಾಡುತ್ತಾ

ಒಬ್ಬರನ್ನೊಬ್ಬರು

ಹೊಗಳುತ್ತಾ ಕಿಚಾಯಿಸುತ್ತಾ

ಮತ್ತೆ ಹೋಗುವಾಗ

ಪ್ರತಿ ಸಲವೂ ನೀ ಬರೆ ಅನ್ನುತ್ತೀ

ಸಿಟ್ಟಿಗೆದ್ದು ಕಾರ್ಡು ಕೊಡಿಸಲೇನು

ಎಂದು ಬೆದರಿಸುತ್ತೀ

ನನ್ನ ಎದೆಯೀಗ

ಬಾಯಿಗೆ ಬಂದಿದೆ ಗೆಳೆಯಾ!

ಅದರೊಳಗಿನ ಕುಷ್ಠ ಹತ್ತಿದ

ಆ ಪುಟ್ಟ ಹಕ್ಕಿ

ವಿಲ ವಿಲಿಸುತ್ತಿದೆ ಗೆಳೆಯಾ!

ನಾನಾದರೂ ಏನು ಬರೆಯಲಿ ಗೆಳೆಯಾ

ಕತ್ತಲಾದಾಗ ಮಲಗಲಾಗದ ನಾನು,

ಎಚ್ಚರವಾದಾಗ ಏಳಲಾಗದ ನಾನು,



ತೀಟೆಯಾದಾಗ ತಬ್ಬಿಕೊಳ್ಳದ ನಾನು,

ಹೊಟ್ಟೆಗಿಲ್ಲದಾಗ ಹಾಳು

ಸೂಳೆಯನ್ನೂ ತಬ್ಬಿಕೊಳ್ಳುವ ನಾನು,

ಏನು ಬರೆಯಲಿ ಗೆಳೆಯಾ!

ನಾನೀಗ ಸೆಟೆದಿರುವ ನಿನ್ನೆ

ಹಾಳು ಹೊಡೆವ ಇಂದು

ಕರಾಳ ನಾಳೆಯ ಚಿಂತೆ

ಬಿಟ್ಟಿರುವೆ ಗೆಳೆಯಾ!

ನಿನ್ನ ಅಥವಾ ನನ್ನ

ಸಾವಿನ ನಿರೀಕ್ಷೆಯನ್ನೂ

ನಿಲ್ಲಿಸಿರುವೆ ಗೆಳೆಯಾ!

ಹೋಳಾದ ಹೃದಯದ

ವಿಕೃತ ದೇಹದ

ಮುರಿದ ಕತ್ತಿಯ ನನ್ನನು

ಹೀಯಾಳಿಸುತ್ತಿರುವರು ಗೆಳೆಯಾ!

ಹೆಜ್ಜೆ ಕಿತ್ತಿಡಲು ಕಾಲು

ಒಲ್ಲೆ ಎನ್ನುತ್ತಿವೆ ಗೆಳೆಯಾ

ವಿಚಿತ್ರವೆಂದರೆ ಗೆಳೆಯಾ

ನನ್ನೆದೆಯೊಳಗಿನ

ಕುಷ್ಟ ಹತ್ತಿದ ಆ ಪುಟ್ಟಹಕ್ಕಿ

ವಿಲಿವಿಲಿಸಿದರೂ

ನಾನು ಹಣಿಕಿಕ್ಕಿದಾಗೊಮ್ಮೆ

ನಗಲು ಯತ್ನಿಸುತ್ತಿದೆ ಗೆಳೆಯಾ!

## ಕಣ್ಣಿಗೂ ಗೊತ್ತಿರುವ ಕತೆ

**ಸತ್ಯಾನಂದ ಪಾತ್ರೋಟ**

ನಮ್ಮಪ್ಪ ಸತ್ತೇ ಹೋದನೆಂದು

ಹೇಳುತ್ತಾರೆ - ಇವರೆಲ್ಲ

ಹಾಗೆಂದು

ಹುಗಿದೇ ಬಿಟ್ಟರು ಅವನ

ನಂಬುವುದಾದರೂ ಹೇಗೆ ನಾನು ಇದನ್ನೆಲ್ಲ?

ಬಿಸಿಲಲ್ಲಿ ಮಳೆಯಲ್ಲಿ

ಕೊರೆಯುವ ಚಳಿಯಲ್ಲಿ

ಉಕ್ಕುವ ನದಿಗೆಲ್ಲ ಎದೆಯೊಡ್ಡಿ ನಿಂತು

ಬಿಸಿಲಲ್ಲಿ ನಿಂತರೂ

ಬೆಳದಿಂಗಳ ನಗೆ ನಕ್ಕು

ನರಳುವ ಗುಡಿಸಲಿಗೆ ತಂಗಾಳಿ ತೀಡಿದ್ದ

ಮಹಲುಗಳ ನೋಡುತ್ತಾ

ದಿನಗಳನು ದೂಡಿದ್ದ

ಅವನ ನೆರಳಿನಗುಂಟ, ಉಸಿರಾಗಿ ಹಸಿರಾಗಿ

ಕೆಸರು ಕಲ್ಲನು ಹೊತ್ತು

ನಿಚ್ಚಣಿಕೆ ಏರಿದ್ದ ನಮ್ಮಪ್ಪ

ಹೇಳುವಳು

"ಊರಿಗೆ ಊರೇ ಕುಳಿತಿದೆ ತಂಪಾದ ನೆರಳಿನಲಿ

ನಿಮ್ಮಪ್ಪ ಕುಳಿತಿದ್ದಾನೆ ಸುಡುವ ಕಡುಬಿಸಿಲಿನಲಿ

ಗುಡಿಗುಂಡಾರ ಮನೆ, ಮಠ

ಅವರ ಬೆವರಿನ ಫಲ

ಇದರಲೆಲ್ಲ ಅಡಗಿದೆ ಅವನ ಬಲ

ಇದು

ಒಂದೊಂದು ಕಲ್ಲಿಗೂ ಗೊತ್ತಿರುವ ಕತೆ.

ಈಗ ಹೇಳಿ



ಈ ಊರು - ಈ ಕೇರಿ

ಅಲ್ಲಿದ್ದ ಜನರೆಲ್ಲ ಉಸಿರಾಡುವತನಕ .

ನಮ್ಮಪ್ಪ ಸಾಯುವುದಾದರೂ ಹೇಗೆ?

ನಾನು ನಂಬುವುದಾದರೂ ಹೇಗೆ?

ಬೇಕೆಂದರೆ ಕೇಳಿ

ಈ ಕಲ್ಲುಗಳೇ

ಸಾಕ್ಷಿ!

## ಹೊಸಗಾಳಿ

**- ಟಿ.ಎಂ.ಭಾಸ್ಕರ್**

ಕತ್ತಲು ಬೆಳಕಾಗಿ

ಬೆಳಕಿಗೆ ಧರಣಿಗೆ

ಕತ್ತಲು ಕಳೆದೋಗಿತಲ್ಲ

ಅಮ್ಮ ಹೊಸ ಚುಕ್ಕೆ ಮೂಡಿ ಬಂದಿತಲ್ಲ

ನೀಲಿ ಆಕಾಶದಲ್ಲಿ

ನೀಲಿ ಚಂದ್ರನು ಇಲ್ಲ

ದೇವಲೋಕದ ಮಾತು

ಗಾಳಿಗೆ ಹೋಯಿತಲ್ಲ

ಹೊಸ ಗಾಳಿ ಸುಳಿದು ಬಂದಿತಲ್ಲ

ಅರಮನೆಯ ಓದೆಲ್ಲ

ಬೀರನ ಕೈಯಲ್ಲಿ

ಕುಣಿ ಕುಣಿದಾಡಿತಲ್ಲ

ಹೊಸಗಾಳಿ ಬೀಸಿ ಹೊಡೆಯಿತಲ್ಲ

ಬಂಜರು ನೆಲದಲ್ಲಿ

ಬಂಜೆ ಎಂಬ ಮಾತು

ಸುಳ್ಳೆಂದು ಕಂಡಿತಲ್ಲ

ನೀರುಂಡು ಹೂ ಬಿಟ್ಟು ಫಲಿಸಿತಲ್ಲ

ಕಾಯಾಗಿ ಹಣ್ಣೆಂದು ದೊರಕಿತಲ್ಲ

ನೊಂದ ಜೀವಿಗೊಂದು

ಕಂದನು ಉದಯಿಸಿ

ರಾಜ ಬೀದಿಗೆ ಬಂದನಲ್ಲ

ಅಮ್ಮ ಕ್ರಾಂತಿ ಕಣಕೆ ಇಳಿದನಲ್ಲ.



## ಯುಗಾದಿ

**- ಅಪ್ಪಗೆರೆ ತಿಮ್ಮರಾಜು**

ಯುಗ ಯುಗಗಳು ಕಳೆದರೂ

ಧರೆಯ ಧಗೆ

ಧಗಿದಗಿಸುತ್ತಲೇ ಇದೆ

ಯುಗಾದಿಯಲಿ

ಹಳೆ ಮೈಗೆ ಹೊಸಬಟ್ಟೆ

ಚೈತ್ರಮಾಸದ ವಸಂತಗಾನ

ಹೊಸ ಚಿಗುರು ಹಳೆಬೇರುಗಳ

ಬೇವು ಬೆಲ್ಲ

ಬದುಕಿನ ಬವಣೆ

ಬಟ್ಟಂಬಯಲಿನ ನಭದಲ್ಲಿ

ಮುಸುಕು ಮಬ್ಬಿನಲಿ

ಹೊಂಬಣ್ಣ ಹೊಂಗಿರಣ ಹೊಮ್ಮಿ

ಹೊಸ ಬಟ್ಟೆ ತೊಟ್ಟು

ಮಕ್ಕಳಾಟಿಕೆಯ ಬಿಲ್ಲಿನಂತೆ

ಮೂಡುವ ಹಸುಗೂಸು

ಲಕೋಪಲಕ್ಷ

ಭ್ರಮೆ ಬದುಕಿನ ನರರಿಗೆ

ಜೀವನಾಡಿಯಾಗುತ್ತಾ

ಹೊಸ ಬದುಕಿನ

ಹೊಂಬಾಳೆಯ ಹೊಂಬಾಳ್ವೆಯಂತೆ

ಈ ವರುಷ

"ಚೆನ್ನದ ಕೋಡೊ

ಅನ್ನದ ಕೋಡೊ"

ಯಾರ ಬಲ್ಲರು?

**ಚಂಡಾಲರ ಕೂಗು**

**- ಗಂಗಾರಾಂ ಚಂಡಾಲ**

ನಡುಗುತ್ತೈತೆ ಇಂಡಿಯಾ ಬೊಂಬೆ

ತಲೆ ಮೇಲೆ ಹೇಲ್ಬುಟ್ಟಿ, ಕೈಯಲ್ಲಿ ಪೊರಕೆ ಹಿಡಿದ ಚಂಡಾಲರ ಕೂಗು

ಗುಡುಗುತ್ತೈತೆ ಇಂಡಿಯಾ ಬೊಂಬೆ

ಜಾತಿ ವರ್ಗದ ಮಳೆ ಸಂದಿಸಿ ಬೀಳುತ್ತಿದೆ.

ಕರ್ನಾಟಕ ಕೆರೆಯಲ್ಲಿನ ಕೋಡಿಯಲ್ಲೇ ತೂಗುತ್ತಿದೆ.

ಭ್ರಷ್ಟಾಚಾರದ ಕಲ್ಲು ಹೆಬ್ಬಾಳಕೆ ಹೊರಟಾಯ್ತು

ಬಡವರ ಹೃದಯಗಳು ಬಿಸಿ ಕೆಂಡಗಳಾಗುತ್ತಿದೆ.

ಬೆಂಕಿಯ ಮನುಷ್ಯರೆಲ್ಲ ಮೆರವಣಿಗೆ ಬರುತ್ತಿದ್ರೆ

ಕೂಲಿ ಕಾರ್ಮಿಕರು ತೊಡೆ ತಟ್ಟಿ ಕೂಗಿದರು

ಹೀನ ಜಾತಿ ಜನರೆಲ್ಲ ದಂಡೆತ್ತಿ ಬರುತ್ತಿದ್ರೆ

ಗುಳ್ಳೆ ನರಿಗಳೆಲ್ಲ ಊರನ್ನೆ ಸೇರಿಕೊಂಡ್ರೆ

ಕೋಳಿ ಪಿಳ್ಳೆಗಳೆಲ್ಲ ಶಬ್ದ ಕೇಳಿ ಸತ್ತವು

ಕೋಳಿ ಪಿಳ್ಳೆಗಳೆಲ್ಲ ಸತ್ತ ದನಿ ಶಬ್ದ ಕೇಳಿ

ದೌರ್ಜನ್ಯದ ಪೋಲಿಸರು ಬಂದೂಕ ಹಿಡಿದರು

ತಂಪನ್ನಾಗಿಸಲು ಸಿ.ಆರ್.ಪಿ. ಬರುತ್ತಿದೆ.

ಭೂಹೀನ ಕಾರ್ಮಿಕರು ವಿಧಾನಸೌಧ ಮುತ್ತಲು

ವಿಧಾನಸೌಧ ದರೋಡೆ ರಾಣಿ ರಾಜಿಗೆ ಬರುತ್ತಿದ್ರೆ
ಕೂಲಿ ರೈತರೆಲ್ಲ ಹುಲಿ ಬೇಟೆಗೆ ಹೊರಟೋದ್ರು
ರೈತ ಕೂಲಿ ದಂಡು ಕಾಡೆಲ್ಲ ಶೋಧಿಸಿದ್ರೆ
ಕರ್ನಾಟಕ ಕಲ್ಲಿನಲ್ಲಿ ಮಳೆಯಿಂದ ಡಂಗೂರ
ಸಮತಾ ರಾಜ್ಯಕ್ಕವರು ಕೆಂಪು ದಾರಿ ಹಿಡಿದರು
ತಾರಸಿ ಮನೆಗಳೆಲ್ಲ ತಲ್ಲಣಿಸಿ ಹೋಗುತ್ತಿದೆ
ಮಂತ್ರಿ ಶಾಸಕರೆಲ್ಲ ಮುಚ್ಚಿಕೊಂಡು ಹೋಗುತ್ತಿದೆ
ದೇಶದ ರಾಜಕೀಯ ಮಳೆಯಲ್ಲಿ ಲೀನವಾಯ್ತು



ಕಾಂಗ್ರೆಸ್ ಆಲದಮರ ಕದಲದೇನೆ ಹೋಗುತ್ತಿದ್ರೆ
ಜನತಾದ ಎಲೆತೋಟ ಜನ ವಿರೋಧಿ ಪಕ್ಷವಾದ್ರೆ
ಕೆಟ್ಟದೆಲ್ಲ ಸೇರಿ ಹೋಗಿ ಜನಸಾರ ಸೇರಿತು
ಶೋಷಿತ ಮಹಿಳೆಯರು ಬಂಡಾಯ ಹೂಡುತ್ತಿದೆ
ಸೊಕ್ಕಿದವರ ಸೋಲಿಸಿ ಜನರೊಟ್ಟಿಗೆ ಸೇರಿಕೊಂಡು
ಕರ್ನಾಟಕ ದಿನ್ನೆಯಲ್ಲಿ ಜನಸೈನ್ಯ ಕಟ್ಟುತ್ತಾರೆ.

## ಸೂಜಿಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹಾಡು

**- ಸುಬ್ಬು ಹೊಲೆಯಾರ್**

ಕೆಳಗಿನ ದನಿಗಳು ಕಳಕಳಿಯಿಂದ ಪುಟಿಯುತ್ತಿವೆ
ನಡೆದರೆ ಹೂವು ಅರಳುವ ತೋಟಕ್ಕೆ
ಬೇಲಿಯಿರದ ಕೇರಿಯಲ್ಲಿ ಸೃಷ್ಟಿಯ ಮಾತು
ನಟರು ವಿಟರು ಅಲ್ಲಿಲ್ಲ. ಮೆಲ್ಲಗಿನ ಪಿಸುಮಾತು
ನಯ ನಾಜೂಕಿನ ಸೌಜನದ ತೋರಿಕೆ
ಹಾರಿಕೆಯ ಹಾಲಿನ ನಗು, ಧರ್ಮದ ವಾರಸುದಾರಿಕೆಯ
ದೇವ ಸಾನಿಧ್ಯ ಪಡೆದ ಸಂಸ್ಕಾರವಿಲ್ಲ ಇಲ್ಲಿ.

ಕರಡಿಯಪ್ಪುಗೆ ಹಿಡಿದು ಮುತ್ತು ಕೊಟ್ಟರೆ
ಗಾಯ ಮಾಯದ ಹೊಕ್ಕುಳದ ಹಾಗೆ
ಒರಟು ಕಲ್ಲಿಗೆ ಸಾವಿರ ಹಲ್ಲೆಗಳ ಪ್ರತಿಮೆ
ಸಾವು ನೋವುಗಳ ಸೂರು, ನಿತ್ಯತಲ್ಲಣ
ಭರ್ಜಿ ಇರಿತದ ಬವಣೆ ಸರಳ ಉತ್ತರ
ಮಣ್ಣು ಮಡಿಕೆ ಒಡೆದರೆ ಸಹಜ ಸಾವಿನ ಮೆರವಣಿಗೆ

ಆಳಕ್ಕೆ ಧುಮ್ಮಿಕ್ಕುವ ಅಂಧಕಾರ
ಬೆಳಕಿದ್ದ ಕಣ್ಣಲ್ಲಿ ಉರಿವ ಕೆಂಡದ ಆವೇಶ

ಉರಿವ ಬೂದಿ ಹಣೆಬರಹದ ಪಂಚಾಂಗ

ಈಗ ಹತಾಶೆಯ ಹಾಡು

ಉದುರಿ ಒಳಗಿನ ಹೂ ಅರಳಿಸುವ ಹಾತೊರಿಕೆ

ಕಲ್ಲಿನ ಭಾವ ಕನಸಿನ ಕಣ್ಣಿಗೆ

ಎಚ್ಚರದ ನಾರು ಒಳಗೆ ಬೇರಿನಂತೆ.

ಗಲ್ಲಿಗೇರುವ ಕೊರಳಲ್ಲಿ ಕೋಗಿಲೆಯ ಹಾಡು

ಋತುಗಿರಿಯನ್ನು ಮೀರಿ ಗೀತೆ ಪಠಣವಿಲ್ಲ.

ಅತ್ತು ಕರೆದಿದ್ದೇ ಶಾಸ್ತ್ರೀಯ, ಹುಳಿ ಹೆಂಡದ ಸುಗ್ಗಿ

ಹಿಗ್ಗಿ ಉನ್ಮಾದದಲ್ಲಿ ಉಲ್ಲಾಸ,

ಸೂಜಿಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹಾಡು,

ಹಾಡು!

ಹುನ್ನಾರದ ಹುಳವೇ, ವೈದಿಕ ಕೊಳವೇ

ಹೊನ್ನಶೂಲಕ್ಕೇರಿಸುವ ವೀರಶೈವ ಸ್ಥಾವರವೇ

ಉಳಿದಿದ್ದು ಶೂದ್ರ ತ್ರಿಶೂಲವೇ, ತಿವಿದಿದ್ದು ಗೌಡ,

ಉಳಿದವರು ಗಾಣವೆಳಿಸಿದ್ದು ಗೌಣವೇ? ಉಳಿದ

ಉಪ್ಪಾರ ಕಮ್ಮಾರ ಕುಲವೆಂಟು ಜನವೇ

ಉಚ್ಚೆ ಹೇಲು ಬಾಚಿದ್ದು ಬಾಗಿದ್ದು

ನೆಲವೆ, ಹಾಡು ಆಖೈರಿಗೂ ಮುಂಚೆ

ಮುಂಗಾರು ಮಳೆಯ ನೀರಿಗೆ

ದಾರಿ ಯಾವುದಾದರೇನು, ದಿಕ್ಕೂ ದೆಸೆ ಇಲ್ಲದವರ ಹಾಗೆ.

ನೀರೇ ನೆಲಕ್ಕೆ ಮೈಲಿಗೆಯಾಗಿರಲು

ಪಾಮರ ನಾನು ಪಾದ ಎಲ್ಲಿಡಲಿ ಮೇಲಿನವರೆ?

**ಅವ್ವ**

**- ದು. ಸರಸ್ವತಿ**

ಹಸಿರು ಬಳೆಯ
ನನ್ನವ್ವನ
ಹೂವಿನ ಕೈ
ಹೊಸೆದ ಬತ್ತಿಯಲಿ

    ಬಂಗಾರದ ಬೆಳಕು
    ದೇವನ ಮುಖ ಹೊಳಪು

ಮೈಯ ನೆತ್ತರ
ಉರಿಸಿ ಬೆಳಗಿದ
ಕಣ್ಣ ದೀಪಗಳು
ಮನೆಯೆಲ್ಲ ಬೆಳಕೊ !! ಬೆಳಕೊ!
ಕಾವಲಾಗಿ ಕಾದು ನವೆದಳು
ಹನಿ ಹನಿಯಾಗಿ ಇಂಗಿ
ಪಾರಿವಾಳ ಹೊತ್ತು ತಂದ
ಸಂದೇಶಕ್ಕೆ ಹಿಂಜಿ
    ಮಂಜಿನ ಹೆಣವಾದಳು

ಸವೆದ ಮೂಳೆಗಳು

ಪುರಪುರನೆ ಉರಿದು

ಬಿಸಿ ಬೂದಿಯ

ಕಾವೇರಿ ಕೊಚ್ಚಿ ಹೋದಳು

ಜತೆಯಲ್ಲಿ ಅವಳ

ಭಾಗ್ಯದ ಗೂಡು

ಕೊಚ್ಚಿಹೋಯಿತು

ಉಳಿದದ್ದು ಅವಶೇಷಗಳು.



## ಅಗ್ರಹಾರದ ಒಂದು ಸಂಜೆ

**- ಆರ್.ಮೋಹನ್ ನಾಗಮ್ಮನವರ**

ಮುನಿದ ಕಾರ್ಮೋಡಗಳ ಕೌದಿ ಹೊದ್ದು

ಮುಸ್ಸಂಜೆಯಲಿ ಮಳೆ ಹನಿಯುತಿರುವ ಹೊತ್ತು

ಬಿದ್ದ ಪ್ರಾಂಗಣದ ಅಗ್ರಹಾರದ ಮೂಲೆಯಲೊಂದು ಮನೆ

ಬಿರುಕು ಗೋಡೆಗಳ ಮೇಲೆ ಮುರುಕು ಸೂರು

ಒಳಗೆ ಸೀತಮ್ಮ ಮುದುವಿ, ಮಡಕೆ ಚೂರುಗಳ ನಡುವೆ,

ಸುರಿದ ನೀರು, ನಿರಂತರದ ಗಂಗಾವತರಣ!

ಹೊರಗೆ ಘಂಟೆನಾದ, ವೇದಘೋಷಗಳ ಮಂದ್ರ ನಿನಾದ

ದೇವರೆದುರು ಮಂತ್ರಪೂರಿತ ಕಲ್ಲುಗಳ ಕಥೆ!

ಮಳೆ ನಿಲ್ಲುವುದೇ ಇಲ್ಲ, ಮುಗಿಲಿಗಿನಿತು ಕರುಣವಿಲ್ಲ.

ವಾರಗಳಾಚೆ ಉರಿದ ಒಲೆಯಲ್ಲೀಗ ಬೆಂಕಿ ಹೋಗಲಿ

ಕಾವೂ ಉಳಿದಿಲ್ಲ ಡಬ್ಬಗಳೋ ಖಾಲಿ, ಖಾಲಿ, ಹಿಡಿಯಕ್ಕಿಯಿಲ್ಲ

ಬಾಳ ಹೊಲದಲ್ಲಿ ಐವತ್ತು ಬೇಸಿಗೆಯ ಕಂಡಾಕೆಯೆದೆಯಲ್ಲಿ

ಭಾವಗಳಳಿದು, ಇಪ್ಪತ್ತರ ಹರೆಯದಲ್ಲೇ

ಗಂಡನೊಂದಿಗೆ ಕೂದಲೂ ಕಳೆದುಕೊಂಡಾಕೆ

ಮರಗುತಾಳೀಗ ಮನೆಗೆ ಬರದ ಮಗನ ನೆನೆದು

ಮಗನೋ ಅನ್ನ ಬಟ್ಟೆಗಳಿಗಾಗಿ ಬದುಕ ಹುಡುಕಿ

'ಕೆಲಸ ಖಾಲಿ ಇಲ್ಲ' ಬೋರ್ಡ್‌ಗಳೆದುರು ಅಂಗಲಾಚುತ್ತಾನೆ.

ಅಂಗೈಯಗಲದ ನೌಕರಿಗಾಗಿ ಹಲಬುತ್ತಾನೆ.

ಹೆತ್ತೊಡಲಿಗೆ ಹಿಡಿಯನ್ನ, ಮೊಳ ಸೀರೆ ನೀಡಲಾಗದ

ಅಸಹಾಯಕತೆಗೆ ಮರಗುತ್ತಲೇ ಕೊರಗಿ

ದಿಕ್ಕು ದಿಕ್ಕುಗಳ ಸುತ್ತಿಗೆ ಮೊರೆಯಿಡುತ್ತಾನೆ

ಮೂಕ ಗಾಳಿಯ ಸುಳಿಯೊಳಗೆ ಸಿಕ್ಕ ಕೂಗು

ದನಿಯಾಗದೇ, ಶೂನ್ಯದಲ್ಲಿ ಹೆಚ್ಚಾಗುತ್ತದೆ

ಕಪ್ಪಾಗುತ್ತದೆ, ಕಪ್ಪಿನೊಳಗೇ ಕಳೆದುಹೋಗುತ್ತಾನೆ ಗೆಳೆಯ!

ಸೀತಮ್ಮನಿಗೀಗ ನಿತ್ಯ ಒಪ್ಪತ್ತು

ಹಗಲೋ ಅಗ್ರಹಾರದ ಪಹರೆ, ರಾತ್ರಿ ಕೂಡ ಕಂಬಸುತ್ತುವ

ಕೆಲಸದಲ್ಲೇ ಕಳೆದುಹೋದ ಕಥೆಗಳ ಹುಡುಕುತ್ತಲೇ ಕರಗುತ್ತಾಳೆ,

ಬದುಕು ಗಾಳಿಪಟವಾಗುವ ಮೊದಲೆಷ್ಟು ಮುದವಿತ್ತು



**ಗಾಯಗಳ ಹಾಡು**

**- ಟಿ. ಯಲ್ಲಪ್ಪ**

ಗಾಯಗಳು ನರಳುವುದಿಲ್ಲ

ನನ್ನದು ಗಾಯಗಳ ಹಾಡು

ನೋಡಿ ಮೈ ಮನದ ತುಂಬೆಲ್ಲಾ

ಹಸಿ ಹಸೀ ಗಾಯಗಳು

ಕೆಲವು ದೋರೆಗಳು, ಇನ್ನೂ ಕೆಲವು

ಪರಿಪಕ್ವತೆಯ ಸಿದ್ಧಿಗೆ

ಮೂರೇ ಗೇಣು ದೂರದಲಿ

ಕಾದಿರುವ ತನಿವಣ್ಣ ತಪಸ್ವಿಗಳು!

ನನ್ನ ಗಾಯಗಳ ಮಾತು ಬಿಡಿ

ನನ್ನ ಅಪ್ಪನವೋ........

ಶತಮಾನೋತ್ಸವದ ಸಂಭ್ರಮ ಕಂಡ ಗಾಯಗಳು

ಚರಿತ್ರೆ ಇಲ್ಲದ, ಮುಖ ಮೂತಿಯಿಲ್ಲದ

ಮುಖೇಡಿ ಗಾಯಗಳು!

ಒಳಗೇ ಬೇಗುದಿವ

ಕೀವು ರಕ್ತದಿ ಬಾತುಕೊಂಡ

ಒಳಗುದಿಯ ಗಾಯಗಳು

ಏರಿಲ್ಲದ ಬೇನೆಯಲ್ಲಿ

ಬೇರಿಲ್ಲದೆ ನೋವ ನುಂಗುವ ಬಾವುಗಳು!

೨

ನಾನು ಅಪ್ಪನ ಗಾಯಗಳ ವಾರಸುದಾರ!

ಅಪ್ಪ ಅವರಪ್ಪನ ಗಾಯಗಳ ವಾರಸುದಾರ

ಇದು ಅಪ್ಪನಪ್ಪಗಳಿಂದ

ತಲೆತಲೆಗೆ ಬಂದ ತಲಾಂತರದ

ಗಾಯಗಳ ಇನಾಮತಿ

ಕೆಲವೋ

ಮಾಸದ ನೆನಪಿನ ಬರೆಗಳು

ದವಾಖಾನೆಯ ಮದ್ದನೊಲ್ಲದ

ಪಾಯಿಖಾನೆಯ ವ್ರಣಗಳು!

ಚರಿತ್ರೆಯ ಬೀಸಿನಲ್ಲಿ ಕತ್ತರಿಸಲ್ಪಟ್ಟ

ರಾಜಗಾಯಗಳು!

ಹಕೀಮರ ಕೈಗುಣದ ಮರ್ಜಿಗೊಗ್ಗದೆ

ಶತಮಾನದ ನೋವ ಶಪಿಸುತ್ತಾ

ಕೊತಕೊತನೆ ಕುದಿದರೂ, ಬೇಯಲ್ಲೊಲ್ಲದೆ

ತಕಪಕನೆ ಕುಣಿವ ನನ್ನ ಜನಾಂಗದ

ಮರ್ಮಾಂಗದ ತುಕಡಾಗಳು !

೩

ಓ

ಅಲ್ಲಾಹು

ಈ ನನ್ನ ಗಾಯಗಳ ಬಿಸ್ಮಿಲ್ಲಾ ಮಾಡಿ

ಹಲಾಲ್ಕಟ್ ಮಾಡಿಬಿಡು!

ನಮ್ಮ ಬದುಕಿನೊಳಗೆ ಚೆಲ್ಲಾಟವಾಡಿರುವ!

ಸೈತಾನ ಸಮಾಜದ

ಸೋಗಲಾಡಿತನದ ಮೇಜವಾನಿಗೆ

ಖುರ್ಬಾನಿಯಾಗಲಿ, ಯಾ ಬಿರಿಯಾನಿಯಾಗಲಿ!

೪

ನನ್ನ ಉರಿದು ತಿನ್ನುವ

ಚಾಕಣದ ಅಂಗಡಿಗಳಿಗೆ

ನನ್ನ ಗಾಯಗಳ ಕೀವು ನೆತ್ತರು ಚೆರುಬಿ

ಬಿಕರಿಯಾಗಲಿ!

ಅಲ್ಲಿಂದ ನನ್ನರವರವಷ್ಟೇ

ಕರಿಕಲು ಮಾಡಿದ

ಜಾತಿಯ ಕಮಟು ವಾಸನೆ

ಸನಾತನಿಗಳ ಮೂಗನಡರಿ, ಹೊಟ್ಟೆ ತೊಳಸಿ

ಶತಮಾನಗಳ ಪಾಪದ ಕೊಡ ತುಂಬಿ ತುಳುಕಲಿ

ಓ ದೇವರೇ.



ಆತ್ಮದ ಗಟರುಗಳಲ್ಲಿ ಪಾಚಿಗಟ್ಟಿದ

ದಿವ್ಯಮಂತ್ರಗಳ ನಾತವ ಗುಡಿಸಿಬಿಡುವ

ಶುಚಿಯಾದ ಪೊರಕೆಯೊಂದನ್ನು

ನನಗೇ ಕರುಣಿಸು

ಅವರಿಗಂಟಿದ ಈ ದಿವ್ಯ

ಮಲಮೂತ್ರಗಳ ಶುಭ್ರಗೊಳಿಸುವ

ಜಗದ ಜಲಗಾರನ ಕೆಲಸ

## ಕಪ್ಪು ಮನುಜರು

**- ಇಂದೂಧರ ಹೊನ್ನಾಪುರ**

ಕಪ್ಪು ಮನುಜರು ನಾವು ಕಪ್ಪು
ಮನುಜರು, ಈ ಮಣ್ಣ ಕರಿಯೊಡಲ
ಕೆಸರಲ್ಲಿ ಮಿಂದು ಬಂದವರು.

ಪರಂಪರೆ ಪುರಾಣಗಳ
ಕಚ್ಚರುಕ ರಾಜರುಗಳ
ದೇವಾನುದೇವತೆಗಳ
ಕಂದು ಕಾಲಡಿ ಸಿಕ್ಕಿ
ಕೆಂಬೆವರ ಸುರಿಸಿ ಕರೀ
ಮುದ್ದೆಯಾದವರು
ಯುಗ ಯುಗದ ಬಸಿರಲ್ಲಿ
ಬರೇ ಭ್ರೂಣವಾದವರು.

ಮೈ ಚೆಲ್ಲಿ ಮಡಿ ಹಾಸಿದವರು
ಕಸಗುಡಿಸಿ ಹೇಲೆತ್ತಿದವರು
ಭರಿಪ್ರಾಯದ ನಮ್ಮಕ್ಕ ತಂಗಿಯರ
ಮಿಂಡತಿಯರಾಗ ಬಿಟ್ಟವರು
ಖದೀಮ ಒಡೆಯರ ಮನದೀಪ
ಬೆಳಗಿಸಲು ದುಡಿದುಡಿದು
ನಡುಬಗ್ಗಿ ನರಸತ್ತವರು
ಹೆಂಡಕುಡಿದು ಬುಂಡೆ ಉಳ್ಳಾರೆ
ಮೈ ಮರೆತು ಮಲಗಿದವರು

ತುತ್ತು ಕೂಳಿಗಾಗಿ ಸತ್ತ ದನಿಯವರೇ

ತುಂಡು ಅರಿವೆಗಾಗಿ ಬತ್ತಿ ಹೋದವರೇ

ಓ ಕಪ್ಪು ಜನರೇ ಬಂಧು ಬಾಂಧವರೇ



ಎಲ್ಲಿ ನಿಮ್ಮ  ಸ್ವರ, ಎಲ್ಲಿ ನಿಮ್ಮ ದನಿ

ಕರಿಯೊಡಲ ಕೆಂಪುಸಿರು ಎಲ್ಲಿ?

ಈ ಮಣ್ಣ ಮಕ್ಕಳು ನೀವು

ನಿಮ್ಮೊಡಲ ಉಸಿರೇ ನಮ್ಮ ಹಾಡು

ಹಾಡು ಹಾಡುವ ಮುನ್ನ

ದನಿಗೂಡ ಬನ್ನಿ ಮನಗೂಡ ಬನ್ನಿ

ಓ ಬನ್ನಿ ಬಂಧುಗಳೇ

ಕ್ರಾಂತಿಪಥಕೆ

## ಉಲಿಗದ್ದಿಗೆ ಮೇಲೆ ಬೋಳು ಜಂಗಮನ ತಂಬೂಲಿ ಪದ

**- ಮಹಾದೇವ ಶಂಕನಪುರ**

ಕೇಳು ಕೇಳು ನನಕಂದ ನಿಜಶರಣೆ ನೀಲಮ್ಮ

ಮಲ್ಲಿಗೆ ಮಾದೇವಿ ಮಗ ನರಬಲಿ ನಗುನಗುತ ಎದ್ದು ಬರಲಿ

ಕಲ್ಲುಬಸವ ಗುಟುರಾಕಿ ಕಲ್ಲು ಸಕ್ಕರೆ ಮಾತಾಡಲಿ

ಹಾಳಾದ ದಿನ ಕಲ್ಯಾಣ ನಾಳೆ ಹಾಲು ಸಾಗರವಾಗಲವ್ವ

    ಅಂದು ಹಾಡಿದ ಹಾಡು ಅಲ್ಲೆ ಅಲೆದಾಡುತಿದೆ ಇನ್ನು

    ಅಟ್ಟ ಆಕಾಶವ ದಾಟಿ ಕೇರಿ ಒಳಗಲ

    ಅರಳಿಮರದ ತಂಪು ನೆರಳಾಗಿ ತೆವಳುತ

ಎಂದೋ ಅವ್ವ ಗಲ್ಲದ ಮೇಲೆ ಹರಿಸಿದ್ದ ಹಾಲು ಬೆಲ್ಲದ ಪಾಕ

ಹೆಪ್ಪುಗಟ್ಟಿದೆ ಇಷ್ಟು ವರುಷ ಕಳೆದರು

ತುತ್ತು ತುತ್ತಿಗೂ ಅಮೃತದ ಮತಿಯಾಗಿ

    ಅಯ್ಯ ರಸಸಿದ್ದನೆ ಋಷಿ ಸಿದ್ಧನೆ

    ಪಾತಾಳ ಪುಸುಮವಾಗಿ ಬಿರಿದು

    ಬಾನು ಭುವಿಯಗಲಕ್ಕೂ ಹರಡಿ

    ಘಮ್ಮನೆ ಮುತ್ತಿಕೊಳ್ಳುವೆ ಏಕೆ? ಮೂಗು ಮೊಗದ ತುಂಬ

ಕಂಡೂ ಕಾಣದಂತೆ ಖಂಡಾಯದ

ತೊಗಲ ಮಂಡೆಯ ಹೂದಂಡೆಯ ಮೇಲೆ

ವಾಲಾಡಿ ಬರುವವರಾರು ಲಿಂಗಯ್ಯ ಚನ್ನಯ್ಯ?

ಅಕ್ಕಳಿಸಿ ಎಷ್ಟೊಂದ ಮುಕ್ಕಳಿಸಿಕೊಂಡೆ

ಮೂಗಂಡುಗೆ ಭಂಗಿಯ ಮೂರು ದಮ್ಮಿಗೆ

ದ್ರವಿಡ ದೇಶದೊಳಗೊಂದು ವಿಸ್ಮಯ ಪ್ರತಿಮೆ ನೀನು

ನೀನೆಂತ ಸಂತನೊ ಅರಳಿಮರದಯ್ಯ ಬೂದಿ ಸಿದ್ಧ?

ಕರೆಯಬಹುದೆ ಹಾಗೆ ತಾಯಮ್ಮ

ಕಣ್ಣ ಮುಂದೆ ಕರುವ ಕೊಲ್ಲುತಿರುವವರಾರು?



ಚಿಟ್ಟಳ್ಳ ಎಣ್ಣೆಯಲಿ ಜೋತಿರ್ಲಿಂಗವ ಹಚ್ಚಿಟ್ಟು

ಕತ್ತಲ ರಾಜ್ಯದೊಳು ಬೆಳಕ ಬಿತ್ತುತಿಹರು

ಎಲ್ಲಿಂದಲೋ ಬಂದವರು ಅಲ್ಲಲ್ಲಿ ನಿಂತವರು ಕುಂತವರು.

ಜಲ ಬಾವಿ ಒಳಗೆ ಪವಡಿಸಿ ಕೀರೆ ಸೊಪ್ಪಾಗಿ

ನಳನಳಿಸಿ ನಕ್ಕವರು ಘನನೀಲಿ

ಕೊಳಕು ಜಂಗಮ ಉಳುಕು ಜಂಗಮ

ಸಲ್ಲುವುದಿಲ್ಲ ಕಲ್ಯಾಣಕೆ ಬೋಳು ಜಂಗಮ

ಶಿವಶಿವ ಪರಮಾತ್ಮ! ಕಪ್ಪದೂಳತದ ಕತೆ ಕೇಳಿಲ್ಲ

ಕಳಚೂರಿ ಕುಲಜರು ....

ಸೇದು ಹೋಗುವುದು ನಾಲಿಗೆ

ಸೀದು ಬೂದಿಯಾಗುವುದರ ಏಳಟ್ಟಿತೊಟ್ಟಿ

ಸಿರಿ ಸಂಪತ್ತು ಇಂದು ನಾಳೆ.

ನುಡಿಯುತಿದೆ ಬಾರಿ ತಂಬೂರಿ ಉರಿಗದ್ದಿಗೆಯ ಮೇಲೆ



## ಚಗ್ಗೋಡು

**ಎಂ.ಎಸ್.ಶೇಖರ್**

ಭಯ

ಭಯ, ಭಯ

ನನ್ಮುಟ್ಟೂರೆಂದರೆ

ಇನ್ನಿಲ್ಲದ ಭಯ.

ಚೆಡ್ಡಿ ಲಾಡಿ ಕಟ್ಟಲು ಬಾರದ

ಗೊಣ್ಣೆ ಮುಸುರೆ ತೆಗೆಯಲು ಬಾರದ

ಪಟೇಲನ ಎಳೆಯ ಪ್ರ

ಶತಾಯುಷಿ ನನ್ನಜ್ಜನನ್ನು

ಕರೆವ ಪರಿಯ ಕರ್ಕಶ ಧ್ವನಿ

ನನ್ನ ಕಿವಿಯೆಡೆಗೆ ಬಿದ್ದಿತೆಂಬ ಭಯ.

ಬಸ್ಸಿಳಿದು ಚಕ್ಕೋಡ ದಾಟಿ

ಊರ ಓಣಿಯಲ್ಲಿ ಹಾದು ಹೋಗುವಾಗ

ನಗರದಲ್ಲಿ, ಯಾರೂ ಕ್ಯಾಬಿನ್ಯ ಅನ್ನದ

ನನ್ನ ಡ್ರೆಸ್ಸು, ಮೇಲುಕೇರಿಯ

ಸೋರಿಗಳ ಕಣ್ಣು ಕುಕ್ಕಿ

ಓ.... ಇನ್ನ ಮಗ ಅಲ್ವಾ...!

ಎಂಬ ಅವರ ಬಿಂಕದೋರೆ ನೋಟಕ್ಕೆ

ಉರಿದ್ದೋದೇನೆಂಬ ಭಯ.

ದಸಂಸದ ಹೆಚ್ಚಾಸ್ ಚೆಲುವ ತ್ಯಾಗದ್ದೋರು

ಏನೇ ರಸಭರಿತ ಭಾಷಣ ಜಡಿದರೂ

ಅದ ತನ್ನಂಡಿಗೆ

ಸೀಟೆಸೆದು, ನಮಗೆಲ್ಲ ನೀರಿಳಿಸಿ

ಊರೊಳ್ಗೆ ಇಕ್ಕಿಸಿಕೊಂಡು ಬರುವ

ಎಲೆ ಅಡಿಕೆ ನವರಸಮ್ಮನ

ನಾಟ್ಯರಾಣಿ ಭಂಗಿ ಕಂಡೀತೆಂಬ ಭಯ

ಬೇಡ,

ಊರ ಸಹವಾಸವೇ

ಬೇಡ ಎಂದು, ಲಕ್ಷಾಂತರ ಕ್ಯೂನಲ್ಲಿರುವ

ಬಿಡಿಎದ ಮೂವತ್ತು - ನಲವತ್ತಕ್ಕೆ

ಅರ್ಜಿ ಗುಜರಾಯಿಸಿ

ಕೂತು ತೂಕಡಿಸುತ್ತಿರುವೆ

ಬುದ್ಧಗುರುವಿನ ಧ್ಯಾನದಲ್ಲಿ

ಭಯ ಮುಕ್ತಿಗಾಗಿ.

ಚಪ್ಪೋಡು = ಚಟ್ಟೋಡು, ಸ್ವತ್ತು,

(ನಿಮ್ಮಪ್ಪನ್ ಚಪ್ಪೋಡೇಟ್ಲೆ ಎನ್ನುವ ಬೈಗುಳ)



## ನಾವು ಏನಾಗಿದ್ದೇವೆ?

**- ಜೆ.ಪಿ.ದೊಡ್ಡಮನಿ**

ತುಂಡು ತುಣುಕು ತೊಗಲನ್ನು

ಒತ್ತಟ್ಟಿಗೆ ಇಟ್ಟು ಅದಕ್ಕೊಂದು ಆಕಾರ ಕೊಟ್ಟು

ಅದೇ ಎಳೆಯಿಂದ ಹೊಲಿದು

ಮೆಟ್ಟು ಮಾಡಿ ಪಾದಕ್ಕಿಡುವ ಸಮಗಾರ

ನಾವು ಕೆಲವೊಮ್ಮೆ ಅವನೇ

ಆಗಿರುತ್ತೇವೆ.

ಅವರಿವರ ಮನೆಯ ತುಣುಕ

ವಿಷಯಗಳನ್ನೇ ಜೋಡಿಸಿ ಹದಗೊಳಿಸಿ ಗಾಳಿಗೆ ಹಾರ ಹಾಕಿ

ಕೆಲವರ ಮನೆ ಮನ ಒಡೆಯುತ್ತೇವೆ.

ಹೆಂಗಳೆಯರ ತಾಳಿ ಹರಿಯುತ್ತೇವೆ

ಪರಶುರಾಮನ ಆಯುಧಕೆ ಆಹುತಿಯನ್ನೂ ಹುಯ್ಯುತ್ತೇವೆ.

ಕೊನೆಗೆ ನಮ್ಮದೇನೂ ಇಲ್ಲವೆಂದು ಬೀಗುತ್ತೇವೆ.

ಕಡಿದು ಕೊರೆದು ತೀಡಿ

ಕೊನೆಗಳು ಸೇರುವೆಡೆಗಳಲ್ಲಿ ಮೊಳೆ ಹೊಡೆದು

ಕಿಟಕಿ, ಬಾಗಿಲು, ಸೂರು ಮಾಡಿ

ಆಶ್ರಯವಾಗುತ್ತಾನೆ ಬಡಿಗೌಡ

ನಾವು ಯಾರಿಗೆ ಆಶ್ರಯವಾಗುತ್ತೇವೆ?

ನಡೆ-ನುಡಿ, ಅಚೌರ್ಯ-ಬ್ರಹ್ಮಚರ್ಯ

ಸಮ್ಯಗ್ ದರ್ಶನ-ಜ್ಞಾನ-ಚಾರಿತ್ರ್ಯ

ಯಾವುದಕ್ಕೆ ಒಗ್ಗುತ್ತೇವೆ?

ವ್ಯಂಗ ಪರಿಹಾಸ್ಯ ಕಟುಕ್ಕಿ ಉರುಳಿಸುವ

ಸಿಡಿಮದ್ದುಗಳೇ

ಲಂಕಾ ದಹನದ ವಾನರರೇ

ಏನೆಂದು ಕರೆದುಕೊಳ್ಳುವುದು?

ನಾವೇಕೆ ಮನೆಮನಗಳನ್ನು

ಜೋಡಿಸುವ ಕೊಂಡಿಯಾಗುವುದಿಲ್ಲ.

ಗರ್ಭಸ್ಥ ಶಿಶುವಿಗೆ ಸಿರಿಂಜು ಮಾತ್ರೆಗಳ



ಆಹಾರ ಹಾಕಿ ಶ್ರೀರಕ್ಷೆ ನೀಡುವ ವೈದ್ಯ.....

ಕಲ್ಪನೆಯ ಸೌಧಕ್ಕೆ

ಹದವರಿತು ಸಾಮಗ್ರಿ ಸೇರಿಸಿ

ರೂಪನೀಡುವ ಎಂಜನೀಯರು

ನಾವೇಕೆ ಅವರಾಗುವುದಿಲ್ಲ

ವ್ಯಕ್ತಿತ್ವಕ್ಕೆ ಆಕಾರ ನೀಡುವುದಿಲ್ಲ

ಮುಳ್ಳು ಬೇಲಿಗಳಿಂದ ಕಾಲು ಕಿತ್ತಿ

ಜಡ್ಡು ಹಿಡಿದ ರೆಕ್ಕೆಗಳ ಕೊಡವಿ ಬಿಚ್ಚಿ

ದಿಗಂತದಲ್ಲಿ ದಿಗಂಬರವಾಗಿ

ನಾವೇಕೆ ನೇಸರನಿಗೆ ಮುಖಮಾಡಿ ಹಾಡುವುದಿಲ್ಲ?

## ನೇಣು

**ಸೂರ್ಯಕಾಂತ ಸುಖ್ಯಾತ್**

ಕಥೆಯ ಹೇಳಿದ ಅಜ್ಜಿ

ಹಳೆಯ, ಬೆಚ್ಚನ ಕೌದಿ ಹೊದಿಸಿದ ಅಜ್ಜಿ

ಅವರಪ್ಪ ನೆಟ್ಟಾಲದ ಮರ ತೋರಿದ್ದಜ್ಜಿ

ನನ್ನನದಕ್ಕೇರಿಸಿ ಖುಷಿ ಪಡುತ್ತಿದ್ದಜ್ಜಿ

ಮಾಯದಾ ಚಾಪೆ, ಮಂತ್ರದಾ ಕೋಲು

ಕಿನ್ನರ ಕಿಂಪುರುಷರ ಕಥೆಗಳು

ದೇವತೆಗಳ ಸ್ತುತಿಗಳು

ಅಜ್ಜಿ ಠೀಕಿದ್ದಾಗ ಕೇಳಿದ್ದು ಧಾರಾಳ

ಕೈ ಚೆಲ್ಲಿ ಕುಳಿತಿರುವೆನೀಗ ನಿರಾಳ

ಚಿರಂಜೀವಿಗಳ ಕಥೆ ಹೇಳಿದ,

ಸಾವಿರ ಸಾವಿರ ಜನರ ಆ ಮೂಲಕ

ಚಿರಂಜೀವಿಗೊಳಿಸಿದ ನನ್ನಜ್ಜಿ

ತಾ ಚಿರಂಜೀವಿಯಾಗದೆ ಈಗ

ಅರೆಜೀವ, ಖುಷಿ ಬೀಳುತ್ತಿದ್ದಾಳೆ

ಕಥೆ ಹೇಳಿದಳೊ ಬೆಳಬೆಳ್ಳಗೆ

ಯಾಕೋ ಕೊರಗಿಹಳು ಒಳಗೊಳಗೆ

ಆಗಿಹಳು ಬಲು ಬಲೂ ತೆಳ್ಳಗೆ, ಇನ್ನು

ಶಾಶ್ವತ ನೇಣು ಹಾಕಿಕೊಂಡಿದ್ದಾಳೋ ನನ್ನೊಳಗೆ

ನೇಣಿಂದಿಳಿಸಲೋ, ಉಳಿಸಲೋ ಎಂಬ ಚಿಂತೆ

ಒಮ್ಮೊಮ್ಮೆ ಅನ್ನಿಸುತ್ತದೆ, ಅನ್ನಿಸುತ್ತದೆ

ಕಥೆಯ ಕಟ್ಟನು ಎತ್ತಿ ಕುಟ್ಟಲೇನು,

ಹಳೆಯ ಕೌದಿಯ ಕಿತ್ತು ಸುಟ್ಟುಬಿಡಲೇನು

ಅವರಪ್ಪ ನೆಟ್ಟಾಲಕ್ಕೆ ಕೊಡಲಿ ಇಡಲೇನು ಎಂದು

ಆದರೆ ಈ ನನ್ನ ಕೈ, ನನ್ನದೇ ಆದ ಈ ಕೈ,

ಕೈ ಕೊಟ್ಟುಬಿಡುತ್ತದೆ.



**ಹೇಟೆ ಹನುಮನ ಕನಸು**

**- ಹಲೀಶ್‌ಕಟ್ಟೆ ಬೆಳಗು**

ನೋಡು

ನೋಡುತ್ತಿದ್ದಂತೆ

ಓಡಿ ಬಂದ ಹುಂಜ

ಬಲ ರೆಕ್ಕೆ ಬಿಡಿಸಿ ಕಾಲಿಗೆ ತೊಡಿಸಿ,

ಕೊಕ್ಕು ನೆಲಕ್ಕೆ ಕುಕ್ಕಿ

ಕಾಲಿನ ಚಿತ್ತಾರ ಬಿಡಿಸಿ

ಕಾಳಿನಾಸೆಗೆ ಬಂದ ಹನುಮನ

ಹೇಟೆಯ ಜುಟ್ಟಿಡಿದು ಮೆಟ್ಟಿತು.

ನೋಡೋ ಹಿರಿಯರು

ಆಡೋ ಹುಡುಗರು

ಅದ್ದಲಿಸಲಿಲ್ಲ,

ನಾಲಿಗೆ ಉದ್ದ ಮಾಡಿ

ಬಹಳ ತೀಟೆಯದು

ಕೇರಿಯ ತುಂಬೆಲ್ಲ ಇದರದೇ ಮರಿ

ಬಿತ್ತರಗೊಂಡ ನಗುವಿನ ಲಹರಿ.

ಹೇಟೆ ಕಂಡ ಹನುಮನ ಕಣ್ಣು

ಬಯಲಾಗಿ ಬಯಲಾಚೆಗೂ ಬಯಲಾಗಿ

ಆಕಾಶದಗಲವಾಗಿ,

ಹುಟ್ಟುವ ಮೊಟ್ಟೆಯು ಕಣ್ಣೋಳಗೆ

ಮರಿಯಾಗಿ, ಹೇಟೆಯಾಗಿ, ಹುಂಜವಾಗಿ....

ಅಳತೆ ಮೀರಿದ ಎದೆಯೊಳಗಿನ ಕನಸು.

ಮಾನದ ಅರಿವೆಗೆ ಒಂದು

ಉಪ್ಪು ಎಣ್ಣೆಗೆ ಮತ್ತೊಂದು

ದೇವರ ಹರಕೆಗೆ ಇನ್ನೊಂದು

ಹಬ್ಬಕ್ಕೆ ಮೊಗದೊಂದು

ಸಾಲ ತೀರಿಸುವುದಕ್ಕೆ ನೆಂಟರ ಓಲೈಕೆಗೆ...

ಹೀಗೆ ಹನುಮನ ಕನಸು ಬೆಳೆಯುತ್ತಾ ಹೋಯ್ತು

ಹುಂಜದ ಋಣವ ಹೊಟ್ಟೆಯಲ್ಲಿ ಹೊತ್ತ

ಹೇಟೆ, ಮೈ ಕೊಡವಿ ಸಿಗದ ಕಾಳಿಗೆ ತಡಕಿ

ನಡೆಯಿತು ಮೇವು ಹುಡುಕಿ.

## ನನ್ನವರು

- ಕೃಷ್ಣ ಜನಮನ

ಮನೆಯ ಒಳಗೆ ಮನೆ

ಗೋಡೆ ಮೇಲೆ ಗೋಡೆ

ಗೋಪುರದ ಮೇಲೆ ಗೋಪುರ

ಕಟ್ಟಿ ಕಡೆಗೆ ಹೊರಗಾದವರು ನನ್ನವರು

ಗೆರೆಯ ಮೇಲೆ ಗೆರೆ

ನೀರ ಹಿಂದೆ ನೀರು

ಪಯಿರ ಪಕ್ಕ ಪಯಿರು

ತೆನೆಯ ಮೇಲೆ ತೆನೆ

ಬೆಳೆದರೂ ತಿನ್ನಲಾಗದವರು ನನ್ನವರು

ಕಬ್ಬು ಕಡಿದು

ಬತ್ತ ಬಡಿದು

ಕಲ್ಲು ಹೊಡೆದು

ಶ್ರಮದ ದುಡಿದು

ಕೂಲಿ ಮಾಡಿ ತಿನ್ನೋರು ನನ್ನವರು

ಹಸಿದುದ ಬಂದು ಹಸಿದುಕೊಂಡು

ಮೈಯ ಬಗ್ಗಿಸಿ ಆಯಸ್ಸ ಕುಗ್ಗಿಸಿ

ಶ್ರಮವ ಹರಿಸಿ ಬೆವರ ಸುರಿಸಿ

ಬಿಸಿಲು ಬೇಗೆಯಲ್ಲಿ ಬೆಂದು
ದುಡಿದು ತಿನ್ನೋರು ನನ್ನವರು

ಮನೆಯ ಸೂರ ನೀರಿನೊಳಗೆ
ಉದುರೊ ಮಂಜಿನ ಕಾಳ ನಡುವೆ
ಹರಿವ ನೀರ ಗುಂಡಿಯೊಳಗೆ
ಶೀತಗಾಳಿಯ ಉದರದೊಳಗೆ
ತೋಯ್ದು ನಡುಗಿ ಕುಳಿತವರು ನನ್ನವರು



ಬೆಳಕ ಕಾಣದಿರುವವರು
ಬಾವಿಯೊಳಗೆ ಕುಳಿತವರು
ಚಿಂದಿಬಟ್ಟೆಯುಟ್ಟವರು
ನೋವ ನುಂಗಿ ನಲಿದವರು
ಸಾಲ ಕಟ್ಟಲಾಗದೆ ಸತ್ತವರು ನನ್ನವರು

ನೋವ ಮೇಲೆ ನೋವ ತಿಂದವರು
ಸಾವ ಮೇಲೆ ಸಾವ ಕಂಡವರು
ಆರೋಗ್ಯ ಕೇಂದ್ರ ಕಾಣದವರು
ಸರಸ್ವತಿಯ ಮರೆತವರು
ಸಿರಿವಂತರ ಗೋವುಗಳು ನನ್ನವರು

## ನೆರಳಗೂ ಮೈಲಿಗೆ

**ಸದಾಶಿವ ದೊಡ್ಡಮನಿ**

ಸುಪ್ರಭಾತದ ಸಮಯ

ಸುವರ್ಣ ವರ್ಣದ ಎಳೆಯ ರವಿಯ ಹೊಂಗಿರಣ

ಅರೆಬೆತ್ತಲೆ ಬಟ್ಟೆ, ಕರಲತೆ ಜನಿವಾರ

ಧರಿಸಿದ ಶಾಸ್ತ್ರೀಗಳ ಬಾಯಿತುಂಬ

ವೇದ-ಶಾಸ್ತ್ರ-ಪುರಾಣ

ಅದ್ದೂರಿ ಪಠಣ

ನೆತ್ತಿಯ ಮೇಲೆ...

ಹೊತ್ತ ಸೆಗೆಣಿಯ ತಟ್ಟೆ ಎಸೆದು

ಹೊಂಡದ ನೀರಲ್ಲಿ ಮಿಂದು

ರಾಘವೇಂದ್ರನ ದರುಶನಕ್ಕೆಂದು

ಲಗು-ಬಗೆ ಬಂದ, ಧನಿಯ ಜೀತದ ಮಗ

ಕರಿಯನದು ಹನುಮಂತನ ಭಕ್ತಿ

ಸ್ವಚ್ಛಂದ ನಗೆ ಬೀರುತ್ತ...

ಶಾಸ್ತ್ರಿಗಳ ಎದಿರು ನಿಂತ.

ರಾಘವೇಂದ್ರನ ಪೂಜೆಗೆಂದು

ಹೂ-ಪತ್ರಿ ಮುಡಿವ

ಶಾಸ್ತ್ರೀಗಳ ಮೈಮೇಲೆ ಬಿತ್ತು

ಕರಿಯನ ದಪ್ಪ ಕಪ್ಪು ನೆರಳು

ಉರಗ ತುಳಿದಂತೆ, ಬೆಚ್ಚಿ ತಬ್ಬಿಬ್ಬಾಗಿ

ಕತ್ತೆತ್ತಿ ದೃಷ್ಟಿ ಬೀರಿ

ಕಂಗಳಲ್ಲೇ... ಕರಿಯನಳೆದ ಶಾಸ್ತ್ರೀ...

ತೂ.. ರಂಡೆಗುಂಡ, ಅಪಶಕುನ, ಅಪವಿತ್ರ

ತೊಲಗಾಚೆ, ನಿಲ್ಲದಿರುವ ಮುಂದೆ

ಅದಾವ ಶನಿ ಕಾದಿದೆಯೋ..... ದರಿದ್ರ ಮುಖ ಕಂಡೆ.

ದಾಪುಗಾಲಿಟ್ಟು, ಹತ್ತಿದ ಕೊಳಕ್ಕೆ ನೆಗೆದು,

ಮಡಿಯಿಂದ ಮಿಂಚಿನ ವೇಗದಿ ನಡೆದು

ರಾಘವೇಂದ್ರನ ಗರ್ಭಗುಡಿ ಸೇರಿ

ಶಾಂತಂ ಪಾಪಂ ಎಂದು



ದಢಾರನೆ ಕದಯಿಕ್ಕಿದರು.

ಮುಗ್ಧ ಮನದ, ಹಸುಗುಣದ ಕರಿಯ

ತೆಪ್ಪಗೆ ನಿಂತ.

ನೆಲಕ್ಕೆ ಬಿದ್ದ ನೆರಳ ಎದೆಯಲ್ಲಿ

ರೋಷ ಉರಿವ ಕೆಂಡ,

ಕಂಗಳಲಿ ಕಿಡಿಕಾರಿ, ಸಹನೆಯ ಕಟ್ಟೆಯೊಡೆದು

ಪ್ರಶ್ನಿಸಿತು-

ಈ ಜನಕ್ಕೇ.....

"ನಮ್ಮ ನೆರಳಿಗು ಮೈಲಿಗೆಯೇ....?'

ಮಲ-ಮೂತ್ರ ಉಂಡ, ಭ್ರಷ್ಟ - ದುಷ್ಟ- ಶಿಷ್ಟರನು

ಹೊತ್ತ - ಈ ಭೂಮಿತಾಯಿಗೆಲ್ಲಿದೆ

ಮಡಿ-ಮೈಲಿಗೆ ಬೇಧ?

ಕರಿಯ ತುಟಿ ಬಿಡಿಸಲಿಲ್ಲ

ಧ್ವನಿ ಎತ್ತಲಿಲ್ಲ.

ಆತನದು ಮತ್ತೇ

ಅದೇ ಸ್ವಚ್ಛಂದ ನಗೆ

ಹಾರಿ ಹೋಗುವ ಬೆಳ್ಳಕ್ಕಿಯತ್ತ

ಶುಭ್ರ ನೋಟ.

**ಕಾಕಾ -ಕಾಂಕ್ಷೆ**

**- ಕೃಷ್ಣಮೂರ್ತಿ ಚಮರಂ**

ಕೀರಲು ಕರ್ಕಶ ಕರಿತೊಗಲು

ಕರ್ಮವೇ ಕರ್ತನೆ?

ಕಾಮಳ್ಳಿ ಕಾಜಾಣ ಕೋಕಿಲ

ಕಪ್ಪಾದರೂ ಒಪ್ಪು

ನಮ್ಮದೇನಿದೆ ತಪ್ಪು?!

ಕನಸುಗಳಿವೆ ಕವಿತೆಗಳಿವೆ

ಕಾಲಾಂತರದ ಸತ್ಯ ಕಥೆಗಳಿವೆ

ಕಿತ್ತಡದ ಕಿಚ್ಚಿಲ್ಲ ಕಸುಬಲ್ಲಿ ಕಪಟವಿಲ್ಲ

'ಕಲಿ'ಗೇನು ಕಮ್ಮಿಯಿಲ್ಲ

ಆದರೇನು ಕರುಬುತನ.....!

ವೇದದಲ್ಲೂ ಗಾದೆಯಲ್ಲೂ

ಸ್ಮೃತಿ-ಕೃತಿ - ಸಂಸ್ಕೃತಿಯಲ್ಲೂ

ಕಟುವಾಗಿ ಕಡೆಗಣಿಸಿ ಬಿಟ್ಟರಲ್ಲ!!

ಕನಸುಗಳ ಕೊಂದರಲ್ಲ

ಕೀಳರಿಮೆಗೆ ಕುಕ್ಕಿದರಲ್ಲ

ಕೂಡದು........ ಕೂಡದು

ಕುಣಿಕೆಗಳ ಕಳಚೆಸೆಯಬೇಕು

ಕಳೆದ ಕನಸುಗಳ ಕಸಿಕಟ್ಟಿ

ಕುಸುರಿಯಿಂದ ಬೆಸೆಯಬೇಕು

ಕನವರಿಕೆ ಕಹಳೆಯಾಗಬೇಕು

ಕುಟಿಲತೆಯ ಕುಕ್ಕಿ, ಕಿಡಿಗಳನ್ನು ಹೆಕ್ಕಿ

ಕವಿದ ಕತ್ತಲ ಕರಗಿಸಬೇಕು

ಕೀಟಲೆ ಕೋಟಲೆಗಳಿಗೆ ಕಿಚ್ಚಿಟ್ಟು

ಸ್ಥಾನ ಸ್ಥಾಪಿಸಿಕೊಳ್ಳಬೇಕು

ಮಾನ-ಮಾನ್ಯತೆ ಗಳಿಸಿಕೊಳ್ಳಬೇಕು

ಸಮಾನತೆ ಸಹಬಾಳ್ವೆ ಸ್ಥಾಪಿಸಲೇಬೇಕು.



## ಹೆಜ್ಜೆಗಳು

**ಶಾಂತಾನಾಯ್ಡು ಶಿರಗಾನಹಳ್ಳಿ**

ಅಜ್ಜನ ನೆತ್ತಿಯ ಮೇಲೆ ರಾಜನೊತ್ತಿದ್ದ

ಗುಲಾಮಿ ಹೆಜ್ಜೆಗಳ

ನೂಪುರಗಳಾಗಿದ್ದ ಅಜ್ಜ

ಮಹಾರಾಣಿಯ ಮೃದುಪಾದಗಳಿಗೆ

ರಾಜನ ಸಿಂಹಾಸನದಡಿಯಲ್ಲಿ

ಅಜ್ಜನ ಕನಸುಗಳು ಹೂತು ಹೋಗಿದ್ದವು.

ಅಪ್ಪನ ಹೆಗಲ ಮೇಲೆಲ್ಲಾ

ಬ್ರಿಟೀಷರ ಕೆಂಪು ಕೆಂಪಾದ

ಬೂಟಿನ ಗುರುತು

ಸಾಲ ಮರಗಳಿಗೆ ನೇತು ಬಿದ್ದ ಹೆಣಗಳು

ಅಪ್ಪನ ಸಾವಿನ ಪ್ರತೀಕಗಳು

ನನ್ನ ಸ್ವತಂತ್ರಗೊಳಿಸಲು ಅಪ್ಪ

ಬ್ರಿಟೀಷರಿಗೆ ಬೆನ್ನು ಕೊಟ್ಟಿದ್ದ

ಇರಿದಿರಿದು ಹರಿದು ಹಂಚಿದರು ದೇಶ

ಹೌದಪ್ಪಗಳಿಗೆ .

ಅಪ್ಪಗೆ ತಿಳಿದಿರಲಿಲ್ಲಾ

ನನಗೆ ಸ್ವತಂತ್ರವೇ ಇಲ್ಲವೆಂದು

ಹೆಜ್ಜೆಗಳು ಬೆಳೆಯುತ್ತಲೇ ಇವೆ

ಮುಗಿಲೆತ್ತರಕೆ

ನನ್ನ ಕುಬ್ಜಗೊಳಿಸಿ

ದೈತ್ಯ ರೂಪವತಾಳಿ.....

## ಹಾಲು ಚೆಲ್ಲದ ಬೆಳ್ಳಂಬೆಳಕ ದಂಡೆ

- ವಡ್ಡಗೆರೆ ನಾಗರಾಜಯ್ಯ

ಕರಿಬಾನದ ಸಾಲು ಸುಳಿಮಂಡಲದ

ಮೂಲೆಗತ್ತಲಿನ ಕರಿಯ ಚಂದಿರನಿಗೆ

ಬೆಳದಿಂಗಳ ನಾಂಟೆನಾಡುವ ಸಾಗರದ

ನಾಗಾಭರಣದಂತೆ ಬೇವಿನ ಕೊರಳ ದಂಡೆ!

ನುಡಿಗಳೆದ ಕರಿಯ ಚಂದಿರನ ಕೋಡುಗಳಿಗೆ

ಮಾಣಿಕದ ಹರಕೆ ಕಳಸ ತುರಾಯಿ!

ಹೆಗಲ ಮೇಲಿನ ನೇಗಿಲ ಮೇಣಿ ಹಾಲು

ಕಣಜಗಳ ತುಂಬಿಸುವ ಬೆವರುಧೂಪ

ಇರುಳು ಹುಣ್ಣಿಮೆಯ ತನಿಗಿರಣದ ಕರಿಯ

ಚಂದಿರನೇ ನಿನ್ನ ಗುದ್ದೆ ಗುಡಿಸಲಿಗೆಲ್ಲಿಂದ ಬಂತೋ

ಆರಂಭದೆತ್ತಿನ ಗಿಲಕಿಯ ನೊಗದ ಕಪ್ಪ?

ರೋಣಗಲ್ಲಿನೊಡ ಹುಟ್ಟಿ ಬಂದು

ಮಧ್ಯಾಣದ ಬಿಸಿಲು ಮಚ್ಚೆ ಪಾವುಡ ಹೊದ್ದು

ಧಣಿಗಳಪ್ಪಣೆಯ ಹೊಂಬಾಳೆ ವನಕೆ

ಕೇಡಿಲ್ಲದ ಬೇಲಿಯಂತೆ ಸುತ್ತಿ

ಸಲುವಿದ ಎಲ್ಲೆಡ ಸರುಪ ನೀನು

ಸಕ್ಕಾಸರುಗ ನಿದ್ದೆ ಮಾಡುವಾಗ

ಅವರ ನೆರಳಿಲಿಲ್ಲದ ಮರದ ಬುಡಕ್ಕೆ

ಮಣ್ಣಾಗಿ ಮಣ್ಣು ತಿಂದು

ನಿನ್ನ ರಕ್ತಗೆಸರಿನ ತನುವ ಗುಡ್ಡೆ ಮೇಲೆ

ಆಕಾಶಕಬ್ಬಿದ ಅಂಬು;

ಮರುಗ ಮಲ್ಲಿಗೆ ಜಾಜಿ ಸುರಗಿ ಸಂಪಿಗೆ ಹೂವು

ತುರುಬುಳ್ಳ ಗರತಿಯರ ದೃಷ್ಟಿಗಣ್ಣಾಗಿ

ಸೆಳೆದು ಮಾರುದ್ದದ ಮಂಡೆಗೆ

ಹಾಲು ಚೆಲ್ಲಿದ ಬೆಳ್ಳಂಬೆಳಕ ದಂಡೆ!



## ನೊಂದವರ ನೋವುಗಳು

**ರಾಜಶೇಖರ ಮಾಂಗ್**

ನನ್ನವರು ನುಂಗಿದ ನೋವುಗಳು

ನನ್ನೆದೆಗೆ ತಾಕಿದಾಗ

ಮದ್ದು ಗುಂಡುಗಳಾಗಿ ಸಿಡಿಯುತ್ತೇನೆ

ಭಂಡರಿಗೆ ಇಲ್ಲಿ ಗಂಡನಾಗಿ ಪುಂಡರ ಮೂಳೆ ಮುರಿಯುತ್ತೇನೆ

ಮೂರು ತಿಂಗಳ ಮಗುವನ್ನು ಹೊಟ್ಟೆಗೆ

ಕಟ್ಟಿಕೊಂಡು ಅಟ್ಟ ಹತ್ತಿ ನಿಮ್ಮ ಅರಮನೆಯ

ಆವರಣಕ್ಕೆ ಸುಣ್ಣ ಬಣ್ಣ ಬಳಿಯುವ

ನನ್ನಮ್ಮನ ಕೈಗಳು ಹುಣ್ಣು ಬಿದ್ದಾಗ

ಹಣ್ಣಾಗುತ್ತೇನೆ ಕೆಲವೊಮ್ಮೆ ಸಣ್ಣಾಗುತ್ತೇನೆ

ನೀವು ಕೊಟ್ಟ ಕಳೆ ಧೋತರಕ್ಕೆ

ನೂರೆಂಟು ಹೊಲಿಗೆ ಹಾಕಿಕೊಂಡು

ನಿಮ್ಮ ಉತ್ಸವಗಳಲ್ಲಿ ಉಪವಾಸದಿಂದ

ದೀವಿಟಿಗೆ ಹಿಡಿದು ಹಲಿಗೆ ಹೊಡೆಯುವ

ನನ್ನಪ್ಪನ ಎಲುಬಿನ ಹಂದರಗಳು

ಹಲುಬುವಾಗ ಕರಗುತ್ತೇನೆ ಕರಗಿ ನೀರಾಗುತ್ತೇನೆ.

ಮೈಯಲ್ಲಿಯ ಅಂಗಿ ಮಾಸಿ ವಾಸನೆ ಹೊಡೆಯುತ್ತಿದ್ದರೂ

ಹೇಸಿಕೊಳ್ಳದೇ ಹಸಿವು ತೃಷೆ ಎನ್ನದೇ

ಹಗಲಿರುಳು ಹೆಂಟೆಯಲ್ಲಿ

ಒಂಟಿಯಾಗಿ ಕುಂಟೆ ಹೊಡೆಯುವ

ನನ್ನಣ್ಣನ ಕಣ್ಣುಗಳು ಕೆಂಪಾಗುವಾಗ

ತಂಪಾಗುತ್ತೇನೆ ಕಾಯ್ದ ಕಂಗಳಿಗೆ ಕೆಂಪಾಗುತ್ತೇನೆ.

ನಿಮ್ಮ ಕಪ್ಪು ಕಾಸಿನ ಆಸೆಗಾಗಿ

ಸೆರಗು ಹಾಸಿ ಸುಖ ಕೊಡುವ ನನ್ನ

ಸಹೋದರಿಯ ಸುಂದರ ಕನಸುಗಳು

ಕಮರಿಹೋಗುವ ದೃಶ್ಯವೊಂದು

ಕಣ್ಮುಂದೆ ಬಂದಾಗ ಕೆಂಡವಾಗುತ್ತೇನೆ

ಮುಂಡೆ ಮಕ್ಕಳ ಮುಂದೆ ಸವಾಲಾಗುತ್ತೇನೆ



**ಮೂರು ಸಾಲು ಮರ**

**(ಹಾಯ್ಕುಗಳು)**

**- ರವೀಂದ್ರನಾಥ್ ಎಸ್**

ಹೊಸ ಮನೆಯ ಬಾಗಿಲು

ತೆರೆದಾಗ

ಕಾಡಲ್ಲಿ ಮರಬಿದ್ದ ಸದ್ದು.

ಕುಂಬಾರನ ಮಗ್ನತೆಯಲ್ಲಿ

ಮಣ್ಣು

ಮಡಕೆಯಾಗಿ ಅರಳಿತು.

ಸ್ಮಶಾನದಲ್ಲಿ

ಹೂವರಳಿದೆ

ಸಾವಿನ ನಿರೀಕ್ಷೆಯಲ್ಲಿ.

ಅವಳು ಸೆರಗು ಹಾಸುತ್ತಾಳೆ.

ದಿನವೂ

ದುಃಖದ ನಿರಿಗೆಗಳ ಬಿಚ್ಚುತ್ತ...

ರಾಷ್ಟ್ರಧ್ವಜದ ದಾರಗಳು

ಚಮ್ಮಾರನ ಹೊಲಿಗೆಯನ್ನು

ಆಸಕ್ತಿಯಿಂದ ಗಮನಿಸುತ್ತಿವೆ.

ನೆಲದ ತುಂಬ ಹರಡಿದ

ಅವಳ ಮುಗುಳ್ನಗೆಗೆ

ಇರುವೆಗಳು ಮುತ್ತಿವೆ!

ಪುಟ್ಟ ಮಳೆ ಹನಿಯ

ಹೆಗಲ ಮೇಲೆ

ನೆಲವನ್ನು ಹಸಿರಾಗಿಡುವ ಜವಾಬ್ದಾರಿ.

ಏಸುವಿನ ಹಸ್ತದ ಮೂಲಕ ಹಾದು

ಹೋದ ಮೊಳೆ ತನ್ನದಲ್ಲದ ತಪ್ಪನ್ನು

ಕ್ಷಮಿಸುವಂತೆ ಕೋರಿತು.



ಎಲ್ಲ ಧರ್ಮಗಳನ್ನು

ದೂರವಿಟ್ಟಿದ್ದೇನೆ

ಅವು ರಕ್ತದ ರುಚಿ ಕಂಡಿವೆ. CP AGO (

ದಲಿತರು ಮುಟ್ಟದೆ ದುಃಖಪಟ್ಟ

ಕೆರೆ ಮೋಡವಾಯಿತು

ಹಟ್ಟಿಗೆ ಮಳೆಯಾಗಿ ಸುರಿಯಿತು.

**ತಮಟೆ ಕೇಳುತ್ತೈತೆ?**

**ಡಾ. ಎಂ. ನಂಜಯ್ಯ ಹೊಂಗನೂರು**

ನನ್ನವರ ತಮಟೆಯ ಬಡಿ ಬಡಿತ

ಪರಂಪರೆ ತರತಮಗಳನು ಹೇಳುತ್ತ

ಸದಾ ಹಾಡುತ್ತ ಜೋಲುತ್ತ

ವಾಲುತ್ತ, ಕುಣಿಯುತ್ತ,

ಕೇರಿಯೊಳಗೆ ಕೇರಿಯಾಗುತ್ತ

ಬೀದಿಯೊಳಗೆ ಬೀದಿಯಾಗುತ್ತ

ಎಲ್ಲರೊಂದಿಗೂ ರಾಜಿಯಾಗುತ್ತ

ಆಗಾಗ ಮೌನಿಯಾಗುತ್ತ

ಆ ಬಡಿತದ ಸದ್ದು ನಿಶ್ಯಬ್ದವಾಗುತ್ತ

ಮತ್ತೆ ಏಳುತ್ತ ಏಳುತ್ತ ಪ್ರಖರವಾಗುತ್ತ .

ತಮಟೆಯ ಗತ್ತು ಗಮ್ಮತ್ತು

ವರಸೆಗಳಿಗೆ ಸೋಲದವರಿಲ್ಲ,

ಎಲ್ಲೆಂದರಲ್ಲಿ ಅದು ಅಬ್ಬರಿಸುತ್ತ

ಎಲ್ಲರನ್ನು ಎಚ್ಚರಿಸುತ್ತ

ಹೆಣ್ಣುಗಂಡೆಂಬ ಭೇದದ,

ಬಡವ ಬಲ್ಲಿದ ಜಾತಿ ಮತ

ವಯೋಮಾನದಂತರವಿಲ್ಲದೆ,

ಮುದುಕೀರು, ಮೋಟರು

ಮಕ್ಕಳು ಮರೀರು ಎನ್ನದೆ,

ಎಲ್ಲರೊಳಗೊಂದಾಗಿ ನುಡಿಯುವ

ಹಾದಿಯೊಳಗಣ ಮೋಡಿಗಾರ

ತಮಟೆಯ ಸದ್ದಿನೊಳಗಿದೆ

ನಾನೇಕೆ ಗುಡಿಯಾಚೆ, ಊರಾಚೆ ?

ದೇವಸ್ಥಾನದ ಗರ್ಭ ಗುಡಿಯೊಳಗೆ

ಗರ್ಭ ಸಂಬಂಧಿ ಮೃದಂಗ

ತಬಲಗಳಿಗಿರುವ ಮಾನ್ಯತೆ, ನನಗೇಕಿಲ್ಲ ?

ಅವುಗಳ ಹಾಗೆ,

ನನ್ನದೂ ಚರ್ಮದ ಹೊದಿಕೆಯಲ್ಲವೆ ?

ನಾನು ಮಾತ್ರ ಹೊರಗೆ, ಅವು ಒಳಗೆ ಯಾಕೆ ?

ಹೀಗೆ ಮಾಡಿದವರಾರು ?

ಇದು ರಾಜನೀತಿಯೇ, ಇಲ್ಲ, ಜಾತೀನೀತಿಯೇ?

ಹಾಗಾದರೆ, ನಾನು ಮಾಡುವ

ಬೆವರಿನ ಕಾಯಕದ ಬೆಲೆಯೇನು?

ಆದರೂ ಚಿಂತೆ ಇಲ್ಲ

ನಾನು ಹೊರಗಿದ್ದರೂ ನನ್ನ ಬಡಿತದ ಲಯದಿಂದಲೇ

ನಿಮ್ಮನ್ನು ಹೊರಗೆ ಕರೆಯಿಸಿಕೊಳ್ಳಬಲ್ಲೆ.

ಬರಿಮೈಯಲ್ಲಿ, ಕರಿಮೆ ಹಾಕ್ಕೊಂಡು ಬಡಿಯಬಲ್ಲೆ

ನನ್ನ ತಮಟೆಯ ನಾದವೇ ಆ ತರಹದ್ದು

ಅದು ನನ್ನ ಪೂರ್ವಜ್ಜರದು

ಹೆಂಡ, ಬಾಡು, ಮೀನು, ಸೀಗಡಿ, ನಳ್ಳಿಯ .

ತಾಕತ್ತಿನಿಂದ ಅದು ಬಂದದ್ದು.

ಊರಿನ ಮಾರಮ್ಮ ಮಸಣಮ್ಮ, ಚೌಡಮ್ಮ

ಕಾಳಮ್ಮ, ದುರುಗಮ್ಮರ ಪೂಜೆಯ ನಾ ಬಲ್ಲೆ

ಆದರೆ .

ರಾಮ, ಕೃಷ್ಣ, ನಾರಾಯಣ

ಲಕ್ಷ್ಮೀ, ಸರಸ್ವತಿ, ಪಾರ್ವತೀಯರ ಪೂಜೆಯ ನಾವೊಲ್ಲೆ

ಇದು ನನ್ನಯ ನಿಯಮ !

ಅನಾದಿಯಿಂದ, ನನ್ನವರು, ನನಗಾಗಿ

ಕಾಯ್ದುಕೊಂಡು ಬಂದಿದ್ದ ಪರಂಪರಾನುಕ್ರಮ

ಇದೇ ಬಹುಜನರ ನಿಯತ್ತಿನ ಜೀವನ ಕ್ರಮ

ನಿಮ್ಮೆಲ್ಲರ ಹೋರಾಟಗಳಿಗೆ ನಾನೇನು

ಸತ್ತವರ ಸಂಸ್ಕಾರಕ್ಕೂ ನಾನೇ ಸಾರಥಿ

ಹಬ್ಬ, ಜಾತ್ರೆ, ಉತ್ಸವಗಳಲ್ಲಿನ ಕುಣಿತಕ್ಕೂ ನಾನೇ ಪ್ರೇರಕ

ಊರೊಳಗಿನ ಡಂಗೂರ ಸಾರಲು ನಾನೇ ಬೇಕು

ರಾಜಕಾರಣಿಗಳ ಸ್ವಾಗತಕ್ಕೂ ನಾನೇ. .

ಅಬ್ಬರದ ಪ್ರಚಾರದಲ್ಲೂ ನಾನೇ ಮುಂಚೂಣಿ

ಆದರೂ . . :

ಇದುವರೆವಿಗೂ ನಿಮ್ಮೊಳಗೊಬ್ಬ ನಾನೇಕಾಗಿಲ್ಲ ?

ತಳದ ಅಸ್ಮಿತೆಯಾದ ನಾನು

ಇನ್ನೂ ಎಷ್ಟು ದಿನ ಕಾಯಲಿ

ಹೀಗೆ ಹೊರ ಉಳಿಯಲಿ, ಬಡಿಯಲಿ

ಅಲ್ಲಿಂದಲೇ ಕುಣಿಯಲಿ, ಸದಾ ನಿಮ್ಮ ರಂಜಿಸಲಿ

ನನಗೂ ಬೇಕಿದೆ ಸಮಾನತೆ, ನೆಮ್ಮದಿ, ಬಿಡುಗಡೆ.

## ಸ್ವಾಭಿಮಾನಕ್ಕಿಲ್ಲ ಸೋಲು

**-ಹನಸೋಗೆ ಸೋಮಶೇಖರ**

ಸ್ವಾಭಿಮಾನಕ್ಕಿಲ್ಲ ಸೋಲು ಆಳುವ ಜನಕ್ಕಿಲ್ಲ ಗೋಳು
ಮಾನ ಅಭಿಮಾನಕ್ಕಾಗಿ ತಲೆ ಎತ್ತಿ ನೀ ನಿಲ್ಲು । ಸ್ವಾಭಿಮಾನಕ್ಕಿಲ್ಲ ಸೋಲು

ಹರಿವ ನದಿಯು ಕಟ್ಟೆಯ ನೋಡಿ ಮತ್ತೆ ಹಿಂದೆ ಹರಿಯುವುದೆನು
ಹಾರೋ ಹಕ್ಕಿ ಬಲೆಯನ್ನು ಕಂಡು ಗೂಡಿನಲ್ಲಿ ಕೂರುವುದೇನು
ಧೈರ್ಯಕುಂಟು ದಾರಿ ನೂರು ಮನಸಿನಲ್ಲಿ ಮಾರ್ಗವ ತೋರು
ಮಾನ ಅಭಿಮಾನಕ್ಕಾಗಿ ತಲೆ ಎತ್ತಿ ನೀ ನಿಲ್ಲು । ಸ್ವಾಭಿಮಾನಕ್ಕಿಲ್ಲ ಸೋಲು

ಸಹಪಾಠಿಯ ಸಾವ ನೋಡಿ ವೀರ ಯೋಧ ಹೆದರುವನೇನು
ಆಳುವ ಜನವಾಗದೇ ನಾವು ಬದುಕಿ ಇಲ್ಲಿ ಫಲವೇನು
ಸ್ವಾಭಿಮಾನ ಸೋತೆಯಿಲ್ಲ ಇತಿಹಾಸವ ಒಮ್ಮೆ ಕೆದಕು
ಮಾನ ಅಭಿಮಾನಕ್ಕಾಗಿ ತಲೆ ಎತ್ತಿ ನೀನಿಲ್ಲು! ಸ್ವಾಭಿಮಾನಕ್ಕಿಲ್ಲ ಸೋಲು

ದಾನವಿತ್ತ ದಾನವರು ನಮ್ಮ ಹಿರಿಯ ತಲೆಮಾರು
ರಾಜ್ಯ ಕಟ್ಟಿ ಅಳಿದೋರು ನಾವೇ ಮೂಲಮಾನವರು
ಸೋಲನೆಂದು ಒಪ್ಪದಂಥ ಸ್ವಾಭಿಮಾನಿ ಶೂರರು
ಆ ಶೂರನೆತ್ತರದೊಡಲೆ ನೀ ಸೋಲನೆಂದು ಒಪ್ಪದಿರು । ಸ್ವಾಭಿಮಾನಕ್ಕಿಲ್ಲ ಸೋಲು

## ಕಪ್ಪು ಮೋಡಗಳು

**- ಹೊಸೂರು ಮುನಿಶಾಮಪ್ಪ**

ಬಣ್ಣದ ನಗೆಯ ಬೆನ್ನಿಗೆ ಚೆಲ್ಲಿ

ಎಲ್ಲಿ ಹೋದೆ ನಲ್ಲೆ

ಕಪ್ಪು ಮೋಡಗಳು ಮಳೆ ತಾರಲಿಲ್ಲ

ಹೆಪ್ಪುಗಟ್ಟಿದ ಹಾಲ

ಗಲ್ಲದೊಳಗೆ ಗುಲ್ಲನು ತುಂಬಿ

ಸಿಂಡರಿಸಿಕೊಂಡೆಯಲ್ಲೆ

ಸಿಂಗಾರ ಸಂಗದ ಸಗ್ಗದ ಕನಸು

ನರಕವಾಯಿತಲ್ಲ ಮನಸು

ಮೋಹದ ಕಣ್ಣಳಿಗೆ

ಮಣ್ಣೆರಚಿ ಬೆಳಕ ಬತ್ತಿಸಿಟ್ಟೆ

ಬಾಣಗಳ ಎರಚಿ ಕಾಮನಬಿಲ್ಲಿಗೆ

ವಿರಸದಂಗಡಿಯಿಟ್ಟೆ

ಛಲದ ಹೊಲದಲಿ ಏನ

ಬಿತ್ತಬಲ್ಲೆ ನೀನು

ಮಾವಿನೊಳಗಡೆ ಬೇವು ಬೆಳೆದರೆ

ಸಮತಸ ವಸಂತವೇನು.

ಸರಿ ರಾತ್ರಿಯಲಿ ಸೂರನಿಂದ

ಮನಸಿಗೆಲ್ಲಿ ಮುದವು

ಜಗವೆಲ್ಲ ಸಾಗರವಾದರೆ

ಈಜಿಗಿರುವುದೆಲ್ಲಿ ಅರ್ಥವು

ಪೊರೆಬಿಟ್ಟ ಹಾವು

ಹದ್ದುಗಳ ಪಾಲಾದುದೇಕೆ

ಒಲುಮೆಗೆ ನಾ ತೆತ್ತ ಬೆಲೆ

ನಿನಗರ್ಥವಾದಿತೇನೆ.



ಕ್ಷಣದ ಥಳಕಿನ ಉಲ್ಕೆ

ಅಧೋಮುಖಿ

ಬಿರುಕು ಬಿರುಕಿನ ನಡುವೆ

ಜ್ವಾಲಾಮುಖಿ

ನೀನಿರದ ಬಾಳು

ಬರಡೆಂಬುದು ಸರಿಯ

ಪರಿಪರಿ ನೋವುಗಳಿರಲಿ

ಬದುಕ ನಾ ತೊರೆಯ

## ಹೊಸ ಹೊಲಗಲಿಗಳು

**- ಅರ್ಜುನ ಗೊಳಸಂಗಿ**

ಊರದ್ದಲ್ಲಿ ಹೊಲಗೇರಿ ಇದ್ದದ್ದ

ಅನ್ನೂದು ಎಲ್ಲಾರಿಗೆ ಗೊತ್ತಿದ್ದ

ನಮ್ಮೂರಾಗ ಆವಾಗ

ಹೊಲಗೇರಿ ಇದ್ದಿದ್ದಿಲ್ಲಂತಲ್ಲ.

ಹೊಲಗೇರಿ ಊರಾಗ ಇದ್ದಿದ್ದಲ್ಲ

ನೀವು ಯಾವುದರ ಊರಿಗಿ ಹ್ವಾದ್ರನ

ನಿಮಗ ಮೊಲ್ಲ ಸ್ವಾಗತ ಮಾಡುವರು

ಹೊಲಗೇರಿಯವರ

ಊರ ಮಗ್ಗ ಇಲ್ಲ ಮೈಲ ದೂರ

ಕೊರಿ-ಹಳ್ಳ-ದಿಟ್ಟ-ದಿನ್ನಿ ಅಚ್ಚೆ ಕಡೆನ

ಇಡೋದೆಲ್ಲ ಹೊಲಗೇರಿ

ನಾವೆಲ್ಲ ಈಗ ಇಪ್ಪತ್ತೊಂದನೇ

ಶತಮಾನದ ಹೊಂತಾವ

ಈಗೆಲ್ಲೆದಾವ ಹೊಲಗೇರಿ

ಅಂತಾರ

ಇವರಿಗಿ ಗೊತ್ತಿಲ್ಲ ಅಂಬೇಡ್ಕರ

ಇಂದಿರಾ-ರಾಜೀವರ ಹೆಸರಿನೊಳಗ

ಸರಕಾರ ಹೊಸ ಹೊಲಗೇರಿ ಕಟ್ಟಾಕ ಹತ್ತೈತಿ

ಅವು ಯಾರೀಗಿ ಇರಾಕ ಆಶ್ರಯ ಆಗಿಲ್ಲ

ಕಿಡಕಿ ಇದ್ರ ಬಾಗ್ಲ

ಬಾಗ್ಲ ಇದ್ರ ಕಿಡಕಿ ಇಲ್ಲ

ಇವೆರಡೂ ಇದ್ರ ಅದು ಬ್ಲಾಳದಿನ

ಮನಿ ಆಗಿ ನಿಂತಿಲ್ಲ

ಮಳೆ ಹನಿ-ಹಳ್ಳ ಹೊಳಿ ನದಿಯೊಳಗ

ಮತ್ತ ನೆಲಸಮ ಆಗಿ ನಿರಾಶ್ರಿತ

**ಅನಕ್ಷರಸ್ಥ ನ್ಯಾಯಾಧೀಶನ ಮನೆ ಮಾರಾಟಕ್ಕಿದೆ !**

**- ಸೋಮಶೇಖರ ಸಲವಾಡಿ**

ತಲೆಮಾರುಗಳ ಜನ ಬಾಳಿದ
ಶತಮಾನದ ಹಿಂದೆ ಕಟ್ಟಿದ
ಮನೆ ಹರಾಜಿಗಿದೆ
ಯಾರು ಕೊಳ್ಳುವಿರಿ ?

ಇದೆ ಪಡಸಾಲೆಯಲಿ
ನ್ಯಾಯ ಪಂಚಾಯ್ತಿ ನಡೆಸಿದ್ದ
ಒಂದು ಎರಡಲ್ಲ ನಲವತ್ತು ವರುಷ
ಒಡೆದ ಸಂಸಾರಗಳ ಒಂದು ಮಾಡಿ
ಹೊಂದಾಣಿಕೆ ನೊಗಹೊತ್ತು ಬಾಳಲೊಲ್ಲದ
ಪತಿ ಪತ್ನಿಯರ ದೂರ ಮಾಡಿದ
ಅಪ್ಪ ಮಕ್ಕಳ ಜಗಳ
ಸೂರು ಓಣಿ ಕೆರೆಕಟ್ಟೆಗೆ ಕಚ್ಚಾಟ
ಜಮೀನು ನಿವೇಶನಕೆ ಗುದ್ದಾಟ
ಮಾಡಿಕೊಂಡ ನೂರಾರು ಜನಜೀವಕೆ
ಸಿವಿಲ್ ಕ್ರಿಮಿನಲ್ ಎಂದು ಇಬ್ಬಾಗಿಸದೆ
ನೀತಿ ಪಾಠ ಹೇಳಿ

ನ್ಯಾಯ ಬೋಧಿಸಿದ ಜ್ಞಾನಿ !

ಬಗಲಲ್ಲಿ ಕರಿ ಕಂಬಳಿ

ಸೊಂಟಕ್ಕೊಂದು ತುಂಡುಕಟ್ಟೆ

ಬಿದಿರು ತುಂಡುಗೋಲಿನೊಂದಿಗೆ ಕೇರಿಬೀದಿಗಳಲ್ಲಿ

ಸಂಚರಿಸಿದ ಕಟ್ಟುಮಸ್ತಾದ ಕಾಯ.

ಹೊಲಗದ್ದೆಯೆಡೆ ಮುಖಮಾಡಿ

ಅದೆಷ್ಟೋ ವರುಷ ; ಯಜಮಾನಿಕೆ ವೀಳ್ಯ

ಕೈ ತುಂಬುವ ಪೂರ್ವದಲಿರಬೇಕು !

ನೆಪವಾಯಿತೊ ಯಜಮಾನಿಕೆ

ಜಟಿಲವಾಯಿತೊ ಸಮಯ ಹೊಂದಾಣಿಕೆ ತಿಳಿಯ

ಸಂಸಾರದ ಸುಖದುಃಖಕೆ ಕೊಳ್ಳಿಯಿಟ್ಟು
ಊರಿನ ಕತ್ತಲೆಗೆ ಬೆಳಕಾದನು.

ಗಡಿಗೆ ಹೆಂಡ ಹರಿವಾಣ ಬಾಡು
ಕಾದಿತ್ತು ದಿನ ತಪ್ಪಿ ದಿನ
ಆಮಂತ್ರಣ ನೀಡಲು
ಮನೆಯಾಚೆನ ರುಚಿಕರ ಔತಣ
ಹೆಂಡತಿ ಮಕ್ಕಳು ಸೇರಿದಂತೆ ಮನೆಯತ್ತ ತಿಲಾಂಜಲಿ !
ಕೇರಿ ಜನರ ಬಾಯಿ ಮುಂದಾಗಿ
ಮುಖಸ್ತುತಿ ಹೊಗಳಿಕೆ ಮೇಲಾಟವಾಡಿರಲು
ಹಟ್ಟಿ ಹೈಕಳ ಮನ ಕಾದ ತಗಡಿನಂತೆ.

ಮಡದಿ ಮಕ್ಕಳ ಲಕ್ಷ್ಯವಿರದ
ಮನೆ ಯಜಮಾನ ; ಊರಾಳುವ ಬಲಭೀಮ
ಕೇರಿಬೀದಿಯಲಿ ಗಂಡ ತಿರುಗಾಡಿದನೆಂದರೆ
ಬಲು ಹೆಮ್ಮೆ ಮಡದಿಗೆ
ಅನ್ಯ ಹೆಂಗಸರ ಕೂಡಿ ಮಾತನಾಡಿರಲು
ಸರಸ ಸಲ್ಲಾಪವಾಡಿರಲು ಇನ್ನೂ ಹೆಮ್ಮೆ

ಯಾರು ಸಾಟಿ ಎನ್ನವನ

ಎದೆಭುಜ ತೋಳಲಕೆ

ಧೀರ ಶೂರ ಮಾರ ಪೋಣಿಸಿದ ಪದ ಮಾಲೆ

ತನ್ನವನ ಗಂಡಸುತನಕೆ.

ಕೊನೆಗೊಂದು ದಿನ

ಆತ ಸತ್ತ......!

ಬದುಕಿದ್ದಾಗಲೇ ಅನಾಥವಾಗಿದ್ದ ಕುಟುಂಬ



ಮುಟ್ಟು ಬಳಕೆ ತೆರಿಗೆ ಯುವುದರಲಿ ಮತ್ತಷ್ಟು ಬಸವಳಿಯಿತು ಹೆದರಿ ಕುಂತಿದ್ದ

ಶನಿ ಗುರು ವಕ್ಕರಿಸಿಕೊಂಡವು.

ಲಿಯಜಮಾನಿಕೆ ಮುನ್ನ

ಕೈಯೊಡ್ಡಿದ ಅಲ್ಪಾವಧಿ ಸಾಲಕೆ

ಬಡ್ಡಿಗೆ ಬಡ್ಡಿ ಬೆಳೆದು ಹರಾಜಿಗೆ ಬಂತು

ಪೂರ್ವಜರು ಬಳುವಳಿ ಅಂಗೈಯಗಲ ಮನೆ !

ಮನೆ ಹರಾಜಿಗಿದೆ

ನೆಲ ತಬ್ಬಿಕೊಳ್ಳಲು ಕಾದಿರುವ ಸೂರು

ಮಳೆಗಾಳಿಗೆ ಕರಗುತ್ತಿರುವ ಗೋಡೆ

ಹರಕು ಮುರುಕು ಪಾತ್ರೆ ಪಗಾರೆ

ಮಡಿಕೆ ಗುಡಾಣಗಳ ಅರಸೊತ್ತಿಗೆ

ಮನೆ ಹರಾಜಿಗಿದೆ

ಊರಾಳಿದವನ ಮನೆ

ಜನಕಲ್ಯಾಣಕೆ ದುಡಿದವನ ಮನೆ

ಅನಕ್ಷರಸ್ಥ ನ್ಯಾಯಾಧೀಶ ಜೀವಿಸಿದ ಮನೆ

ಪಡಸಾಲೆ ನ್ಯಾಯಾಲಯದ ಮನೆ.

ಮನೆ ಖರೀದಿಸಿದೊಡೆ

ಆಗುವಿರಿ ನೀವು

ಜನಮೆಚ್ಚುವ ಆಡಳಿತಾಧಿಕಾರಿ

ಪ್ರಜೆ ಕಟ್ಟಾಳುವ ರಾಜಕಾರಣಿ

ನ್ಯಾಯ ನೀಡುವ ಜಡ್ಜ್ !

## ನಾಳೆಗಳಿಲ್ಲ ಈ ಕನಸುಗಳಿಗೆ

**ಎಚ್.ಜಿ.ಪೂಜಾರ್**

ವ್ಯೋಮಕೇಶದ ಬಯಕೆಯ ಬದುಕು
ಬದಲಾದರೆ ಸುಪ್ಪತ್ತಿಗೆಗಳು ಬರಡಾಗುವ
ಮೈಯ್ಯೊಂದು
ಬಯಲು ಕಾಣದ ಬಾಣದಂತಹ ಬೆಳಕು
ಕಣ್ಮುಚ್ಚುವ ಶಾಖದ ಬೆಳದಿಂಗಳ ಬಿಸಿಲು

ತುಂಬಿದ ಮೈಗೊಂದು ಕುಲಾವಿಯ ಕನಸು
ಅಚ್ಚ ಬಿಳಿ ಬಣ್ಣದ ಹಾರುವ ಕುದುರೆ
ಸರಪರ ಹಾವಿನ ಸದ್ದಿಗೂ ಬೆದರದ ಕುಣಿಯುವ
ಮನ
ಇಂದ್ರಚಾಪದ ಒಡೆಯ ಕರೆದಂತೆ ನೆನಪು

ಮುದುಡುವ ಮಲ್ಲಿಗೆಗೂ ಮಾದಕತೆಯ ಛಾಪು
ಅರಳಲಾಗದ ಬದುಕು ಸೋತುಬಿಡುವ ತವಕ
ಗಿರಾಕಿಯ ಟಿಪ್ಪುಗಳ ತಪ್ಪುವ ಲೆಕ್ಕ
ಗೀರು ಗೆರೆಗಳ ನಾಳಿನ ನಕ್ಷೆಯಲಿ ವಿಷಾದದ
ಉಸಿರು

ಹಸಿಮಾಂಸ ರಕ್ತಪಾನಕದ ಹಬ್ಬದೂಟ

ಸಖಿತ್ತಿನ ಗುಂಯ್ಗುಡುವ ರಾಗದಲಿ

ಹದಿನಾರರ ಗುಣಾಕಾರದ ಜೊತೆಯಾಟ

ಮೆತ್ತನ್ನ ಮೈಯಿಗೆ ಮಂದ ದೀಪದ ಮಿಣುಕು

ಇಲ್ಲಿ ಹುಟ್ಟುವ ಸೂರ್ಯ ಸಾಯುವುದೇ ಇಲ್ಲ

ಈ ಕೆಂಪು ಮನಗಳಲಿ ಬೆಳಗಾಗುವುದೇ ಇಲ್ಲ

ಇಲ್ಲಿ ಬಿತ್ತುವ ಬೀಜ ಹೂವಾಗಿ ಅರಳುವುದೇ ಇಲ್ಲ

ಈ ಮನೆಯ ಕನಸುಗಳಿಗೆ ನಾಳೆಗಳೇ ಇಲ್ಲ.



## ಕಾಡವಿಲಿ ನೆನಪುಗಳೇ

**ಸಮತಾ ಜಿ.ದೇಶಮಾನೆ**

ನನ್ನೆದೆಯ ಅಡವಿಯೊಳು ಅಡಗಿರುವ ನೆನಪುಗಳೇ

ಕಾಡದಿರಿ, ಕಾಡಿ ನೋವ ನೀಡದಿರಿ

ಚಿಂತೆಯ ಚಿಲುಮೆಯ ತೋಡಿ

ಈ ದೇಹವನದಕೆ ದೂಡಿ

ಜೀವಂತ ಹೆಣವ ಮಾಡದಿರಿ

ಕಂಡು ಕೇಳರಿಯದ ವೇದನೆ ನೀಡಿ

ಮನದ ಮುದವ ಛಿದ್ರಗೊಳಿಸಿ

ನನ್ನ ಮರುಳ ಮಾಡದಿರಿ

ನನ್ನ ಏಕಾಂತದೊಳು ಹೊಕ್ಕು

ನನ್ನ ಹೃದಯವ ಕದ್ದು

ಖಾಲಿಯ ಮಾಡಿ ಗೋಳನು ನೀಡದಿರಿ

ಹೊದ್ದು ಮಲಗಿದಲ್ಲಿ ಬಂದು | ಕದ್ದು ಮನವನು ಕಲಕಿ

ನಿದ್ದೆ ಭಂಗಗೊಳಿಸಿ ವಿಲಿವಿಲಿ ಒದ್ದಾಡಿಸಿ

ಎದ್ದೋಡಿಸುವ ಪರಿಯ ನೀಡದಿರಿ

ನೀಡಿ ಸಂತಸವ ಪಡದಿರಿ

ನನ್ನೆದೆಯ ಗೂಡಿನಲ್ಲಿ

ಬಸಿರುಗಟ್ಟಿದ ನೆನಪುಗಳೇ

ಪ್ರಸವ ದಿನವನು ಕಾದು ಕುಳಿತಿರುವಿರಾ?

ಹಸಿರಾದ ಮನದ ಪಸೆಯ ಹೀರಲು

ಪಣತೊಟ್ಟು ಕುಳಿತಿರುವಿರಾ?

ಬೇಡಿ ದಯವಿಟ್ಟು ಬೇಡಿ

ಕಾಡದಿರಿ ಕಾಡಿ ನೋವ ನೀಡದಿರಿ ನೆನಪುಗಳೇ!

## ಗಜಲ್

**ರಮೇಶ್ ಗಬ್ಬೂರು**

ತಿಪ್ಪೆಗುಂಡಿಯ ಮಧ್ಯೆ ತೆರೆದ ಗುಡಿಸಲಿನಲ್ಲಿ ಮಲಗಿರುವಾಗ ಅವನು ನನಗಾಗಿ ಬಂದ
ಯಾರೋ ಕಸಿದ ನನ್ನ ಸುಂದರ ನಿದ್ರೆಗಳಿಗೆ ನಾಳೆಯ ಬೆಚ್ಚನೆಯ ಹೊದಿಕೆಯಾಗಿ ಬಂದ

ಬಿಸಿಲ ಚಪ್ಪರದ ಜಾಲಿಯ ಮರದಡಿ ಮಲಗಿ ನೋವಿನಲಿ ಅಮ್ಮಾ ಎಂದು ಮುನುಗುತ್ತಿದ್ದೆ
ಮಣ್ಣತ್ತಿದ ನನ್ನ ಪಾದಗಳಿಗೆ ತನ್ನ ಅಂಗೈ ಇಟ್ಟು ಅಮ್ಮನಂತೆ ತಂಗಾಳಿಯಾಗಿ ಬಂದ

ಹರಿದ ಅಂಗಿಯ ತೊಟ್ಟು ಊರ ಮನೆಯ ಹೊಸ್ತಿಲೊಳು ನಾನು ತಟ್ಟೆಹಿಡಿದು ಬೇಡುತ್ತಿದ್ದೆ
ಹಸಿದ ಹೊಟ್ಟೆಗೆ ಶತಮಾನಗಳ ಹಸಿವು ತೀರಿಸಲು ಅವನು ನನಗೆ ರೊಟ್ಟಿಯಾಗಿ ಬಂದ

ಸೂಜಿದಾರದಿ ತೇಪೆಹಾಕಿದ ಅಮ್ಮ ಹೊಲಿದ ಮಾಸಿದ ಅಂಗಿಯ ತೊಡಲು ನಾ ಅಳುತ್ತಿದ್ದೆ
ಹರಿದ ಮನ ತಿದ್ದಲು ಕತ್ತಲಲಿ ಕಣ್ಣೀರು ಒರೆಸಲು ಅವನು ನನ್ನ ಬಣ್ಣದ ಅಂಗಿಯಾಗಿ ಬಂದ

ಅಗ್ರಹಾರದ ಹುಡುಗ ಅಕ್ಷರದ ಅಂಗಳಕ್ಕೆ ಹೊರಟಾಗ ನಾ ಅನ್ನಕ್ಕಾಗಿ ಬೇಡುತ್ತಿದ್ದೆ
ದಿನವೂ ತುಂಬಿಸುವ ಹೊಟ್ಟೆಯ ಬವಣೆ ಬೇಡೆಂದು ನನ್ನ ಅರಿವಿನ ಪಾಟಿಚೀಲವಾಗಿ ಬಂದ

ಬಿಸಿಲು ಸೋರುತಿರುವ ಗುಡಿಸಲೊಳು ಬಿದ್ದು ಎದೆಯ ಮೇಲೆ ಅಕ್ಷರವ ಹರಡಿಕೊಂಡಿದ್ದೆ
ದೀಪದ ಬೆಳಕ ಬೀರಿ ಕಣ್ಣರೆಪ್ಪೆಯ ಸವರಿ ಅವನು ನನಗಾಗಿ ತಾಯಿ ಕನಸಾಗಿ ಬಂದ

ನಾನು ಯಾರ ಹಿಂದೆ ಬಿದ್ದಿರುವೆನೋ ಈ ಜಗವೇ ಅವನ ಹಿಂದೆ ಬಿದ್ದಿರುವುದು ಕಂಡಿದ್ದೆ
ನಿನ್ನನ್ನು ಬಿಡಬಹುದು ಗೆಳತಿ ಅವನ ಬಿಡಲಾಗದು ಏನೂ ಇಲ್ಲದಿರುವಾಗ ಎಲ್ಲವಾಗಿ ಬಂದ
ಅವನಿಲ್ಲದಿರೆ ನಾನಿಲ್ಲ ಗೆಳತಿ ಮೂಕನಾದ ನನಗೆ ಮಾತಾಗಿ ಬಂದವನ ಎಂದೋ ಪ್ರೀತಿಸಿದ್ದೆ
ನಿನಗಾಗಿ ರಮೇಶ' ಸಾಯಲಾರ ಗೆಳತಿ ಬದುಕಿಲ್ಲದಿರುವಾಗ ಭೀಮ ನನ್ನ ಬದುಕಾಗಿ ಬಂದ

## ಗನ್ನು ನಿಮ್ಮದು ಪೆನ್ನು ನಮ್ಮದು

**ಕಾ. ವೆಂ. ಶ್ರೀನಿವಾಸಮೂರ್ತಿ**

ಗನ್ನು ನಿಮ್ಮದು ಪೆನ್ನು ನಮ್ಮದು
ನಡೆದಿದೆ ಹೋರಾಟ
ಮುಖವಿರುವವರ ಮುಖವಿರದವರ
ನಡುವಿನ ಹೋರಾಟ //ಪ//

ಬುಲೆಟ್ಟು ನಿಮ್ಮದು ಬ್ಯಾಲೆಟ್ಟು ನಮ್ಮದು
ನಡೆದಿದೆ ಹೋರಾಟ
ಕತ್ತಲೆ ಮುಖಗಳ ಬೆಳಕಿನ ಕುಡಿಗಳ
ನಡುವಿನ ಹೋರಾಟ

ಭ್ರಾಂತಿ ನಿಮ್ಮದು ಕ್ರಾಂತಿ ನಮ್ಮದು
ನಡೆದಿದೆ ಹೋರಾಟ
ನೆತ್ತರ ಕೈಗಳ ಅಕ್ಷರ ಕೈಗಳ
ನಡುವಿನ ಹೋರಾಟ

ಮೌನ ನಿಮ್ಮದು ಮಾತು ನಮ್ಮದು
ನಡೆದಿದೆ ಹೋರಾಟ
ಗುಂಡಿಗೆ ಇರುವ ಅದು ಇರದವರ
ನಡುವಿನ ಹೋರಾಟ

ದಮನ ನಿಮ್ಮದು ಕದನ ನಮ್ಮದು

ನಡೆದಿದೆ ಹೋರಾಟ

ವಿಳಾಸದವರ ವಿಲಾಸದವರ

ನಡುವಿನ ಹೋರಾಟ

೧೦೨ ದಲಿತ ಸಾಹಿತ್ಯ ಸಂಪುಟ – ಕಾವ್ಯ

**ಜೋಗೇರ ಹುಡುಗಿ**

**- ಅನುಸೂಯ ಕಾಂಬಳೆ**

ಹರಿದ ಸೀರೆ, ಸುಕ್ಕುಗಟ್ಟಿದ ಜಡೆ

ನಾವೀಣ್ಯವಿಲ್ಲದ ನಡಿಗೆಗೆ ಹಸಿವಿನ ರಾಗ

ಕಲ್ಲು ಒಡೆಯುವ ಒಡ್ಡರ ಹುಡುಗ ಕಣ್ಣೆತ್ತಲಿಲ್ಲ

ನಡುಬಿಸಿಲಲ್ಲಿ ಕುಂಟುತ್ತಾ ಸಾಗಿದವಳ

ಬೆನ್ನಲಿ ದುಂಬಿ ಕೂತಿದೆ

ಪಕ್ಕದ ಸಿನೇಮಾ ಥೇಟರಿನಲ್ಲಿ ಪ್ರೇಮರಾಗ

ಅವಳಿಗೆ ಯಾವುದರ ಗೊಡವೆಯೂ ಇಲ್ಲ

ಅವಳೋ ಬಯಲ ಬದುಕಿನ ಜೋಗೇರ ಹುಡುಗಿ

ಚಿಟ್ಟೆಗಳನು ಹಿಡಿದು ಆಡಿದವಳು

ಬೆನ್ನ ಹಿಂದಿನ ದುಂಬಿಯ ಕಾಟ ಬಲ್ಲವಳು

ಉಡಿ ತುಂಬಿದ ದುಂಬಿಯ ಹಾರಿಬಿಟ್ಟವಳು

ಸಿಂಪಿಗನು ಟೋಪಿ ಎಸೆದಂತೆ

ಪಿರಾಮಿಡ್ಡಿನ ಪ್ರೀತಿ; ಹೆಪ್ಪುಗಟ್ಟಿದೆ ದುಃಖ
ಅನ್ನದಗುಳ ಕಾಣದ ರೀತಿ ಮೌನ ಮುಲುಗುಡುವಾಗ
ಮುಂಗೈ ಮೇಲಿನ ಗಿಣಿಗೆ ಎದೆ ಮಾತು ಕಲಿಸಿ
ಕತ್ತಲೆಯ ಬೆಳಗಿದವಳು

ಸವೆದ ಹಸ್ತವ ಹಿಡಿದು ಶಕುನ ಕೇಳಿದವಳಲ್ಲ
ಶುಭನುಡಿಯುವ ಹಕ್ಕಿಗೆ ಕಾದವಳಲ್ಲ
ಕಾಗೆ-ಗೂಗೆಗಳೊಂದಿಗೆ ಬಾಳು ಸವೆಸಿದಳು
ಹಸಿರೊತ್ತ ಉಡಿಯ ವನದಂತೆ ತೆಕ್ಕೆಸಿದವಳು

ಹಿಂಡು ಎಮ್ಮೆಯ ಬೆನ್ನು ತಿಕ್ಕಿ
ಹಸು ಕರುವಿನ ಕೊರಳಿಗೆ ಗೆಜ್ಜೆಕಟ್ಟಿ
ಸಾಲಿಗೋಗುವ ತಂಗಿ-ತಮ್ಮಗೆ ಬೆನ್ನಾದವಳು
ತನ್ನದಲ್ಲದ ತಪ್ಪಿಗೆ ಬಸಿರೊತ್ತು ಬಿಕ್ಕಿದವಳು
ಸೂರ್ಯ-ಚಂದ್ರರ ಸಾಕ್ಷಿಗೆ ಧಿಕ್ಕಾರ! ಹೇಳಿ
ನದಿಯಾಗಿ ಕಡಲಾಗಿ ಹರಿದವಳು



'ಆಕಾಶದಲ್ಲೊಂದು ಚುಕ್ಕಿಯಾದಳು' ಎಂದರು ಜನ
ಮುಗ್ಧತೆಯ ಮೀರಲಾರದೆ
ನೂರು ಜೋಗೇರ ಹುಡುಗಿಯರಿಗೆ
ನೂರೊಂದು ಸ್ವರವಾಗಿ ಕಾಡಿದಳು
ನಡುರಸ್ತೆಯ ತಗ್ಗು ಮುಚ್ಚುವ ಕಲ್ಲಾದಳು.

## ದೊಡ್ಡುಚ್ಚನ ಪದ

**- ದಿಲೀಪ್ ಎನ್ಕೆ**

ಡುಂ... ಟಕ್ ಟಕ್....

ಡುಂ ಡುಂ.... ಟಕ್ ಟಕ್....

ಸುಟ್ವಾಡ ನಂಜಂದು

ಮೃಟುಗ್ಗಂಟ ಯಂಡ ಬುಟ್ಕಂದು

ಮತ್ತು ನುಂಗಿದ ಚಿತ್ತಲಿ

ತಮ್ಮ ಬಡೀತ

ಪದ ಬುಡ್ಡ ಕುಂತನ ನೋಡು

ನಮ್ ದೊಡ್ಡುಚ್ಚ

ಬಾಯಿಗೆ ಬಂದು ವದುರಾ ನೋಡು

ನಮ್ ದೊಡ್ಡುಚ್ಚ.

ಅದೇನ ಗೊತ್ತಿಲ್ಲ

ಕ್ವಟ್ಗಲಿ ಕಣ್ಣುಕ್ಕಂತ ಅಸ್ರುಲ್ಲು...

ಅಸ್ರುಲ್ಲು ಇದ್ರುವ

ಕಂಡೋರಟ್ಟಿ ಮೇವು ಅಂದ್ರ ಸಾಕು

ಮೊಸ ಮೊಸ ಅಂತಬ

ನಮ್ ಯೆತ್ತು ಅಸ್ಗಳು.

ತಲ ಭುಜ ವಟ್ಟ ಪಾದ

ಒಂದುರ್ಜೊತ್ಗೂಂದು....

ಒಂದುರ್ಜೊತ್ಗೂಂದು ಬ್ಯರುತ್ರ

ಲೋಕುದ್ ನೆಟ್ಟ ಕೆಲ್ಸರ ಸನಿ

ತೊಲ್ಗೋಯ್ತದ ನೋಡು

ಲಗೂನ ಆಗ್ಬೇಕು ಲಗುನ ಲಗೂನ

ಕಾಸು ಅಣ ದುಡ್ಡು ಇಬುರ್ ಕಾಲ್ಲಿ

ಸಮ್ಮಂದಗಳ್ಗ ...

ಸಮ್ಮಂದಗಳ ಕುಟ್ಟು

ಅತ್ಬುಡ್ತು ನೋಡು

ಗಟ್ಟಿತನ ಫುಡ್ ಪುಡ್ಯಾಗ್

ಉದುರಾದ ನೊಡು.

## ದೇವದಾಸಿ

**ಚಿ. ಕೆ. ಹೊಂಗಲ**

ದೇವಿಯ ಮಕ್ಕಳು ನಾವೆಲ್ಲ
ದೇವದಾಸಿ ಪದ್ಧತಿ ಬೇಕಿಲ್ಲ
ದೇವಿ ಯಾರ ಮೈಯಲ್ಲಿ ಬರುವುದಿಲ್ಲ
ಈ ಕಟು ಸತ್ಯ ತಿಳಿಯಿರಿ ನೀವೆಲ್ಲ ॥ ೧ ॥

ಸ್ವಾರ್ಥಕ್ಕಾಗಿ ಬಿಡುವರು ದೇವದಾಸಿ
ಹೆತ್ತ ಮಕ್ಕಳನ್ನ ಮಾಡುವರು ಅನ್ಯರಿಗೆ ದಾಸಿ
ಸ್ವಾರ್ಥಿಗಳ ಮೂಢ ನಂಬಿಕೆಯ ಈ ಹುಸಿ
ದೇವಿಯ ಹೆಸರಿಗೆ ಹಚ್ಚಿದ ಮಸಿ ॥ ೨ ॥

ದೇವಿಯ ಶಾಪವಲ್ಲ ಜಿಡ್ಡುಗಟ್ಟಿದ ಜಡೆ
ಸ್ವಚ್ಛತೆ ಇಲ್ಲದೆ ರೋಗದಿಂದ ಬಂದ ಕೂದಲಿನ ಪಡೆ
ಕೂದಲಿನ ಹೊಲಸನ್ನು ಬಿಡಿಸಿಕೊಂಡು ನಡೆ
ನಿನಗಿರುವದು ಇದೊಂದೆ ಜನ್ಮ ಕಡೆ ॥ ೩ ॥

ಬರುವ ಆದಾಯದ ಆಶೆಗಾಗಿ

ಜೋಗುಳ ಬಾವಿಗೆ ಹೋಗಿ

ಸತ್ಯವ್ವಗ ಪೂಜಿಸುವರು ಬೆತ್ತಲೆಯಾಗಿ

ಮುತ್ತು ಹೊತ್ತು ಜೋಗತಿಯಾಗಿ ॥ ೪ ॥

ನೀವು ನೀಡುವ ಜೋಗವೆಂಬ ಮಾರಿ

ಬಡತನದಿ ಬೆಂದವರಿಗೆ ತೋರಿದ ದಾರಿ

ಅದಕ್ಕಾಗಿ ಹೆತ್ತವರು ಅನ್ನದಾಶೆಗೆ ಜಾರಿ

ಆದಳು ದೇವದಾಸಿ ಏನೂ ಅರಿಯದ ನಾರಿ ॥ ೫ ॥

ಬೇಡ ಬೇಡ ನಿಡಬೇಡ ಜೋಗ

ಇದೊಂದು ಮೈಗಳ್ಳರಿಗೆ ಮುಸುಕಿದ ರೋಗ

ಗುಡಿಯೊಳಗಿರಬೇಕಾದ ಎಲ್ಲಮ್ಮನ ಜಗ

ಆಗಬಾರದು ಮುಗ್ಧಯರಿಗೆ ದುರ್ದೈವದ ರೋಗ ॥ ೬ ॥

ಕಾಡುವುದೆಲ್ಲ ಭ್ರಮೆ ಎಂದು ಅರಿಯಿರಿ
ಕಾಪಾಡುವವಳು ಎಲ್ಲಮ್ಮ ತಾಯಿ ತಿಳಿಯಿರಿ
ಹೊಸ್ತಲ ಹುಣ್ಣಿಮೆಗೆ ರಂಡೆ ಹುಣ್ಣಿಮೆ ಎನ್ನದಿರಿ
ಕೈ ತುಂಬ ಇದ್ದ ಬಳೆ ಒಡೆಯದಿರಿ ॥ ೭ ॥

ಮೂಢನಂಬಿಕೆ ಸಮಾಜಕ್ಕೆ ಮಾರಕ
ಇದನಂಬಿ ಅನುಭವಿಸದಿರಿ ನರಕ
ಪರಿವರ್ತನೆಯೊಂದೇ ಪೂರಕ
ನಂಬಿ ನಡೆದರೆ ಕರುಣಿಸುವಳು ರೇಣುಕ ॥ ೮ ॥

## ಸಾಲ ಬೇಕಾಗಿತ್ತು

**- ದೀಪಕ .ಎನ್.ಶಿಂಧೆ**

ಈ ತಿಂಗಳು ಪಡಿತರಕ್ಕೆ
ಸಿಕ್ಕ ಸೀಮೆ ಎಣ್ಣೆ
ಅದಾಗಲೇ ಖಾಲಿಯಾಗಿದೆ.
ಉಚಿತ ವಿದ್ಯುತ್ ಸಿಗುವ
ಕನಸುಗಳ ಭಗ್ನಗೊಳಿಸಿದ
ಕತ್ತಲ ರಾತ್ರಿ ಕಳೆದು ಹಗಲಾಗಿಸುವುದಕ್ಕೆ
ಸ್ವಲ್ಪ ಸಾಲ ಬೇಕಾಗಿತ್ತು.
ಬಡವರ ಮನೆಗಳ ಟೆಂಡ
ಹಿಡಿದ ಆಸಾಮಿ; ಆದಾಗಲೇ
ಬಂಗಲೆ ಕಟ್ಟಿಸಿ ಹಾಯಾಗಿದ್ದಾನೆ
ನಾವು ತೊಟ್ಟಿಕ್ಕುವ ಬಿರುಕು ಬಿಟ್ಟ
ಮನೆಗಳಲ್ಲೇ ಮುದುರಿಕೊಂಡಿದ್ದೇವೆ.
ಬಡತನವನ್ನೇ ಹೊದ್ದು-ಹಾಸಿ
ಮಲಗಿದ್ದಕ್ಕೆ ಸ್ವಲ್ಪ ಸಾಲ ಬೇಕಾಗಿತ್ತು.

ಪರಿಹಾರಕ್ಕೆ ಕಾಯ್ದು; ಪಡಿತರಕ್ಕಲೆದು
ಕಿತ್ತ ಚಪ್ಪಲಿಯ ಉಂಗುಷ್ಟಕ್ಕೆ

ಮೊಳೆ ಬಡಿಸುವುದಕ್ಕೆ !

ಖಾಕಿ, ಖಾವಿ, ಖಾದಿಗಳ ಮಧ್ಯೆ

ಹರಕು ತೊಟ್ಟ ನನ್ನವರ

ತ್ಯಾಪೆ ಹೊಲೆಯುವುದಕ್ಕೆ

ಸ್ವಲ್ಪ ಸಾಲ ಬೇಕಾಗಿತ್ತು.

ಬರಬೇಕಾದ್ದನ್ನೆಲ್ಲ ಬಳಸಿಕೊಳ್ಳದ್ದಕ್ಕೆ

ಭರವಸೆಗಳ ನಂಬಿ ಬದುಕಿ ಉಳಿದದ್ದಕ್ಕೆ:

ಅಧಿಕಾರಶಾಹಿಗೆ ನಾವು ಎದುರುಗೊಳ್ಳದ್ದಕ್ಕೆ:

ಹಸಿದ ಹೊಟ್ಟೆಗೂ ಬಟ್ಟೆ ಕಟ್ಟಿ

ಜೈಕಾರ ಕೂಗುತ್ತ ಪೋಲಿ ಅಲೆದದ್ದಕ್ಕೆ:

ಸ್ವಲ್ಪ ಸಾಲ ಬೇಕಾಗಿತ್ತು.



ಅದ್ಯಾಕ್ ಸ್ವಾಮಿ ಹಿಂಗಾಡ್ತೀರಿ ?

ನ್ಯಾಯವಾಗಿ ಸಲ್ಲಬೇಕಾದ್ದೆಲ್ಲ

ಸಾಲದೇ ಹೋದದ್ದಕ್ಕೆ,

ಹೊಲೆ-ಮಾದಿಗರಾಗಿ ಹುಟ್ಟಿ

ಹಿಂದೆ; ಹಿಂದೆ; ಹಿಂದೆ ಉಳಿದಿದ್ದಕ್ಕೆ

ಸ್ವಲ್ಪ ಸಾಲ ಬೇಕಾಗಿತ್ತು.

## ಬೆಳಕಿನೊಳಗಣ ಬೆಳಕು

**- ನಾಗೇಶ್ ಸೋಸ್ಲೆ**

ಬೆಳಕಿನೊಳಗಣ ಬೆಳಕಿಗೆ ಕನ್ನ ಕೊರೆದು
ಬೆಳಕ ಬಂಧಿಸಿ, ಬಂಧೀಖಾನೆಯಲ್ಲಿಟ್ಟರೂ
ಕಪ್ಪು ಧೂಳದಿ ಉರಿಗದ್ದುಗೆಯಲಿ ಉರಿದುರಿವ ಜ್ವಾಲೆ
ಧೂಮಧೂಮದ ಲೀಲೆಯಲಿ ಲೀನವಾಗುತ
ಉರಿಚಮ್ಮಾಳಿಗೆಯ ರುದ್ರನರ್ತನಕೆ
ಕೇಕೆ ಹಾಕಿದ ದೀಪದಡಿಯ ಕತ್ತಲು

ನಾಗಾಲೋಟದಿ ನೆಗೆನೆಗೆದು
ಮಸಣಗಳ ಬಗೆಬಗೆದು
ಸಾವಿಲ್ಲದ ಮನೆಯ ಸಾಸುವೆ
ತರಲೊರಟ ಆಸೆಯ ಅಶ್ವಮೇಧ (ಆಸೆಯ)

ಪಾತಾಳ ಲೋಕಕೆ ಸೂಜಿಯ ಚುಚ್ಚಿ
ಭೂಮಿ ಬೆಸೆದು, ಆಗಸ ಹೊಲೆದು
ಬಂಧಮುಕ್ತಗೊಳ್ಳಬಯಸಿದೆ ಸಮತೆಯ ಬೆಳಕು

ದಾರದ ಉಂಡೆಗೇ ಉರುಳು ಹಾಕಿ

ಸೂಜಿ ಕಳಗೆ ಕಾಮನಬಿಲ್ಲು ತೂರಿ

ಎಳೆದೆಳೆದಷ್ಟೂ ಧಾರೆಯಂತೆ ದ್ರೌಪದಿಗೆ

ಮಾಯಾವಿ ಹರಿಸಿದ ಅರಿವೆ.

ತುಂಡರಿಸಿದ ದುಶ್ಯಾಸನನ ದಾರದೆಳೆಗಳಿಗೆ

ತುದಿಯಲೊಂದು ಬಿಡಿಸಲಾಗದ ತೂಕದ ಗಂಟು

ಗಗನದ ತುಂಬೆಲ್ಲಾ ಗುಟುರು ಹಾಕಿ

ಪಾತಾಳದ ಮಾನ ಉಳಿಸಿದ ಮಹಾಬೆಳಕು

ಬೋಧಿ ವೃಕ್ಷದ ಅಶೋಕಚಕ್ರದಿ

ಮಿನುಗುತಿದೆ ಪೈಗಂಬರ ನಕ್ಷತ್ರ

ಶಿಲುಬೆಯ ಶಿಖೆಯಲಿ ಕೇಸರಿ ಧ್ವಜ

ಆಸೆಯೆಂಬ ಜ್ವಾಲೆಯ ಮಾಲೆ ಕಳಚಿ

ಶಾಂತವಾಗುರಿಯುತಿವೆ ಬುದ್ಧನ ಸಾಲುಸಾಲು ಹಣತೆ

**ಮಾರಿ ಕೋಳಿ**

**- ಮಂಜು ಕೋಡಿಉಗನೆ**

ನಮ್ಮೂರ್ ಬಾಗ್‌ಲ್ಲಿ ಕೆರೆಏರಿ

ಏರಿ ಕೆಳ್ಗೆ ಮಾರಿಗುಡಿ

ಗುಡಿಯ ಹೊರ್ಗೆ ನಾರಿ ಸಾಂಗ್ಯ

ನಡೆದಯ್ತುಲ್ಲೊ.......

ಗುಡಿಯ ಒಳ್ಗೆ ಮಾರಿ ನಾರಿ

ಗುಡಿಯ ಹೊರೆ ನಾರಿ ಮಾರಿ

ಏರಿ ಕೆಳ್ಗೆ ಕಟ್ಟೆ ಮ್ಯಾಲೆ

ಮಾರಾಮಾರಿ। ಮಾರ

ತಮಟೇಯ ಬಡಿತ

ತರಾವರಿ.

ಮಾರನ್ ತಮ್ಮ ಹೊರಟ್ಯೆತೆ

ತಾಳಕ್ ಹೆಜ್ಜೆ ಬೀಳ್ತೈತೆ

ಹೊಲಾರ್ ಕೇರಿ ನಾರಿದ್ದೆಲ್ಲ

ಸರಾಸರಿ.

ಊರ ಹೊರ್ಗೆ ಹೊಲಾರ್ ಕೇರಿ

ಕೇರಿ ಒಳ್ಗೆ ತರಾತುರಿ

ಬಲಗೈಲ್ ಕೋಳಿ ಎಡಗೈಲ್ ಕತ್ತಿ

ಹಿಡಿದಾ ನೋಡಿ.....

ಮಾರಿಗುಡಿ ಕಲ್ಲನ್ ಮುಂದೆ

ಚೂರಿ ಅಲಗು ಸರ್‌ಸರಾಂತ

ಕೋಳಿ ತಲೆ ಹೋಳಾಗೈತೆ

ಬರೋ ಬರಿ.....

ಮುಂದೆ ಮುಂದೆ ನುಗ್ಗಿ ಬಂದ

ಮುತ್ತೈದೇರು ಮ್ಯಾಲೆಬಿದ್ದು

ಕೋಳಿರಕ್ತ ತಗ್ಗು ತಿಲಕ

ಇಟ್ಟಾರ್ ನೋಡಿ.

ಗಂಗಾರಳ್ಳಿ ನಿಂಗಾಜಮ್ಮ

ಪಂಜರದೊಳಗಿನ್ ಕೋಳಿ ಹಿಡ್ದು

ಮಾರಿಗ್ ಬಲಿ ಕೊಡದೆ ಮುದ್ರಿ

ಸಂತೆದಾರಿ ಹಿಡ್ದು ನೇರ

ಹೊಂಟಾಳ್ ನೋಡಿ

ಇವಳ್ಗೆ ಮಾರಿಗುಡಿ ತಂಟೆಯಿಲ್ಲ

ಬಡಿಯೋ ಮಾರನ್ ತಮ್ಮೆಯಲ್ಲ

ಹರಾಹರಿ.

ನಿಂಗಾಜಮ್ಮನ್ ಕೋಳಿಹುಂಜ

ಸಂತೆದಾರಿಲ್ ಕೊಕ್ಕೊಕ್ಕಂತು

ಗಾಳಿಯಿಲ್ಲೆ ಚೀಲದೊಳೆ

ಸತ್ತೊಯ್ತ್ ನೋಡಿ

ಚಟ್ಗಂದ್ ಬಡ್ಕಂದ್ ಅಳ್ತ ಬರುವ

ಸಂತೆರೋಡ್ಲಿ ಗೋಳು ಕೇಳಿ

ಜನರೆಲ್ಲ ನಡಿತವ್ರೆ ಬಿರಿ ಬಿರಿ.

ನಿಂಗಾಜಮ್ಮನ್ ಹುಂಜನ್ ಸುದ್ದಿ

ಸಂತೆ ಕೇರಿಲ್ ಹರಾಜಾಯ್ತು

ಮಾರಿ ಕೋಳಿ ಮಾರೊರೆಲ್ಲ

ಇದೇ ಗತಿ ಅಂತ

ಊರನ್ ಜನ ಆಡ್ಕೊತಾರೆ

ಬಿಸಿ ಸುದ್ದಿ.

ಮಾರಿ ಶಾಪ ಅಂತಂದ್‌ಕೊಂಡು

ತಿರ್ಗಿ ಬಂದ್ಲು ನಿಂಗಾಜಮ್ಮ

ಪಂಜರ್ದ್ ಒಳ್ಗೆ ಮತ್ತೊಂದ್ ಕೋಳಿ

ಹಿಡಿದಾಳ್ ನೋಡಿ। ಪೆದ್ದಿ

ತಪ್ಪು ತಾಗು ಒಪ್ಪು ನೆಪ್ಪು

ಹೊಟ್ಟೆಗೆ ಹಾಕ ಮಾರಮ್ಮಾಂತ

ಕೋಳಿ ಒದರಿ ಬಲಿಯ ಕೊಟ್ಟ

ಕತೆಯಾ ಕೇಳಿ.

## ಜಾತಿಯ ಭೂತ

**ಲಿಂಗಣ್ಣ ಗೋನಾಳ**

ಕರೆದರು ಬನ್ನಿ ನೀವೆಲ್ಲ

ನಮ್ಮ ಗೃಹಪ್ರವೇಶಕೆಂದು.

ಸ್ನೇಹಿತರು, ಸಂಬಂಧಿಗಳು

ಬಂಧು ಬಳಗವೆಲ್ಲರೂ

ಸೇರಿದರು ಆತ್ಮೀಯರೆಲ್ಲರೂ

ಗೃಹಪ್ರವೇಶ ಸಂಭ್ರಮಕೆ

ಪೂಜೆ ಪುನಸ್ಕಾರ ಪ್ರಸಾದ ಮಾಡಿ

ಮನೆಯ ನೋಡಿ, ಊಟವ ಮಾಡಿ

ಸುರುವಾಯಿತು ಮಾತು ಕಥೆ ಪರಸ್ಪರ ಪರಿಚಯ...

ಇವರು ನಮ್ಮ ತಂದೆ-ತಾಯಿಗಳು,

ಭಾವ, ಭಾವಮೈದುನ, ನಾದಿನಿ,

ಅಕ್ಕ-ತಂಗಿ, ಅಣ್ಣ-ತಮ್ಮಂದಿರು,

ಚಡ್ಡಿದೊಸ್ತರು ಮುಂತಾದವರು..

ಎತ್ತೆತ್ತಣದಿಂದಲೂ ಬಂದವರು

ಅವತ್ತೆ ಪರಿಚಿತರಾದೆವು

ಚಿರ ಪರಿಚಿತರಂತೆ

ಎಲ್ಲಿರೋದು? ಏನು ಕೆಲಸ?

ನನ್ನಾಕೆಗೆ ಮತ್ತೊಬ್ಬಾಕೆ ಕೇಳಿದಳು;

ಮತ್ತೊಬ್ಬಾಕೆಗೆ ನನ್ನಾಕೆ ಕೇಳಿದಳು.

ಮಾತಾಡೋದು ಕನ್ನಡ

ಇರೋದು ಹೈದರಾಬಾದ್

ಎಲ್ಲರಿಗೂ ಸಂತೋಷ ಸಂಭ್ರಮ

ಅದರೆ..

ಕೆಂಪು ಸೀರೆಯಾಕೆ



ಕೇಳಿದಳು ನನ್ನಾಕೆಗೆ

ನೀವು ಸ್ವಾಮಿಯವರೇ?

ಅಲ್ಲವೆಂದಳು ನನ್ನಾಕೆ.

ಆ ಮಾತು ಈ ಮಾತು

ಹೊಸಮನೆಯ ಮಾತು

ಪ್ಲಾಟ್ಸೈಟಿನ ಮಾತು

ಮನೆ ಖರೀದಿಯ ಮಾತು

ಮತ್ತೆ..

ಅವಳು ಮಾತು ಮಾತಿನಲ್ಲಿ

ಕೇಳಿದಳು ನನ್ನಾಕೆಗೆ ನೀವೆಂದು?

ರಡೇರೇ

ನನ್ನಾಕೆ ಅಲ್ಲೀ ಎಂದಳು.

ಇಲ್ರಿ ನಾವು ಸ್ವಾಮೇರು..

ನೀವು ಸ್ವಾಮೇರಂಗ್ಯಾ..

ಕಾಣ್ತೀರಿ ಅಂದಾಳಕೆ.

ಕರೆದಳು ಮನೆಗೆ

ಮನೆ ತೋರಿಸಿದಳು

ಒಳಹೊರಗೆಲ್ಲ ತಿರುಗಾಡಿ

ನೋಡಿದೆವು ನಾವೆಲ್ಲ ಮನೆ

ಚಹಾ ಫಲಾಹಾರದ

ಸತ್ಕಾರದ ಆಥಿತ್ಯ

ಇಷ್ಟೆಲ್ಲ ಮಾಡಿದಳು.

ಆದರೂ ಕೊನೆಗೂ

ನಮ್ಮ ಜಾತಿ ಗೊತ್ತಾಗಲಿಲ್ಲವೆಂದು

ವ್ಯಥೆ ಪಟ್ಟಳಾಕೆ..!

ಹೇಳಲಿಲ್ಲ ನಾವೇನೂ

ಸುಳ್ಳು ಜಾತಿ..

ಅವಳು ಕೇಳಿದ ಜಾತಿ

ನಮ್ಮದಲ್ಲವೆಂದಷ್ಟೇ ಹೇಳದೇವು..!

ನನ್ನಾಕೆ ಎಂದಳು ಜಾತಿ..! ಜಾತಿ..!!



ಹೈದರಾಬಾದ್ ನಲ್ಲೂ.

ಎಲ್ಲಿದ್ದೀವ್ರೀ .. . ನಾವು...!?

ಅಂಥ ಪ್ರಶ್ನಿಸಿದಳು.

ನಾನಂದೆ,

ಎಲ್ಲೇ ಇರು, ಎಲ್ಲೇ ಹೋಗು

ಬೆನ್ನತ್ತವುದು ಜಾತಿ ಭೂತವೆಂದೆ

ನಾ ನನ್ನಾಕೆಗೆ

## ಇದು ನನ್ನ ಭಾರತ

**ಹಾಲ್ಕುರಿಕೆ ಶಿವಶಂಕರ್**

ಇದು ನನ್ನ ಭಾರತ

ಇಲ್ಲಿ

ಎಲ್ಲದಕ್ಕೂ ಜಾಗವಿದೆ

ಉರಿದೇಳುವ ಕಾಳುಗಳಿಗೂ

ಬೇರಿಳಿಯುವ ಬೀಜಗಳಿಗೂ

ನನಗೂ ನಿನಗೂ ಕೂಡ

ಇಲ್ಲಿ

ಕಟ್ಟಬಹುದು ಕೆಡವಬಹುದು

ಪ್ರಾಣ ಕೂಡ

ಶಾಂತಿಗಾಗಿ ಕಚ್ಚಾಡು ಉರಿದೇಳು

ಮಲವ ಬಂದ್ ಮಾಡು

ಇದು ನನ್ನ ಭಾರತ

ತೂಕಡಿಸು ಧ್ಯಾನಿಸು

ಇಲ್ಲಿ

ನೆಲಕ್ಕೂ ಚಲನೆ ಇಲ್ಲ

ಕೂರು ನಿಲ್ಲು ಓಡು

ಇದು ನನ್ನ ಭಾರತ

ಅಮೇರಿಕ ಇಂಗ್ಲೆಂಡ್ ಪಾಕಿಸ್ತಾನ ಚೀನಾ

ಇರಾಕ್ ತಾಲಿಬಾನ್

ಅವನ್ನೇಕೆ ಹೊಗಳಲಿ

ಇದು ನನ್ನ ಭಾರತ

ಇಲ್ಲಿ

ವರ್ತ ಭೂತ ಭವಿಷ್ಯತ್‌ಗಳಿಗೂ

ಸಿಡುಬು

ಡಾಕ್ಟರ್‌ಗಾಗಿ ಕಾಯುತ್ತಿವೆ.

ಸಿಂಗಾಪುರ್ ಸಿಲಿಕಾನ್ ಸಿಟಿಗಳ

ಯಾಕೆ ಬೈಯಲಿ ಇದು

ನನ್ನ ಭಾರತ

ಬುಲ್ಡೋಜ್ ಹರಿಸಿ
ಜೋಪಡಿಗಳ ವರಸಿ
ಕಣ್ಣಲ್ಲೂ ಜಡಿಮಳೆ ತರಸಿ
ಟೆರಸ್ ಮೇಲೆ ನಳ ನಳಿಸುವ
ಕೈ ತೋಟ ಮೈ ತೋಟ ಹಬ್ಬುತ್ತವೆ
ಇದು ನನ್ನ ಭಾರತ

ಇಲ್ಲಿ ಎಲ್ಲದಕ್ಕೂ ಜಾಗವಿದೆ
ಕಪ್ಪಿಡಿದ ಉಸಿರಿಗೂ
ತುಕ್ಕಿಡಿದ ಕಾಸಿಗೂ
ನನಗೂ ನಿನಗೂ ಪ್ರಜಾಪ್ರಭುತ್ವಕ್ಕೂ

## ಕಪ್ಪು ಹುಡುಗಿಯ ಹಾಡು

**ಜಯದೇವಿ ಗಾಯಕವಾಡ್**

ಮಾನವೀಯತೆ ಚೆಲುವು

ಒಣಗಿ ಹೋಗಿರುವದನ ಕಂಡಿದ್ದೇನೆ

ಹಗಲು ರಾತ್ರಿ ನನ್ನ ಕೇರಿಗಳು

ಉರಿಯುವದನ ಕಂಡಿದ್ದೇನೆ

ಕಪ್ಪು ಹುಡುಗಿಯ ಕನಸುಗಳು

ಕೆಂಪು ಮಣ್ಣಲಿ ಹೂಳಿ

ಜಾತಿಯ ದೆವ್ವಗಳ ಕೇಕೆ ಹಾಕಿ

ಕುಣಿಯುವುದು ಕಂಡಿದ್ದೇವೆ

ಮುರುಕು ಮನಸ್ಸಿನ ವಾಸನೆಗೆ

ಸೂರ್ಯ ಚಂದ್ರರು ಮರೆಯಾಗಿರುವದನ

ಕಂಡಿದ್ದೇನೆ.

ನನ್ನ ವಂಶಸ್ಥರು ಸತ್ತರು

ಹೂಳಲು ಜಾಗವಿಲ್ಲವೆಂದ

ಈ ನೆಲದಲ್ಲಿ ಇತಿಹಾಸ ಕೆದಕಿ

ನನ್ನದೇ ಮೂಲ ಎಂದರಿತು

ಕಣ್ಣೀರು ಸುರಿಸಿದ್ದೇನೆ

ಬುದ್ಧನ ನಾಡಿನಲ್ಲಿ ಪ್ರೀತಿಯ

ಮಲ್ಲಿಗೆ ಕಳೆದು ಹೋಗಿದೆ

ನಿರಾಶೆಗಳದೇ ದಿನವೂ ಹುಡುಕುತ್ತಿದ್ದೇನೆ

ಕಾವಿ ಬಟ್ಟೆ ತೊಟ್ಟು ಅಲ್ಲಮ್ಮನ ಹಾದಿ

ತುಳಿಯುತ್ತಿದ್ದೇನೆ

ಜನ ಹುಚ್ಚಿಯೆಂದು ಆಡಿಕೊಳ್ಳುತ್ತಾರೆ

ಶೋಷಣೆಯ ಅಸ್ತ್ರಕ್ಕೆ

ಲೋಕದ ದೀಪ ಆರಿ ಹೋಗಿದೆ

ಉಬ್ಬಿದ ಹೊಟ್ಟೆಗಳ ಹಸಿದ ಹೊಟ್ಟೆಗಳು

ಸಾಲು ಸಾಲಾಗಿ ನಿಂತಿವೆ.



ಬ್ರಾಹ್ಮಣನ ಮನೆ ಹೊಲೆಯನ ಮನೆ

ಒಂದಾಗುವುದೇ ಇಲ್ಲ

ಯಾವ ಕಟಕಟೆಯಲ್ಲಿ ನಿಲ್ಲಿಸಿ REHANA

ಮನುವಿಗೆ ನ್ಯಾಯ ಕೇಳಲಿ

ಧಿಕ್ಕಾರ ಹಾಕಲಿ ಗೆಳತಿ

ವೇದ ಶಾಸ್ತ್ರ ಪುರಾಣಗಳು

ಪುನಾರಾವರ್ತನೆಯಾಗುವುದು ಬೇಡ

ರಾಮ ಕೃಷ್ಣರಿಗೆ ಕೋಟಿ ಕೋಟಿ ನಮಸ್ಕಾರಗಳು

ಸೀತೆ ಕರ್ಣ ನನ್ನಂತಹ ಎಷ್ಟು

ಅಮಾಯಕರಿಗೆ ಯಾಕೆ ಯಾಕೆ ಬೇಕು

ಗುಲಾಬಿ ತೋಟದಲ್ಲಿ

ಮುಳ್ಳುಗಳಿಂದ ಗಾಯಗೊಂಡವರು

ನರಳಾಡುತ್ತಲೇ ಇದ್ದಾರೆ

ನಾಗರಿಕತೆಯ ಕಲಿಗಾಲದಲ್ಲಿಯು

ಮುಳುಗಿಲ್ಲ  ನನ್ನವರ ಹಾಡು -ಪಾಡು

ಬಡವರ ಬಿಕ್ಕು ಹೆಣ್ಣಿನ ಆಕ್ರಂದನ

ದಲಿತರ ಗೋಳಿಗೆ ಬೆಂಕಿ

ಹಚ್ಚಿ ಖುಷಿ ಪಡುತ್ತೇನೆ

ನೆಲ ಮುಗಿಲ ಒಂದಾಗಿ ದೋ ಎಂದು

ಮಳೆ ಸುರಿದಾಗ ಹುಚ್ಚೆದ್ದು

ಹೊಸ ಹಾಡು ಹಾಡುತ್ತೇನೆ ಗೆಳತಿ!

## ಒಡಲ ಕಿಚ್ಚಿನ ಹಿಲಾಲು ಹಿಡಿದು

**- ನಾಗೇಶ್ ಜೆ. ನಾಯಕ**

ಊರಾಚೆಯ ಕೇರಿಗೇ

ಸೀಮಿತವಾದ,

ಸತ್ತು ಸತ್ತು ಬದುಕುತ್ತಿರುವ

ನಮ್ಮಂಥವರ ಬಳಿ

ನಿಮ್ಮ ನೆರಳೂ ಸುಳಿಯದು

ದೊಡ್ಡವರ ಬಂಗಲೆಗೆ

ಕಲ್ಲು ಹೊತ್ತು ಕರಗಿದೆವು

ಮೇಲೆರಲು ಮೆಟ್ಟಿಲಾಗಿ

ನಿಂತಲ್ಲಿಯೇ ಮರುಗಿದೆವು

ನಿಮ್ಮ ಬಂಡೆಗಲ್ಲಿನ ಮನಸು

ನಮ್ಮ ಕಣ್ಣೊರೆಸಲಿಲ್ಲ ಬಿಡಿ

ತರತಮದ ತುಳಿತಕ್ಕೆ

ಬೇಸೂರಾದ ಹತಭಾಗ್ಯರು

ಉಳ್ಳವರ ತೆವಲಿಗೆ

ಉಸಿರು ಕಳೆದುಕೊಂಡ

ನನ್ನವರು ನುಂಗುವ ನೋವಿಗೆ
ಕರುಳು ಚುರೆನ್ನುತ್ತದೆ

ನಮ್ಮ ಕನಸಿಗೆ ಕೊಳ್ಳಿಯಿಟ್ಟು
ಕೇಕೆ ಹಾಕುವ ಕಿರಾತಕರ
ಹಾದಿಗೆ ಅದೆಷ್ಟು ದಿನ
ಹೂ ಮಳೆಗರಿಯುವದು ಹೇಳಿ?
ಗರಿ ಮುದುರಿಕೊಂಡ ರೆಕ್ಕೆಗಳ
ಇನ್ನಾದರೂ ಬಿಚ್ಚಬೇಕಿದೆ
ಕುಕ್ಕಿ ತಿನ್ನುವ ರಣಹದ್ದುಗಳ
ರಕ್ತ ಹೀರಬೇಕಿದೆ



ಬಚ್ಚಿಟ್ಟ ಒಡಲ ಕಿಚ್ಚಿನ
ಹಿಲಾಲು ಹಿಡಿದು
ಹಲಾಲುಕೋರರ ಮಹಲಿಗೆ
ಮುತ್ತಿಗೆ ಹಾಕಬೇಕಿದೆ
ಬನ್ನಿ
ಸಮತೆಯ ಬಾವುಟವೂರಿ
ಹೊಸ ಹಗಲಿನ ಹೆಗಲು ತಟ್ಟೋಣ!

**ನೀರ ಕುಲುಮೆ**

ದೇವರೇ ಬಂದು ಬಿಡು
ಒಂದು ದಿನ ನಮ್ಮ ಹಿತ್ತಲ ಮನೆಗೆ
ಅಘ್ರಾಣಿಸಲು ಸೂಸುವ ಪರಿಮಳಕ್ಕೆ
ಒಗೆದ ಬಟ್ಟೆ ಸಾಲುಗಳ ನೋಡಿಬರಲು

ಸೀಗೆ ಮಳೆಯಲ್ಲಿ ಹಬ್ಬಿನಿಂತ
ನುಗ್ಗೆ ಮರದಲ್ಲಿ ನೇತಾಡುವ
ನುಗ್ಗೆಕಾಯಂತೆ ನೇತಾಡುವ
ಕೋರೈಸುವ ಕೊರಬಾಡಸರಪಳಿಯ ಸವಿಯಲು

ನೆನ್ನೆ ಸುಲಿದಿಟ್ಟ ಚರ್ಮವನ್ನು
ಹದಮಾಡಿ ನೇರಕ್ಕೆ
ನೇತುಹಾಕಿ ಮೊಳೆ ಹೊಡೆದು
ಆಕಾಶಕ್ಕೆ ಮುಖ ಮಾಡಿದ
ಆ ಅಮಾಯಕ ಪ್ರಾಣಿಯ ಜೊತೆಗೊಂದಿಷ್ಟು
ಕೂತು ಮಾತಾಡು

ಸೊರಗಿ ಸೊಡರಾಗಿ
ನೇತಾಡುವ ಸೋರೆ
ಬುರುಡೆಯೊಳಗೆ ತಂತಿ

ಬಿಗಿದು ನಿನ್ನ ಬಿಗುಮಾನವ

ಬಿಂಕ ಬಿನ್ನಾಣವ ಬಿಡಿಬಿಡಿಯಾಗಿ

ಹಾಡಿ ಹೊಗಳುವೆ ಹೂವೊಳಗೆ

ತುಳುಕಾಡುವ ನಿನ್ನ

ಚಿತ್ತಚಾಂಚಲ್ಯವ

ಅರ್ಥ ಮಾಡಿಕೊಳ್ಳಲು

ಬಂದುಬಿಡು



ಧೂಪ, ಗಂಧ, ಕರ್ಪೂರ

ಸಾಮ್ರಾಣಿಗಳ ಗಮಲು

ಅಮಲೊಳಗೆ

ಪಂಚೇಂದ್ರಿಯಗಳೆಲ್ಲಾ

ಪಂಚದಿಕ್ಕುಗಳಲ್ಲಿ ಚದುರಿ

ಹೋಗಿರುವ ಚೈತನ್ಯವನ್ನು

ಪರಮ ಪಾವನಗೊಳಿಸುವೆ

ತೆರೆಬಟ್ಟೆಯೊಳಗೆ

ಬಂಧಿಸಿ ಗರ್ಭಗುಡಿ

ಯೊಳಗೆ ನಿನ್ನ ಗರ್ಭವನ್ನೇ

ಕೊಯ್ದು ಕೊರಳು ಹಿಚುಕಿದ್ದನ್ನೂ

ಮರೆತು ತಪ್ಪಿಸಿಕೊಂಡಾದರೂ

ಬಂದು ಬಿಡು.

ಮಂತ್ರ ತಂತ್ರಗಳೊಳಗೆ

ನೀನೇ ಸ್ತಬ್ಧವಾಗಿ

ಸದ್ದಿಲ್ಲದೆ ಮೌನಿಯಾಗಿ

ನಿರುತ್ತರನಂತೆ ನಿತ್ರಾಣಗೊಂಡು

ಇರುವೆ ಹಂಡೆಯೊಳಗೆ

ಕಾದ ಬಿಸಿನೀರಲಿ ನಿನ್ನ

ಮೀಯಿಸಿ ಮುದ್ದಿಸುವೆ ಬಂದುಬಿಡು

ಹರಿವ ನೀರಲ್ಲಿ

ಧುಮುಕುವ ಝರಿಯಲ್ಲಿ

ಹಕ್ಕಿಗಳ ಇಂಚರದಲ್ಲಿ

ನೀರಸೆಲೆಯಾಗಿ ಭೂಮಿತಾಯ

ಘಮಲಾಗಿ ಬಂದುಬಿಡು

ಬಯಲೇ ಆಲಯವಾಗಿಸಿ

ಕೊಂಡು ನಿಲುವಿಲ್ಲದ

ನೀರಕುಲುಮೆ ಮೇಲೆ

ಕುಳ್ಳಿರಿಸಿ ಕುಲದ ಬೇಲಿಯ

ಇದ್ದಿಲ ಸುಟ್ಟು ಹೊಳುಪು ಮಾಡುವೆ

ಬಂದು ಬಿಡು

## ಜಲಜಂಬೂಕನ್ನೆ

**- ರವಿಕುಮಾರ್ ನೀಹ**

ಆಕಾಶವ ಚಿತ್ತಶಾಲೆಯ

ಮಾಡಿ

ಎಳೆದಷ್ಟೂ ದಾರ

ಕಂಡಷ್ಟೂ ದೂರ

ಕೇಳದ ಸಬುದವ

ಕೇಳಿಸಿಕೊಂಡು

ಕೂಡದ ಸಂಗವ

ಕೂಡಿಸಿಕೊಂಡು

ಮೂಡಿದ ಮದವ

ಮರೆಮಾಚಿಕೊಂಡು

ನೀನೇಕೆ ಬಂದೆ?

ಹೀಗೇಕೆ ನಿಂದೆ????

ಅಂಗದಮೇಲೆ ನಿನ್ನಯ

ಲಿಂಗ

ಅಂಗೈಯ ಮೇಲೆ

ಆಕಾಶ ತೋರಿ

ಕೂಡದ ಲಿಂಗವ

ಕೂಡಿಸಿಕೊಂಡು

ಸೇರದ ಸಂಗವ

ಸೇರಿಸಿಕೊಂಡು

ಕೂಡಲಸಂಗಮ  ದೇವನಾದೇ

ಅರಿವ ಗಂಗಳವಿಡಿದು

ಅಲೆದಾಡಿದ್ದೇ

ಸಂಪಾದನೆ ಕಟ್ಟಿಕೊಂಡ ಕಮಟು

ವಾಸನೆ

ಬಾಡದ ಜಡ್ಡ ಬಿಡಲಾರದೆ
ಬೆನ್ನುಬಾಗಿ
ಸ್ಯಾವೇ ನೀಗಿ
ಬೋಳಿ ನೆತ್ತಿಯಲಿ
ಇರುವುದೆಲ್ಲ ಕಳೆದುಕೊಂಡು
ಮನ ಬೆತ್ತಲಾಗಿ
ಘನರೂಪತಾಳಿ
ಚಿಕ್ಕ ಚಿಲುಮೆಯಲಿ
ಹರಿದು
ದೊಡ್ಡ ಚಿಲುಮೆಯಾಗಿ
ಪಾಂಡವರಗುಟ್ಟೆಯಲಿ
ಪಟ್ಟಪಾಡ ನೆನೆದು
ಮೂಗುದಾರವಿರದ
ಮೂಕಬಸವನಾದೆ

ದೊರೆಯ ಧರೆಯಲಿ ನಿಂತು
ಕೈಮುಡಿಯಲಿ ಹೊನ್ನು ಬಿತ್ತಿ
ಬೆಳೆ ಬಂಗಾರದ
ಮೊರೆಯಲಿ ಸಿಲುಕಿದ

ಜೇಡವೇ

ನುಡಿ ನಾಲಗೆಯಲಿ ಶಿವನಾಮವ

ಜಪಿಸಿ

ಮಡಿ ಮೈಲಿಗೆಯ ದೂಡಿ

ಮನ ಮಂದಿರ ಮಾಡಿ

ಕಡೆದ ಬದುಕನ್ನು ಕದಡಿದ

ರೂಹುವೇ

ದೇಹ ದೇಗುಲವಾಗಿಸಿ

ಮನಸು ಮಾಗುವ ಮುನ್ನ

ಮರಣಚಯ್ಯದಲಿ ಮಲಗಿಸಿ

ಮನಗೆಡಿಸಿ ಮನುವಾದ

ಮನವೇ

ಹುಟ್ಟ ಲಿಂಗವಿಲ್ಲದೇ

ಕಟ್ಟಲಿಂಗದಿಂದಲೇ

ಜಗವ ಮರೆವ ಶರಣರ
ಜಂಘಾಬಲ ಅಡಗಿಸಿದ
ಜಂಬೂ ಕುಡಿಯೇ

ಕುಲ ಕಳೆದುಕೊಂಡವರ
ಸಂಗದಲಿ
ಬೇಲಿ ಮೇಲೆ
ನೆಗೆ ನೆಗೆದು
ಲಿಂಗ ಕುಣಿದು ಅಣಕಿಸಿತು

ಲಿಂಗ ಸಂಗದಲಿ
ಕಳೆದ ಕಾಲವ ನೆನೆದು
ಲಿಂಗ ಕುಲವು
ತಡಕಾಡಿ ಹುಡುಕಾಡಿ
ಪರದಾಡಿತು

ಅಂಗದ ಸಂಗದಲ್ಲಿದ್ದ
ಲಿಂಗವು
ಅಂಗ ತೊರೆದು

ಎಲ್ಲಿ ಹೋಯಿತು

ಅಂಗವೇ ಕ್ಷಮಿಸು

ಲಿಂಗವೇ ಲಿಂಗವೇ

ಕಾಡದಿರು ಲಿಂಗವೇ

ಕಲ್ಲಿನಲಿ ಹುಟ್ಟಿ

ಕೂಗುವ ಕಾಯುವ ಲಿಂಗವೇ

ಮಾತಾಡು ಮಾತಾಡು ಲಿಂಗವೇ

ಎಂದರಸಿ ಕೂಗಿದರೂ

ಕರಗದೇ

ಬೇಲಿ ಮೇಲೆ

ಕುಳಿತಿಹೆಯೇ

ಯಾರ ಹುಟ್ಟಲಿಂಗದಿಂದ

ನನ್ನ ಕೂಡುವೆ

ಕಟ್ಟಿದ್ದನ್ನು ಕಟ್ಟಿ

ಕುಲಗೆಡಿಸಿದವರೇ

ಕಟ್ಟಲಾರದನು ಕಟ್ಟಲಾಗದೇ
ದಿಕ್ಕೆಟ್ಟು ಕುಂತವರೇ

ಕಟ್ಟಲಿಂಗವ ಕಟ್ಟಿಕೊಂಡು
ಹುಟ್ಟಲಿಂಗದ ಜಪ್ತಿಯ
ಮರೆತು

ಲಿಂಗವ ಅಂಗದಲ್ಲಿರಿಸಿ
ಅಂಗವೇ ಲಿಂಗವೆಂಬುದ
ಮರೆತ ಲಿಂಗರೇ

ಅಂಗಲಿಂಗದ ಮೇಲೆ
ಗೆರೆಯೊಂದು ಮೂಡಿ
ಗೀಚಿದ್ದು ರಾಚಿದ್ದು.....
ಶೂನ್ಯವೇ....?

ಮುಡಿಗಂಟ
ಮುಟ್ಟಬೇಕು
ಅಡಿಗಂಟ

ಅಂಟಿಸಬೇಕು

ಮುಟ್ಟಿದ್ದೆಲ್ಲ ಲಿಂಗವಾಗಿ

ಮೆಟ್ಟಬೇಕು

ಮೆಟ್ಟ

ಮುಡಿಯಬೇಕು

ಮುಟ್ಟಿದ್ದೆಲ್ಲ ಲಿಂಗವಾಗಿ

ಬಡಿದಿದ್ದೆಲ್ಲ ಭಕ್ತನಾಗಿ

ನಿಗಿ ನಿಗಿ ಕೆಂಡದಲಿ

ಬೆಂದು

ಮದವ ಮೆಟ್ಟಿ

ಮನವ

ಮುಟ್ಟಿನಿಂತ

ಮೌನಧ್ಯಾನಿ

ಮೌನಿ ಯೋಗಿ

ಧ್ಯಾನಿ ಮುನಿ

ಮಾತಂಗ...!

ಮಾತನಾಡದ

ಮೂಕಲೋಕವೂ

ದಿಕ್ಕು ದಿಕ್ಕಿಗೆಲ್ಲ

ದಾಟಾಡ ಗುಂಡ

ಕಟ್ಟಿ

ದಾಟಾಡ ಗುಂಡಿನಿಂದ

ಕಾವಲುಗುಟ್ಟೆಗೆ

ಜಿಗಿತ.



**ಇದ್ದಿಲು ಮಾರುವ ಹೆಂಗಸರು**

**- ವಿ.ಎಂ.ಮಂಜುನಾಥ**

ನನ್ನ ತಾಯಿ ಕಡೆಯ ಸಂಬಂಧಿಕರಿವರು

ಇದ್ದಿಲಿನಂತೆ ಕಗ್ಗತ್ತಲನ್ನುಗಿಯಬಲ್ಲ ಮಹಾ ದರಿದ್ರರಂತಿದ್ದರು

ಹೆಂಡದಾಸೆಗೆ ದಿನ್ನೆ ಬಯಲಿನ ಪೊದೆಗಳಲ್ಲಿ

ಇಸ್ಪೀಟಾಡಲು ಬರುವ ಗಂಡಸರ ಜೊತೆ ಮಲಗೆದ್ದದ್ದನ್ನು

ಎಷ್ಟೋ ಸಲ ನೋಡಿದ್ದೇನೆ.

ಒಂಟಿಗಿಡದ ಪನ್ನೀರ ಫಲಗಳು ದುರಾಶೆ ತುಂಬಿದ
ಅವರ ತೃಷೆಯನ್ನು ಹೋಗಲಾಡಿಸುತ್ತಿದ್ದವು

ಊರೂರಲೆದು ಹೊತ್ತು ತಂದ ಇದ್ದಿಲನ್ನು ಸಂಜೆಗತ್ತಲೇರುತ್ತಿದ್ದಂತೆ
ಮಾರಿ, ಗಡಂಗು ಹೊಕ್ಕುಬಿಡುತ್ತಿದ್ದರು ತಾಟಗಿತ್ತಿಯರು.

ಅವರ ಸೊಂಟದ ಬದಿಯ ಕತ್ತಿಗಳು ವಾರಕ್ಕೊಮ್ಮೆಯಾದರೂ
ಕುಲುಮೆಗಾರನಲ್ಲಿಗೆ ಹೋಗಿ ಬರುತ್ತಿದ್ದದ್ದು ನೆನಪಾಗುತ್ತಿರುತ್ತದೆ.



**ಕಪ್ಪು**

**ಕವಿತಾ ಸಿ ಕುಸುಗಲ್ಲ**

ಸೂರ್ಯ  ಉದಯಿಸಿದರೂ
ಬೆಳಗು ಬೈಗಿನ ಛಾಯೆಯಲ್ಲಿ
ಗಾಳಿಗೆ ಸಿಲುಕಿ
ನಂದುತ್ತಿರುವ ದೀಪದಂತೆ
ಅದೆಂಥ ಬೆಳಗು?
ಬೆಳಗಿಗೆ ಮೊದಲೇ ಬೈಗು
ಸೊಡರಿಗೆ ಮೊದಲೇ ಗಾಳಿ
ಕಪ್ಪು ಮೋಡಗಳ ಮಡಿಲಲ್ಲಿ
ಹರಿವ ಝರಿ ಕಪ್ಪು

ಮಲೆಗಳ ಮಧ್ಯೆ

ಆಗಸಕ್ಕೆ ಮುಖ ಮಾಡಿ

ನಿಂತ ಮರ ಬಳ್ಳಿ ಕಪ್ಪು,

ಸುಯ್ಯುವ ಗಾಳಿಯ ರವ ಕಪ್ಪು,

ರೌದ್ರವ ರಾತ್ರಿಯಲಿ

ಬಾನಿನಿಂದುದುರುವ ಆಶ್ರು ಕಪ್ಪು

ಕಪ್ಪು ಕಡಲು

ಕಪ್ಪು ಪರ್ವತ

ಕಪ್ಪು ದಿಗಂತ

ಕಪ್ಪು ಏಕಾಂಗಿ ಮನ

ನೀನೇಕೆ ತೊಳಲಾಡಿದೆ

ಈ ಕಪ್ಪು ರಾಜ್ಯದಿ

ಕಪ್ಪು ಛಾಯೆಯಾಗಿ?

ಕಪ್ಪು ಆಗಸದಿ

ಸ್ಥಿರವಾಗಿ ನಿಲ್ಲಲಿ

ನಕ್ಷತ್ರವೊಂದು ಮಿನುಗಿ,

## ಊರು ಬಿಟ್ಟು ಊರು ಸೇರುವ ಮುನ್ನ

**ಎನ್.ಸಿ.ವೆಂಕಟರಾಜು**

ಇಲ್ಲಿಯವರೆಗೂ ಹಾಗೆ ಇದ್ದೆ.

ನನ್ನ ಹಾಡು ನನಗೆ ಜಗದ ಪಾಡು ಜಗಕೆ

ಜ್ಯೋತಿ ವರ್ಷದ ಸವಿ ನಮಗೆಲ್ಲಿ ?

ತೃಪ್ತಿಯ ತೇಗು ಗಗನ ಕುಸುಮ

ಹುಟ್ಟಿನ ಸೋಗಿಲ್ಲದ

ಕನಸುಗಳ ಕಾಮನಬಿಲ್ಲು

ಅಪ್ಪ ಬಿಟ್ಟ ಬಾಣಗಳ ನಿಸ್ತಂತು

ಬತ್ತಳಿಕೆಯೂ ಇಲ್ಲದ ಊರುಗೋಲು

ಸರಾಯಿ ಚಿತ್ತಿನಲಿ ಹೆಗಲಮ್ಯಾಲೆ ಕೂತಾಗ

ಕ್ಷೀಣಸ್ವರ, ಬಿಕ್ಕಳಿಕೆ

ಹೆಂಡಬಾಡಿನ ರುಚಿ ನನಗೂ ತಟ್ಟಿತ್ತಲ್ಲ

ಬಾಯಿಕಿವಿಗಳ ನಡುವೆ ಗತನಾಳ

“ನೀನಾದ್ರು ಓದು' ನಮ್ಮ ಬಾಯಿಗೆ ಹೇಲೆಂಬ

ಗಟಾರದ ಬಂಡೆ ಮಾತು

ರೂಪಾಯಿಗೊಂದು ಅಂಗಿ ಚಡ್ಡಿ

ಮನೆಯಲ್ಲಿ ಸಿರಿತನದ ಸೀಮಂತ

ಸವೆದ ಹೆಡ್‌ಲೈಟುಗಳಿಗೆ ಬೇರೊಂದು ಪೋಷಾಕು

ಗೆದ್ದಲ್ಲಿಡಿದ ಪುಸ್ತಕ ಸಂತೋಷದ ಹೆಗಲಿಗೆ

ದಿನವೂ ಸೂರ್ಯ ಏರುತ್ತಲೇ ಇದ್ದ

ಕುಂತಿದ್ದ ಕುಬ್ಬ ದೇಹದ ಮುಂದೆ ವಾಮನ

ಗೊತ್ತಿಲ್ಲದ ಕಾಗದದ ಅವ್ವ ಹಣೆಗೊತ್ತಿದ್ದೆಷ್ಟೋ ಬಾರಿ

ಅಪ್ಪನಿಗೋ ಬಿಮ್ಮೆನ್ನುವ ಧೀಮಂತಿಕೆ

ನಿಜ.

ಉಟ್ಟ ಬಟ್ಟೆಯ ಬಿಟ್ಟು ಬೇರೊಂದಿಲ್ಲ



ಸಮಾಧಾನಿಸಿ ತಟಾಯಿಸಿ

ಪಟಪಟನೆ ಬಿದ್ದ ಹನಿ ಜಾಗವಿಡಿಯುವ ಗಲಾಸು ಒಗೆದು

ಸೆಗಣಿ ತೆಗೆದು ನಯಗೊಳಿಸುವಾಸೆ

ಅಪ್ಪ ಅವ್ವನನು ಶ್ರವಣಕುಮಾರನಂತೆ ಸಲಹಬೇಕೆಂಬಾಸೆ

ಇದೂ ಇತ್ತು.

ಊರನ್ನು ತೊರೆಯದೆ

ಕೇರಿ ಉದ್ಧಾರ ಮಾಡಪ್ಪ

ನಿನ್ನ ಹೆಸರಿಂದ ದೀಪ ಹಚ್ಚುವೆವೆಂಬ ವಾಗ್ದಾನ

ಮಕ್ಕಳು ಹಿಡಿದ ಕಾಲುದಾರಿ ಹಿರಿದಾರಿಯಾಗಿತ್ತು

ಗೌಡನಿಗೆ ವಾಂತಿಬೇದಿಯಾಗಿದೆಷ್ಟೋ ಬಾರಿ

ಹೆಂಡದ ಗುಡಿಸಲಿಗೆ ಬೆಂಕಿ ಬಾಟಲುಗಳ ಹೊಡೆತ

ಏನಾದರೂ ಮಾಡಿಯೇ ತೀರುತ್ತೇನೆಂಬ ಛಲ

ಎಲ್ಲವೂ ಇತ್ತು

ದಿಕ್ಕು ತಪ್ಪಿದ ದಿಕ್ಸೂಚಿಯ ಮೊನೆ ತಿರುಗಿತ್ತು

ಕೂರೆ ಕುಕ್ಕದ ಉಗುರಿಗೆ ಬಣ್ಣ ಹೊಡೆಸಿ

ಶ್ಯಾಂಪು ಹಚ್ಚಿ, ಕಣ್ಣಿಗೆ ಕಣ್ಣಿಟ್ಟು ಬೆರಸಿ

ಉನ್ಮಾದದ ನರಳಿಕೆಯಲ್ಲೇ ಮತ್ತೆ

ಅಪ್ಪನ ಗಟಾರವನ್ನೇ ಸೇರಿದ್ದೆ.



## ನಿಮ್ಮನ್ನೇನೆಂದು ಭಾವಿಸಲಿ?

**- ಮಲಿಯಪ್ಪ ನಾಟೇಕರ್**

"ಲೋಕವರಿಯದ ಮೂಕನ

ಕರದೊಳ್ ಹಳದಿ ಅಕ್ಕಿಯ ಕೊಟ್ಟು

ಕಾಲು ಭುಜ ಹಣೆಗೆ ಒತ್ತುವಾಗ

ನೆಮ್ಮದಿಯ ಉಸಿರು ಬಿಡುವ ನೀವು

ನನ್ನ ಉದ್ದಾರಕರೆಂದು ಭಾವಿಸಲೆ?"

"ಅರಿಯದ ಹಸುಳೆಯ ಹಣೆಗೆ

ಹೂವಿನ ದಂಡಿಯ ಕಟ್ಟಿ

ಕರಿಮಣಿ ಸರ ಕೊರಳಿಗೆ ಬಿಗಿಯುವಾಗ

ಚೈತನ್ಯದ ಚಿಲುಮೆಯಾದ ನೀವು

ನನ್ನ ಭಾಗ್ಯದ ದೇವರೆಂದು ಭಾವಿಸಲೆ?"

"ಸತಿಪತಿಗಳೇನೆಂದರಿಯದ ನಮಗೆ

ಅಪ್ರಾಪ್ತ ವಯಸ್ಸಲಿ ಪ್ರಸ್ತಕ್ಕೆ ದೂಡಿ

ಇರುಳ ಶ್ರಮಿಸಲು ಬಿಟ್ಟು

ಮೊಮ್ಮಕ್ಕಳ ಬಯಸುವ ನೀವು

ಸಾಕ್ಷಾತ್ ಶಿವನವತಾರವೆಂದು ಭಾವಿಸಲೆ?"

"ಹೇಳಿ, ನಿಮ್ಮನ್ನೇನೆಂದು ಭಾವಿಸಲಿ?

ನಿಮ್ಮನ್ನೇನೆಂದು ಪೂಜಿಸಲಿ?

ಭವಿಷ್ಯಾಹುತಿ ಪಡೆದ ನಿಮ್ಮನ್ನು

ಏನೆಂದು ಬಣ್ಣಿಸಲಿ ಹೇಳಿ?

ನಿಮ್ಮನ್ನೇನೆಂದು ಬಣ್ಣಿಸಲಿ ಹೇಳಿ?"



## ನಮ್ಮದೇ ಗೋವು ನಮ್ಮ ಆಹಾರ

**- ಚಿದಲೋಟಿ ರಂಗನಾಥ್**

ಗೋವು ಬಿಟ್ಟೆವೆಂದು

ನಿಮ್ಮನೆಗಳ ಹೆಣ್ಣು ಕೊಟ್ಟು ಮದುವೆ ಮಾಡುವುದಿಲ್ಲ.

ಗುಡಿಗೋಪುರ ದೇವರೆಂದು ಪಥ್ಯ ಮಾಡಿದರೆ

ನಮ್ಮ ಮೇಲಿನ ಕೀಳು ಭಾವನೆ ತೊಳೆದೋಗುವುದಿಲ್ಲ

ಮಡಿ ಮಡಿ ಗರಿ ಗರಿ ಉಡಿ ಬಿಟ್ಟರೆ

ನಾವು ನಿಮ್ಮರಾಗುವುದಿಲ್ಲ.

ನಮ್ಮ ತಾತರಿಂದ ಹೆಬ್ಬೆಟ್ಟೊತ್ತಿಸಿಕೊಂಡ ಆಸ್ತಿ

ಮರಳಿ ಕೊಡುವುದಿಲ್ಲ

ಗೋವು ಬಿಡಿಸಿ ನಿಮ್ಮನೆಗೆ ಕರೆದು

ಊಟ ಕೊಟ್ಟು ಸತ್ಕರಿಸುವುದೂ ಇಲ್ಲ

ಮನುಷ್ಯ ಧರ್ಮದ ಸಾರ ಸಾರುವುದು ಇಲ್ಲ

ವೇದ ಉಪನಿಷತ್

ಎಂದು ಬೊಬ್ಬೆ ಹೊಡೆದುಕೊಳ್ಳುವ ನೀವು

ಮನುಷ್ಯತ್ವ ಉಸಿರಾಡಿ ಬೆಳಕಾಗುವುದಿಲ್ಲ

ನಾವು ಕುಡಿಯುವ ಗಾಳಿಯನ್ನೂ ನೀವು

ಕುಡಿಯುತ್ತೀರೆಂಬ ಒಂದು ಸಣ್ಣ ಅರಿವೂ ನಿಮಗಿಲ್ಲ

ಅಂದ ಮೇಲೆ ಜಾತಿಗೆ ಬಣ್ಣ ಯಾಕಚ್ಚಿ ಅವಮಾನಿಸುತ್ತೀರಿ? ಸ್ವಾಮಿ

ನೀವು ದೇವರ ಮಕ್ಕಳಂತೂ ಅಲ್ಲವೇ ಅಲ್ಲ

ಹಾಗಿದ್ದ ಮೇಲೆ ಯಾಕೀ ತಾರತಮ್ಯ

ಗೋವಿನ ಗಂಜಳ ಬೇಕು

ದೇವರ ಸಂಪ್ರೋಕ್ಷಣೆಗೆ

ಗೋವಿನ ರಕ್ತ ಹಿಂಡಿ ಹಾಲಿನ ರೂಪದಲ್ಲಿ

ಕುಡಿದು ತೇಗುವ ನಿಮಗೆ

ನಾವು ಗೋವು ತಿಂದರೆ ಅನಿಷ್ಟವೇ?

ಅದಲ್ಲ, ನಿಮ್ಮ ಒಳಗುಟ್ಟು

ಮುಂದೆ ಗೋವಿಲ್ಲದಿದ್ದರೆ ನಿಮಗೆ ಹಾಲಿನ ರೂಪದ

ರಕ್ತಕ್ಕೆ ಬರ ಬಂದೀತೆಂಬ ಭಯ!

ಮೇವು ನಮ್ಮದು
ಗ್ವಾಂದಿಗೆಯೂ ನಮ್ಮದೇ
ಗೋವು ನಮ್ಮದೆ
ಹಾಲು ಪವಿತ್ರ ಅನ್ನುವ ನೀವು
ಅದರ ಮೂಳೆ ಮಾಂಸದಿಂದಲೇ
ಹಾಲೆಂಬುದು ಮರೆತಿದ್ದೀರಿ
ನೀವು ಗೋವಿನ ಹಾಲು ಮೊಸರು ತುಪ್ಪ ಬಿಟ್ಟು
ಥೂ! ಅನಿಷ್ಟ ಅಂದು ಬಿಡಿ
ಆಗ ಗೋಮಾಂಸ ನಿಷೇಧಿಸಿ
ಅದು ಬಿಟ್ಟು ನೀವು ಹಿಂಡಿ ಹಿಪ್ಪೆ ಮಾಡಿದ ಮಾಂಸಕ್ಕೆ
ಕತ್ತರಿ ಯಾಕಾಕುತ್ತೀರಿ?
ಯಾವ ಕಾನೂನೇಳಿದೆ?
ಪುರಾತನ ಕಾಲದಿಂದಲೂ ಅದು ತಿನ್ನು
ಇದು ಬಿಡು ಎಂದು
ಹೊಸ ಅವತಾರವೆತ್ತಿ
ಸುಳಿಗೆ ನೀವೆ ಸಿಕ್ಕುತ್ತೀರಿ
ನೀವೆ ತೋಡಿದ ಗುಂಡಿಗೆ
ನೀವೆ ಬೀಳುತ್ತೀರಿ ಎಚ್ಚರ!
ಗೋವಿನ ಮಾಂಸ ಹೊಲಸು ಎಂದಾದರೆ
ನೀವು ಹೊರ ಹಾಕುವ ಹೇಲು
ಭೂತಾಯಿಗೆ ಅಪವಿತ್ರವಲ್ಲವೇ?
ಅದನ್ನು ಎಲ್ಲಿ ಹಾಕಬೇಕು ಎನ್ನುವ ಕಾನೂನುಮಾಡಿ
ಹೊಲಸಿಲ್ಲದ್ದು ಯಾವುದು ಸ್ವಾಮಿ?

ಹುಡುಕುತ್ತ ಹೋದರೆ ಮನುಷ್ಯನೇ ಹೊಲಸು

ಆಗಂತ ಸಾಯಲಿಕ್ಕಾಗುತ್ತದೆಯೇ?

ನಮ್ಮದೇ ಆಹಾರ

ನಮ್ಮದೇ ಗೋವು

ಮೃಷ್ಟಕ್ಕೆ ನಮ್ಮನ್ನು ಬಿಟ್ಟುಬಿಡಿ

ಆಹಾರಕ್ಕೆ ನಿರ್ಬಂಧವೇಕೆ?



## ನಿನ್ನ ಕೈ ಕೌಬಿಯಾಗಿ ಅರಳುವ ಪರಿ

**- ಅರುಣ್ ಜೋಳದ ಕೂಡ್ಲಿಗಿ**

ನಿನ್ನ ಒಳಜಗತ್ತಿನಲ್ಲೆಲ್ಲ ಮೂಡಿರುವ ನನ್ನುಸಿರ

ಹೆಜ್ಜೆಗಳು

ಆತನ ಸ್ಪರ್ಶಕ್ಕೆ ಮಾಸುವ ಮುನ್ನ ನೋವ ಪೆಟ್ಟಿಗೆ

ಯಲ್ಲಿ ಬಚ್ಚಿಟ್ಟಕೊ,

ಏಕಾಂತದಿ ನನ್ನ ಜತೆ ಮಿಂದುಬಂದ ಮನಸ್ಸನ್ನು

ಸಪ್ಪಳವಿಲ್ಲದೆ ಒಳಕರೆದುಕೊ

ಆತ ಎಚ್ಚರಾಗುವ ಮುನ್ನ ಮನಸ್ಸಿನ ಮೈ ತೊಳೆದು

ಹೊಸ ಬಟ್ಟೆ ತೊಡಿಸಿಬಿಡಿ

ನನ್ನ ನೆನಪುಗಳ ನಿನ್ನ ಮಗುವಿನ ಆಟಿಕೆಗಳಾಗಿಸು

ವುದದಾರೆ

ಅವುಗಳೆಲ್ಲಾ ಆತನ ಕಾಲ್ತುಳಿತಕ್ಕೆ ಸಿಗದಂತೆ ಎಚ್ಚರ

ವಹಿಸು!

ನಿನ್ನೊಳಗಣ ನನ್ನ ನೆನಪ ಮೊಟ್ಟೆಗಳಿಗೆ ಕಾವು ಕೊ

ಡುವುದ ನಿಲ್ಲಿಸಿಬಿಡು

ಇಲ್ಲವಾದರೆ ಮೊಟ್ಟೆಯೊಡೆದ ಜೀವಗಳು ಆತನಿಗೆ

ಸತ್ಯ ಹೇಳಿಬಿಟ್ಟಾವು!

ಹರಿದ ನನ್ನ ನೆನಪುಗಳ ನೀ ಹೊಲೆಯುವಾಗ ಆತ

ಸೂಜಿಮೊನೆಯಾಗಿ ಚುಚ್ಚುತ್ತಾನೆ.

ಈ ನೋವಲ್ಲೂ ನಾನು ನಿನ್ನ ಕೈ ಕೌದಿಯಾಗಿ

ಅರಳುತ್ತೇನೆ!



## ದಅತ ಹುಡುಗ

**- ಎಂ.ಲೋಕೇಶ್**

ಒಂಟಿ ನಾನು

ಒಬ್ಬಂಟಿ

ಕಪ್ಪು ಮೈಯ

ದಲಿತ ಹುಡುಗ

ಸುತ್ತ ಸಾಗರದ

ನಡುವೆ ನಿಂತ
ಹಸಿರು ತುಂಬಿದ
ದ್ವೀಪ ನಾನು

ಹಗಲ ಆಗಸದಲ್ಲಿ
ನಿತ್ಯ ಸುತ್ತುವ
ಬತ್ತಲೆ ಸೂರನಾಗೇ
ತೆರೆದು ಕೊಂಡವನು ನಾನು

ಸುತ್ತ ತುಂಬಿದ
ಕೆಸರ ನಡುವೆ ಕಣ್ಣು ಬಿಡುವ
ಕಮಲ ನಾನು
ನೆಲವನುತ್ತಿ ಬಿತ್ತಿ
ಬೆವರ ಸಿಡಿಸಿ
ನಂದನ ಮಾಡುವ
ರೈತನ ಮಗ ನಾನು

ಆಕಾಶ ಹೊದ್ದು
ಭೂತಾಯ ಮಡಿಲಲ್ಲಿ
ಮಲಗಿರುವ ಮಗು ನಾನು.

**ನೆಲದ ಕಾವಿಗೆ ಕರುಣ**

**- ಲಕ್ಕೂರು ಸಿ ಆನಂದ**

ನಡೆಸುತ್ತಿ ನುಡಿಗೆದರಿ ಕರುಳ ಸಂಕಟಕೆ ಚಿಪ್ಪೊಡೆದು
ಗಳಿಗೆಯ ಧಾವಂತದಲ್ಲಿ ಉರುಳುವ ದಿನದ ಹಗಲೆ
ಒಂದಷ್ಟು ಹೊತ್ತು ಸುಧಾರಿಸಿಕೊ
ಯುಗ ಉರುಳಿ ಕ್ಷಣಕ್ಕೆ ಫಲಿಸಿದ ಸ್ವಂತ ನೋವಿನ
ನೊಗದ ಬುಡಕ್ಕೆ ಸಿಕ್ಕಿ ನೆತ್ತಿ ಆಲಾಪದ ಇರುಳ ಮುಸುಗು
ಕೊಂಚ ಸರಿಸುವ ಓ ಮನವೆ ಒಂದಿಷ್ಟೆ ಇಷ್ಟು ಒತ್ತರಿಸಿಕೊ

ಅರ್ಥದಾರಿಯ ಬಯಲ ಮೇಲಣ ಗಾಳಿ
ಒತ್ತಾಗಿ ಪೇರಿಸಿದ ನೆಲದ ಕಾವಿನ ಕರುಣೆ ಎಷ್ಟು?
ಕರುಣಿಕನು ಬಂದಾಗ ಆರಿ ತಂಪಾದ ಕಾವಿನ ಸೆಳಕ ಬಲ್ಲವರಾರು?
ಒಡಲ ಉರಿಯನ್ನು ಕಂಡವರಾರು?
ಉರುಳಿದ ಏಕಾಂತ ಶಬ್ದಗಳಡಿಯಲ್ಲಿ ತೆವಳುವ ಮೌನವೆ
ಈ ಹಿಂದೆ ಕಟ್ಟಿಟ್ಟು ಹೋದ ಮಾತುಗಳ ಫಸರಲ್ಲಿ?

ಬಿಟ್ಟು ಹೋದ ಮೌನ ಕಟ್ಟುವುದೇ ಅದೇ ಮಾತು
ಬಯಕೆ ಗರ್ಭವ ಹೊತ್ತ ಅದಕೆ ತಾಗುವುದೆ ದನಿಯು?
ಅವಳ ಕಣ್ಣಳಗೆ ಕೂಡಿಕೊಂಡಾಗ
ಎದೆಯ ನೋವೊಂದು ಈ ಕ್ಷಣಕ್ಕೆ ಫಲಿಸಿತಲ್ಲವೆ
ಶುರುವಿಟ್ಟುಕೊಂಡ ಹೆಜ್ಜೆ ಕೊನೆಯ ಗೆಜ್ಜೆ ಶಬುದ
ಎಷ್ಟೊಂದು ಅರ್ಥಗಳನ್ನು ಕೊಟ್ಟು ಹೋಯಿತಲ್ಲವೆ?

ಬಗೆಬಗೆದು ಕುಡಿದ ನೆತ್ತರಿಗೆ ದಾಹ ತಣಿದಿಲ್ಲ
ಬತ್ತದ ಎದೆಗೆ ಬಂಗಾರದ ಪದಕದ ಕೊಳದಲ್ಲಿ ಮೀಯಲಾದೀತೆ?
ಮುಗಿಯದ ಹಗಲ ತೆಕ್ಕೆಯೊಳಗೆ
ಬಿದ್ದುಕೊಂಡ ಉಸಿರ ಪಳೆಯುಳಿಕೆಗಳಿಗೊಂದು
ಭಾವ ಕಲಿಸೋಣ, ಸಾಧ್ಯವಾದರೆ ಬೆಸೆಯೋಣ.

ಕನಸು ಹೆಣೆದವಳು ಕರಗಿ ಹೋದಳೆಂದು
ಮೂದಲಿಸುವುದು ಸರಿಯಲ್ಲ ಹುಡುಗ
ಭೂತ, ವರ್ತಮಾನದ ಪುಟ ತೆರೆದು ಇನ್ನಾದರು
ಉತ್ತರ ಸಿಗದೆ ಹೋದರು ಪರವಾಗಿಲ್ಲ
ಒಂದೆರಡು ಪ್ರಶ್ನೆಗಳಾದರೂ ಸಿಗಬಹುದು.



ಇಲ್ಲಿ ಎಲ್ಲರ ತುಟಿಯಂಚುಗಳು ಹರಿದು ಹೋಗಿ
ಯಾರನ್ನ ಯಾರು ಸಮಾಧಾನಿಸುವುದು?
ನಿಂತಿದ್ದ ಕನ್ನಡಿಗಳೆಲ್ಲವೂ ಹೊಡೆದು ಪುಡಿ ಪುಡಿಯಾಗಿ
ಯಾರ ಬಿಂಬವನ್ನದು ತಡಕಾಡುವುದು?
ಮುಂಬಯಲ ಮುಡಿಗೆ ಮುಡಿದ ಮಾತಿನ ಗೆಜ್ಜೆಗೆ
ಹೆಜ್ಜೆಗಳಿಲ್ಲದ ದಾರಿಯೊಂದು ಎದುರಾಗಿದೆ
ಅಲ್ಲಿ ಒನಕೆ ಭೀತಿಯ ಸದ್ದು ಇನ್ನಾದರು ಇಲ್ಲವೇ
ಸುಮ್ಮನೆ ಉರುಳುವ ದಿನದ ಹಗಲೆ
ಒಂದಷ್ಟು ಹೊತ್ತು ಸುಧಾರಿಸಿಕೊ.

## ಉಳಿ ಮೊನೆಯ ಮೋಹಕ ಹುಡುಗಿ

**- ಬಿ.ಆರ್. ಕಾರ್ಪೆಂಟರ್**

ಅವಳಲ್ಲಿ ಹರೆಯ ಒಡಮೂಡುವಾಗ
ಅವಳ ಪ್ರೇಮದ ಚಿಲುಮೆ,
ಒಣ ಕೊರಡು ಮರಗಳನ್ನು ಹದಕ್ಕೆ ತರುತ್ತದೆ
    ಆ ಮರಗಳನ್ನು ಅವಳಿಂದ ಎರವಲು ಪಡೆದು
    ಅವಳ ದುರ್ಬಲ ಕನಸುಗಳನ್ನು ವಿಸರ್ಜಿಸಿ,
    ಅವಳ ಪ್ರತಿಮೆ ಕೆತ್ತಿ ಕಡೆಯುವೆನು
ನನ್ನ ಉಳಿಗಳು,
ಸುತ್ತಿಗೆಯ ನಚ್ಚಗಿನ ಏಟುಗಳು,
ಅವಳ ಕಾಲಬೆರಳಿನಿಂದ
ಪ್ರಾರಂಭಿಸಿ, ಒಂದೊಂದಾಗಿ ಸಾಲುಗಂಬಗಳಂತೆ
ಅವಳ ನಿಲುವು ಬಿಡಿಸುತ್ತವೆ.
    ಆಯಾ ಉಳಿ ಮೊನೆಗಳ ಗಾತ್ರಕ್ಕೆ ತಕ್ಕಂತೆ ಅವಳ
    ಬಲು ಮೋಹಕ ಅಂಗಾಂಗಗಳು ರೂಪುಗೊಳ್ಳುವವು.

## ನಮ್ಮೂರಿಗೆ.........

**- ಹುಲಿಕುಂಟೆ ಮೂರ್ತಿ**

ನಮ್ಮೂರಿಗೆ

ಬೆಳಕು ಬಂತು

ಕತ್ತಲಿನಲ್ಲಿ ಕದ್ದು

ಖು(ಕು)ದ್ದು

ಶಾನುಭೋಗರ ಮಗಳ ಜೊತೆ

ಮಳೆಯ ಹಾಡು

ಹಾಡುತ್ತಿದ್ದ ನಮ್ಮೂರ

ಹೊಲೆಯರ ಹುಡುಗ

ಬೆಳಕಿನಲ್ಲಿ ಮೂಕನಾದ

ನಮ್ಮೂರಿಗೆ

ಡಾಂಬರು ಬಂತು

ಗುಡಿಸಲನ್ನು ಗುಡಿಸಿ ಹಾಕಿ

ರಾಮನ ಗುಡಿಗೆ

ರಸ್ತೆ ಮಾಡಿದಾಗ

ಅವ್ವನ ವಾಸನೆಯೂ

ಮಾಸಿ

ರಸ್ತೆಯ ಮೇಲೆ

ಕುಳಿತು

ಬಿಕ್ಕುತ್ತಾಳೆ.

ಊರ ಹೊರಗಿನ ಹುಡುಗಿ

ಹಿಂಗೆ ಬೆತ್ತಲಾಗಿ

ಡಾಂಬರಿನಲ್ಲಿ ಸುಟ್ಟುಹೋದ

ನಮ್ಮೂರಿನಲ್ಲಿ

ಬುಡವಿಲ್ಲದ

ಆಲದಮರದ

ಕೆಳಗೆ

ಉಡುದಾರವಿಲ್ಲದ

ಹುಡುಗರ ದಂಡು

ಕ್ರಿಕೆಟ್ಟು

ಆಡುತ್ತದೆ.......

## ಬಾನು ನೀವೆ ಹಂಚಿಕೊಳ್ಳಿ

**- ರಮೇಶ್ ಅರೋಲಿ**

ಎತ್ತರೆತ್ತರ ಬಾನಿನೆತ್ತರ ಗುಡ್ಡಕ ಕರಿ ಕಲ್ಲು

ಗಿಡದ ಬುಡಕ ನೆಡು ಹುಲ್ಲು

ಅಗಲ ಅಗಲ ಅದು ಮಾತಿನ ಹಗಲ

ಸುಮ್ಮನೆ ಕಿರಿ ಹಲ್ಲು

ಮುಗಿಲ ಮುಟ್ಟಿತು ಬರಿ ಸೊಲ್ಲು

ಗಿಳಿ ಬಾರವು ಗೂಬೆ ಕೂಡವು

ಉಕ್ಕಿನ ಕೊಂಬೆಯಲಿ

ಪೊಟರಿನ ಗುಟುರು ಕೇಳದಿಲ್ಲಿ

ಕಾಯಿ ಇದ್ದವು ಹಣ್ಣು ಮೇದವು

ಊರ ಬದುವಿನ್ಯಾಗ

ಯಾರೊ ನದುರು ಬಿಟ್ಟರೀಗ

ಎದೆ ಗೂಡಿನ ಮಾತು ನಿಂತವು

ಕಂಪನಿ ಭರದಾಗ

ರಂಗಿನ ಗೋಡೆ ಶಹರದಾಗ

ಕುಲ ಗೋತ್ರಕ ಬಣ್ಣ

ಬಳೆದನು

ಗ್ಲೋಬಲ್ ಗೌಡಣ್ಣ

ಜೋಪಡಿ ಜಾಗ ನೀಡಿರಣ್ಣ

ಅರೆ ಬೊಕ್ಕಣ ಅಲೆಯ ಮ್ಯಾಲೆ

ಆ ಚುಕ್ಕಿ ಚೀರುತಾವ

ಕೆಳಗೆ ಸತ್ತು ಸೇರುತಾವ

ಬಯಲು ಬಯಲಿಗೆ ಮೊಬೈಲು ಆಗಿ

ಮಾತ್ರ ಕಸಿಯುತಾವ

ಕಿವಿಯ ಮೌನ ಮುರಿಯುತಾವ

ಊರ ಊರಿಗೆ ಅದರ ತೇರಿಗೆ

ಕೊಕ್ಕರೆ ಕೊಕ್ಕೋಳಿ

ಕಬ್ಬಿಣ ಕೋಳಿಗೆ ಹೊಸ ಚಾಳಿ

ಕಲ್ಲು ಕೋಳಿಗಡ ಗಲ್ಲು ಖಾತರಿ

ಕಿವಿಯ ಮುಚ್ಚಿಕೊಳ್ಳಿ

ಬಾನು ನೀವೆ ಹಂಚಿಕೊಳ್ಳಿ

**ಯುಗಯುಗಗಳು ಕಳೆದರೂ.........**

**- ಅಪ್ಪಗೆರೆ ಐ.ಡಿ. ಲಂಕೇಶ್**

ಯುಗಯುಗಗಳು ಕಳೆದರೂ

ನಮ್ಮ ಜನ,

ಸಾರಾಯಿ ಅಂಗಡಿಯ ನಂಟಸ್ಥಿಕಿಯನ್ನು

ಇನ್ನೂ ಬಿಡಲಿಲ್ಲ.

ಹೆಂಡತಿ ಮಕ್ಕಳ ರೋಧನಕೆ

ಇನ್ನೂ ಕೊನೆಯಿಲ್ಲ.

ಸಾರಾಯಿ ಅಂಗಡಿಗೆ ದುಡ್ಡನ್ನು ಸುರಿದು

ಬಾಟ್ಲಿ ಬಾಟ್ಲಿಯಂತೆ ಸಾರಾಯಿ ಕುಡಿದು

ಮನೆಯನ್ನು ಹುಡುಕುತ ದಾರಿಯಲ್ಲಿ ಅಲೆದು,

ಬೀಳುವುದು ನಿಂತಿಲ್ಲ

ಬಿದ್ದೇಳುವುದು ನಿಂತಿಲ್ಲ

ನಮ್ಮ ಜನ ಇನ್ನೂ ಬುದ್ಧಿಯನ್ನು ಕಲಿಯಲಿಲ್ಲ.

ಸಾರಾಯಿ ಅಂಗಡಿಯೇ ದೇವಾಲಯವೆಂದು

ದೇವರ ಪೂಜೆಗೆ ಹಣವನ್ನು ತೆತ್ತು

ಸಾರಾಯಿ ತೀರ್ಥವ ಕುಡಿಯುವುದ ಬಿಡಲಿಲ್ಲ.

ಚಾಕಣ ಪ್ರಸಾದವ ತಿನ್ನುವುದ ಬಿಡಲಿಲ್ಲ

ನಮ್ಮ ಜನ ಇನ್ನೂ ಬುದ್ಧಿಯನ್ನು ಕಲಿಯಲಿಲ್ಲ.

ಹಾದೀಲಿ ಬೀದೀಲಿ ಬಿದ್ದೇಳುತ್ತಿದ್ದರೂ

ಕುಡಿಯುವುದ ಬಿಡಲಿಲ್ಲ

ಕುಡಿದು ಜಗಳವಾಡುವುದ ಬಿಡಲಿಲ್ಲ

ನಮ್ಮ ಜನ ಇನ್ನೂ ಬುದ್ದಿಯನ್ನು ಕಲಿಯಲಿಲ್ಲ.



**ರೆಕ್ಕೆ ಬಿಚ್ಚಿದ ಪ್ರಶ್ನೆಗಳು**

**- ದೊಡ್ಡಕಲ್ಲಹಳ್ಳಿ ನಾರಾಯಣಪ್ಪ**

ತೇರು ಮುಗಿದ ಮೇಲೆ

ಬೀದಿಯಲ್ಲಿ ಚೆಲ್ಲಿದ್ದ ಚೂರುಚೂರಾದ ಹೂಗಳನ್ನು

ಮಾಸಿದ ಸೀರೆಯವಳು

ಸಂತೈಸುತ್ತಿದ್ದರೂ

ಮಡಿಲು ತುಂಬಿಕೊಂಡು

ಅಂಗಿಯ ಮೇಲೆ ಅಂಗಿ

ಹತ್ತಂಗಿ ತೊಟ್ಟವನು

ಹದಿನೇಳು ವರ್ಷಗಳ ಹಿಂದೆ

ಗೆಳತಿಯ

ರಕ್ತ ಕುಡಿದ ತೇರಿನ ಚಕ್ರಗಳನ್ನು

ತಟ್ಟಿ ತಟ್ಟಿ

ನ್ಯಾಯ! ನ್ಯಾಯವೆಂದು ಕನವರಿಸುತ್ತಿದ್ದ

ಬಲೂನು ಮಾರುವವನ ಕಣ್ಣಲ್ಲಿ

ಮತ್ತೊಂದು ತೇರಿನ ಕನಸು

ಮಾರಿದಷ್ಟು ಕಳುವಾದುದೆಷ್ಟು

ಉಸಿರ ಬಿಸಿಗೆ ಸಿಡಿದಿದ್ದೆಷ್ಟು

ಉಳಿದಿದ್ದೆಷ್ಟೆಂಬ ಲೆಕ್ಕಾಚಾರ

ಭ್ರಮೆಗಳೆಲ್ಲ ಮುಗಿದು

ಖಾಲಿತನ ಮೆರೆಯುವ ಮಂಚೆ

ಕಂಚಿನ ದೇವರು ಗುಡಿಸೇರಿ

ಬೀಗ ಜಡಿಸಿಕೊಂಡ

ಕೇರಿಗೆ ಬಾರದ ತೇರನ್ನು

ನೋಡಲು ಬರುವ



ಖಾಲಿ ಕಿಸೆಯ ಹುಡುಗನ ಎದೆಯಲ್ಲಿ

ತೇರಿನ ಮೇಲೆ ಇನ್ನೂ ಮೆರೆಯುತ್ತಿದ್ದ

ಅಮ್ಮ ಪೋಣಿಸಿದ ಚೆಂಡುಮಲ್ಲಿಗೆಯ

ಹೂಗಳು

ಪ್ರಶ್ನೆಗಳಾಗಿ ರೆಕ್ಕೆಬಿಚ್ಚಿ

ಎಳೆನಾಗರಗಳಾಗಿ ಕಚ್ಚುತ್ತವೆ.

## ಯಾರ ಹಂಗಿಲ್ಲ ಬೀಸುವ ಗಾಳಿಗೆ

**- ಸತ್ಯಮಂಗಲ ಮಹಾದೇವ**

ಹೂತು ಹೋಗಿವೆ ಕಾಲುಗಳು ಹಿಂದೂ ಮಹಾಸಾಗರದ ನೀರಿನಲ್ಲಿ
ಅನಾಥವಾಗಿದೆ ಮನಸ್ಸು ರಾಜಾಸ್ಥಾನದ ಮರುಭೂಮಿಯಲ್ಲಿ
ತಪ್ಪಿಸಿಕೊಂಡು ಅಲೆಯುತ್ತೆ ತಲೆ ಬಿಸಿಲ ಬೇಟೆಗೆ

ಉತ್ತರದ ಮೈದಾನದಲ್ಲಿ ಬಡಿದುಕೊಳ್ಳುತ್ತಿದೆ ಹೃದಯ
ಅಲ್ಲಾಹುವಿಗೂ ಕೇಳಿಸಲಿ, ಅರ್ಥವಾಗಲಿ ರಾಮನಿಗೂ
ಇವರೆಲ್ಲಾ ಹುಟ್ಟುವ ಮೊದಲೇ ಹುಟ್ಟಿದ ತನಗೆ
ನ್ಯಾಯಸಿಗಬಹುದೇನೋ ಅಂತ.

ಕನಸುಗಳ ನೆಡುತ್ತಿದ್ದಾಳೆ ತಿಮ್ಮಕ್ಕ
ಇಬ್ಬನಿಯ ಬಯಲಲ್ಲಿ,
ಶಹನಾಯಿ ಊದುತ್ತಿದ್ದಾರೆ ಬಿಸ್ಮಿಲ್ಲಾ ಖಾನ್ ಅಜ್ಜ
ಹಂಗಿಲ್ಲದ ಅಂಗಿ ತೊಡಲಿ ಮಕ್ಕಳು ಅಂತ.

ರೂಪಾಯಿಗೆ ಬಂದೂಕು ಸಿಗುತ್ತದೆ
ಒಬಾಮಾನ ಚಿಲ್ಲರೆ ಅಂಗಡಿಯಲ್ಲಿ
ಮುಕ್ತವಾಗಿದೆ ತೊಟ್ಟಿಲಿಗೂ ಈಗ ಮಾರುಕಟ್ಟೆ

ಸೇರಿಗೊಂದು ಸೇರು ಉಚಿತ ಹಜಾರೆ ಅಣ್ಣನ ಮಾತುಗಳು

ಗಾಂಧೀ ಕಟ್ಟಿಸಿದ ನಮ್ಮೂರ ಸಂತೆಯಲ್ಲಿ

ನೈಲ್ ನದಿಯ ಕಣಿವೆಯಲ್ಲಿ ಹೊನ್ನು ಸಿಕ್ಕಿದ ಸುದ್ದಿಕೇಳಿ

ಬಗೆಯುತ್ತಿದ್ದಾರೆ, ಕೋಲಾರದ ಬಿರುಬಿಸಿಲ

ಬಂಡಿ ಅನ್ನ ಉಂಡ ಬಕಾಸುರರು

ಚಕ್ರ ಹರಿಸಿ ಸಣಕಲು ಭೀಮರ ತಲೆಯ ಮೇಲೆ.

ಯಾರ ಹಂಗಿಲ್ಲ ಬೀಸುವ ಗಾಳಿಗೆ

ಎರಡು ಬಗೆಯುವುದಿಲ್ಲ ಯಾರಿಗೂ

ಮುಕ್ತಸಂಚಾರ, ಎಲ್ಲೆಗಳ, ಗಡಿಗಳ, ಮೀರಿದ ಬದುಕು

ಗರಿಗೆದರುತ್ತಿದೆ ಆಕಾರವಾಗಿ ಎಲ್ಲರೆದೆಗಳಲ್ಲಿ.



ಮೂಳೆ ಇಲ್ಲದ ನಾಲಿಗೆ ಬಡಿದುಕೊಳ್ಳುತ್ತದೆ

ಆಂಬ್ಯುಲೆನ್ಸಿನ ಹಾಗೆ

ಬೇಗ ಹೋಗಬೇಕೆನ್ನುವ ಆತುರದಲ್ಲಿ

ಪರಿಚಯವಿಲ್ಲದ ಎಲ್ಲಿಗೋ

ಗೊತ್ತಿಲ್ಲದ ತನ್ನೊಳಗೋ

ಚಾಲಕನಿಲ್ಲದ ಚಕ್ರಗಳ ಮೇಲೆ

ಹರಿದಂತೆ ನಮ್ಮೂರ ದಾರಿ

**ವೇಶ್ಯ**

**- ಗುರುಪ್ರಸಾದ್ ಕಂಟಲಗೆರೆ**

ನಾನೊಂದು ಬೇವರ್ಸಿ ಬಡಕಲು ಭೂಮಿ

ಬಿತ್ತಿ ಬೆಳೆಯಲಾರದ ಕಾಲುದಾರಿ

ಯಾರದೋ ತೆವಲಿಗೆ

ಜಲ್ಲಿ ಹಾಕಿ ಗುಂಡಿ ಮುಚ್ಚಿ

ಮಣ್ಣು ಸುರಿದು ರಸ್ತೆ ಮಾಡಿದರು

ಮೈ ನೆರೆದ ನನಗೆ

ಡಾಂಬರು ಬಳಿದು ಸಿಂಗರಿಸಿದರು

ಆಗಿನ್ನು ಹೊಸ ರಸ್ತೆ

ನನ್ನ ಮೈ ಮೇಲೆ ಓಡಾಡಲು ಕಾಯುತ್ತಿದ್ದರು

ಆಸೆಬುರುಕರು

ಮೊದ ಮೊದಲು ನಾಜೂಕಾಗಿ

ಸವಾರಿ ಮಾಡುತ್ತಿದ್ದರು

ಸುರಂಗ ಸಂಭ್ರಮ ಕಾಡಿಚ್ಚಿನಂತಬ್ಬಿ

ಟ್ರಾಫೀಕು ಜಾಮು ಮಾಡುತ್ತಿದ್ದವು

ಥರಾವರಿ ಗಾಡಿಗಳು

ಹಳೆಯ ಸವೆದ ಟೈರು

ರಭಸದ ಹೊಸ ಟೈರು

ಕೊನೆಗೆ ಬುಲ್ಡೋಜಾರುಗಳೂ ಜಾರಿ

ಬೇಗನೆ ನನ್ನ ಮೈಯ್ಯು

ಡಾಂಬರು ಕಿತ್ತು ಗುಂಡಿ ಬಿದ್ದು

ಹಾಳಾಗಿ ಹೋಯಿತು

ಪ್ರಾಣಾಪಾಯವೆಂದು

ಓಡಾಡುವುದು ಬಿಟ್ಟರು ಧೂಳು ಗೋಳು ಎಂದು

ಮೂಗು ಮುಚ್ಚಿದರು ಓಡಾಡಿಕೊಂಡಿದ್ದ ಸಭ್ಯಸ್ತರು



ಇತ್ತೀಚೆಗೆ

ಗೂಟ ನೆಟ್ಟು

ಬಣ್ಣ ಬಳಿದು

ನಂಬರ್ ಕೊಟ್ಟು

ನನ್ನ ಹೆದ್ದಾರಿ ಮಾಡಿಬಿಟ್ಟರು

ಈಗ ನಾನು ಉಬ್ಬು ತಬ್ಬುಗಳಿಲ್ಲದ

ರಾಷ್ಟ್ರೀಯ ಹೆದ್ದಾರಿ

ಅನೇಕ ದಾರಿಗಳು ಕವಲೊಡೆದಿವೆ

ಟೂ ವೀಲು ಟೆನ್ ವೀಲು

ಎಲ್ಲ ಸಂಚರಿಸಿ ಟ್ಯಾಕ್ಸ್ ಕೊಟ್ಟು

## ನನ್ನ ಬುಡದ ಕತ್ತಲು

**ಅಂಜಲಿ ಬೆಳಗಲ್**

ನಾನು ನಂದಿ ಹೋಗುತ್ತಿದ್ದೇನೆ ಎಂದು ನನಗೆ ನೋವಿಲ್ಲ
ನನ್ನಿಂದ ನನ್ನ ಜನಗಳಿಗೆ ಒಂದಿಷ್ಟು ಪ್ರಾಮಾಣಿಕ ಬೆಳಕು ನೀಡಿದ್ದೇನೆ

ನಾನು ಸುಟ್ಟು ಕರಕಲಾಗುತ್ತಿದ್ದೇನೆ ಎಂದು ನನಗೆ ಕೊರಗು ಇಲ್ಲ
ನನ್ನಿಂದ ಒಂದಿಷ್ಟು ನನ್ನ ಜನಗಳ ಕತ್ತಲನ್ನು ಬಯಲು ಮಾಡಿದ್ದೇನೆ.

ನಾನು ಅರಮನೆಯ ಸಾಲು ಸಾಲು ಬಂಗಾರದ ತೋಪಿನಲ್ಲಿ ಮಲಗುತ್ತಿದ್ದೇನೆ ಎಂದು ಗರ್ವವಿಲ್ಲ
ನನ್ನ ಜನಗಳ ಅದೇಷ್ಟೋ ಜೋಪಡಿಗಳಲ್ಲಿ ಶಾಂತವಾಗಿ ಮಣ್ಣಿನ ಪ್ರಣತಿಯಿಂದ
ಬೆಳಗುತ್ತಿದ್ದೇನೆ.

ನಾನು ಅದೆಷ್ಟೋ ಬಾರಿ ನೊಂದರು,
ಕೊಂದರು, ಕರಕಲಾಗಿ ನನ್ನನ್ನು ನಾನು ಸುಟ್ಟುಕೊಂಡರು, ಎಣ್ಣೆ ಹಿಂಗಿ ಬೆಳಕ ಚೆಲ್ಲಿದರು
ನನ್ನ ಬುಡದಲ್ಲಿ ಮಾತ್ರ ಇನ್ನು ಕತ್ತಲು ಬೆತ್ತಲಾಗಿಯೆ ಮಲಗಿದೆ,

ನಾನು ಅದ್ಯಾವುದೆ ಜಾತಿಯ ಮಹಲು ಮಂದಿರ ಮಸಿದಿ ಚರ್ಚ್,
ಗುಡಿ ಗುಂಡಾರ ಗುಡಿಸಲು ಜೋಪಡಿಯಲ್ಲಿ ಬೆಳಗಿದರು, ನನಗ್ಯಾವ ಜಾತಿಯಿಲ್ಲ,
ಆದರೆ ನನ್ನ ಬೆಳಕಲ್ಲಿ ಬದುಕೊ ಮನುಷ್ಯನ ಅಂಗಳದಲ್ಲಿ ಜಾತಿ ಅಡ್ಡಲಾಗಿ ಬೆಳದಿದೆ,

## ಕೇಳೆ ಸಖಿ, ಕೇಳು

**- ಬೊಮ್ಮೈಕಲ್ಲು ವೆಂಕಟೇಶ**

ಕೇಳೆ ಸಖಿ, ಕೇಳು

ನಿನ್ನ ಮೆಚ್ಚಿಸಲಾಗದ

ನನ್ನ ಕವಿತೆಗೆ

ಏನೆಂದು ಹೆಸರಿಡಲಿ,

ಕಣ್ಣ ಕೋರೈಸುವ

ನಿನ್ನ ಸೌಂದರ್ಯಕ್ಕೆ

ಸ್ಥಾನ ನೀಡದ

ನನ್ನ ಕವಿತೆಗೆ

ಕೇಳೆ ಸಖಿ, ಕೇಳು!

ಎಂತಹ ಶೀರ್ಷಿಕೆ ಕೊಡಲಿ

ಒಲವಿನವಳಿಗೆ ಎಂದೋ

ಅಥವಾ

ಗೆಲ್ಲಲಾಗದ ಗೆಳತಿ ಎಂದೋ?

ನಿನ್ನ ದೇಹಸಿರಿಯ

ಪರಕಾಯದ ಪದ್ಯ

ಗೀಚುತ್ತಾ ಗೀಚುತ್ತಾ

ವರ್ಣಿಸುವಾಗ

ಅರ್ಧ ಹಗಲಲ್ಲೇ

ಸ್ವಾತಂತ್ರ್ಯ ಕಳೆದುಕೊಂಡು

ಕಾಮಾಂಧರ ದಾಹಕ್ಕೆ

ಹರಿದು ಹಂಚಿಹೋದ

ನೂರಾರು ಬಾಲೆಯರ

ಹರಿದ ಮಾಂಸದ

ತುಂಡುಗಳು

ನನ್ನ ಕವಿತೆಯ ತುಂಬ

ಅಕ್ಷರಗಳಾಗಿ,

ನನ್ನ ಲೇಖನಿಯಿಂದ

ಒಂದೊಂದೇ

ಉದುರುತ್ತಿವೆ.



ಕವಿತೆಯುದ್ದಕ್ಕೂ

ಗದ್ದುಗೆಯ

ಕೈಗಳ ಉರುಗೋಲಿನಿಂದ

ನೆಣ ತುಂಬಿದ ಜನ

ತರಿದ ಗಾಯಗಳಿಂದ

ಸುರಿದಿದೆ ರಕ್ತ

ಧಾರಾಕಾರ.

ಈ ಸಮಷ್ಟಿಯ

ತುಂಬು ಗರ್ಭಕ್ಕೆ

ಬರ್ಜಿಯ ನಾಟಿ,

ಕೈಕಾಲು, ರುಂಡಮುಂಡಗಳ

ತೊಡೆ, ನಿತಂಬಗಳು

ತುಂಡು ತುಂಡಾಗಿ

ನನ್ನ ಕವಿತೆಯ

ಉದ್ದಗಲಕ್ಕೂ ಚೆಲ್ಲಾಪಿಲ್ಲಿ

ಹೇಗೆ ಹೊಗಳಲಿ

ನಿನ್ನ ದೇಹ ಸಿರಿಯ

ಕ್ಷಮಿಸು ನನ್ನ

ನನ್ನ ಕವಿತೆಯಿಂದ

ಮೆಚ್ಚಿಸಲಾಗಲಿಲ್ಲ ನಿನ್ನ.....



## ಹೆಗಲ ಮೇಲೆ ಕ್ಷಣ ಹೊತ್ತಿನ ದ್ವೇಷದ ಸವಾಲಿ

**- ಅನಿಕೇತನ ಟಿ.ಎಸ್.**

ದ್ವೇಷವೆಂಬ ಮಂತ್ರವ ಪಟಿಸುತ್ತಾ ಮಾಯೆಯೆಂಬ

ಮೂರ್ಖ ಕುದುರೆಯನ್ನೇರಿ,

ಸವಾರಿ ಹೊಡೆಯುತ್ತ, ಹೊರಟಿದ ದೇಹ,

ದುರಹಂಕಾರದ ದರ್ಪದಲ್ಲಿ ದಾಂದಲೇ ಮಾಡುವ ದಿಕ್ಕಿನಲ್ಲಿ

ಸುತ್ತಲು ರಣ ರಣ ಬಿಸಿಲು ಕೆಂಪು ಕೆಂಪನೆ ಕಾದು

ಬಿರುಕುಬಿಟ್ಟ ಬರಡು ಸ್ಥಲ

ಧಗೆ ಧಗೆಯೊಳಗೆ ಕಾಯಿಸಿ ಕಾದು ಕುಕ್ಕುವ ಹಾಗೆ

ಅರ್ಥವಾಗಲೇ ಇಲ್ಲ

ಅನರ್ಥದ ಮಾತು ದ್ವೇಷದಿಂದಲೆ ಇಟ್ಟ

ದದ್ದರಿಸುವ ಧಾತು

ಒರಟು ಒರಟಾಕ ನೆಲದಲ್ಲಿ ಹೋದಂತೆಲ್ಲಾ ಹೊಲಸು

ದ್ವೇಷದ ಕಣ್ಣಲ್ಲಿ ಕಾದು ಕೆಂಪಾದ ಕಿಡಿ

ಹತ್ತಿಸಲೆತ್ನಿಸಿದರೆ?

ನಯ ನಾಜೂಕಿನ ನಡೆಗೆಯಲ್ಲು, ನಡುಕ ಯಕಶ್ಚಿತ್

ಕಡ್ಡಿ ಗೀರಿದರೆ ಧಗಧಗ ಉರಿಯುವ ಹೂಕೇತನ

ಜಿಗುಟಿ ತಾನೇ ಚೇರುವ ತಗಡು ತಲೆಹರಟೆ

ದ್ವೇಷಕ್ಕೆ ದ್ವೇಷವಾಗಿ ಬಿಸಿಲಿನ ಬಿರುಸು ಬೇಗೆಗೆ

ಕೆಂಪಾದ ಕಿಡಿತಾಗಿ ಕುಸಿದು ಬಿದ್ದು

ಕ್ಷಣಾರ್ಧದಲ್ಲಿಯೇ ಬೆಂದು ಭಸ್ಮವಾಯಿತು

ದ್ವೇಷ ಕಮರಿ ಕರುಕಲಾಗಿ ಕೆಳಗೆ ಬಿತ್ತು

ಕಿಸುರು ಕುದುರೆ

ತಿರುತಿರುಗಿ ಹಿಂತಿರುಗಿದರೆ ಕ್ಷಣಿಕ ದ್ವೇಷ

ಪ್ರೀತಿಯೊಳಗೆ ದ್ವೇಷ ಮುಳಗಿ

ದ್ವೇಷದೊಳಗೆ ಪ್ರೀತಿಯ ಕಲಕಿ

ಕುಲುಕಿ ಅರಿಯದೆ

ಹರಯದ ಪ್ರಾಯದಲ್ಲಿ ಪಾಪ ಪ್ರಜ್ಞೆಯ ಪ್ರಾಯಶ್ಚಿತ

## ನೆಡದಿರು ಶಿಲುಬೆಯನು ನನ್ನ ಗೋಲಿಯ ಮೇಲೆ

**- ಬಸವರಾಜ ಹೃತ್ತಾರೆ**

೧

ಸಖಿ, ನೀನು ನಡೆದುಬಿಟ್ಟೆ ಈವ್‌ಳಂತೆ
ಜ್ಞಾನದ ಸೇಬಿನಂಥ ಒಂದು ಮುತ್ತು ತಟಿಯ ಮೇಲೆ ಒತ್ತಿ
ಆದರೆ ನಾನು ಪಾಪಿಷ್ಟ ಆದಾಮನಾದೆ
ನಾನು ಬೆಳಕಿನತ್ತ ಮುಖಮಾಡಿದರೆ
ಕತ್ತಲೆ ನನ್ನ ಬೆನ್ನು ಚುಚ್ಚುವ ಚೂರಿಯಾಗುತ್ತದೆ
ಸೂಡಾನಿನಲ್ಲೋ ಇಥಿಯೋಪಿಯಾದಲ್ಲೋ ತಾಂಜಾನಿಯಾದಲ್ಲೋ
ಕೂಗುವ ಹಸಿದ ಹೊಟ್ಟೆಯ ಕೂಗು
ದನಿಯಾಗುತ್ತದೆ ನನ್ನ ಗಂಟಲಿಗೆ
ನಾನೊಬ್ಬ ಕಂದುಬಣ್ಣದ ನೀಗೋ ನನ್ನ ದೇಶದಲ್ಲಿ
ಕ್ಯಾಮರಾದ ನೆಗೆಟಿವ್ ಫಿಲ್ಡ್‌ನಂತೆ ನನ್ನ ಬಣ್ಣಗೇಡಿ ಕನಸುಗಳು
ಬೀದಿ ಚೌಕಗಳಲ್ಲಿ ತಟ್ಟೆ ಬಡಿಯುತ್ತ
ಒದರುತ್ತವೆ ಅನ್ನ, ಅನ್ನ ಎಂದು

೨

ಹಸಿವಿನ ಹಾವು ಸಾಕಿಕೊಂಡ ನಾನು
ಅದು ಕಾರುವ ವಿಷವನ್ನು ಯಾರಿಗೆ ಹಂಚಲಿ ?
ಬೊಗಸೆ ಒಡ್ಡಿ ಜಗದ ಆಳ ಅಗಲಗಳ ಬಗೆದು ಹಾಕಿದರೂ
ಹಿಡಿಹೊಟ್ಟೆ ತುಂಬುವ ಔಷಧಿ ಎಲ್ಲೂ ಸಿಗಲಿಲ್ಲ
ಈಗೀಗ ಸೋಮಾರಿಯಾದಲ್ಲಿ ಅನ್ನದ ಹಿಡಿಕೆಗೆ ಗನ್ನು ಸಿಕ್ಕಿವೆ

ಕೇವಲ ಹೊಟ್ಟೆಯನ್ನಲ್ಲ ಹೊಟ್ಟೆಯೊಳಗಿನ

ಲಾಡಿ ಹುಳುಗಳನ್ನೂ ಸಾಕಬೇಕಿದೆ ನಾನು

ಲಾವಾರಸದಂತೆ ಚಿಮ್ಮಿಬರುವ ಖಾಲಿಹೊಟ್ಟೆಯ ಡೇಗುಗಳನ್ನೂ

ಒಡ್ಡು ಮುರಿದು ಹಿಡಿಯಬೇಕಿದೆ ಮುಲುಗಾಟವನ್ನೂ

ಸಖೀ.



ನನ್ನ ಪಾಲಿನ ಶತ್ರುವೆಂದರೆ

ನನ್ನ ಹಸಿವನ್ನು ನಿರಾಕರಿಸುವವನು

ಏನು ಹೇಳಲಿ ಅವನ ರೂಪಗಳ ಬಗೆ?

ದಲಿತ ಸಾಹಿತ್ಯ ಸಂಪುಟ - ಕಾವ್ಯ

ಅವನು ಬೆರನೆ ತೂರಿಬರುವ ಬಾಣ, ಸದ್ದಿಲ್ಲದೆ ನೆಡುವ ಕಾಡತೂಸು

ಅಥವ ಮಮತೆಯ ಅಮ್ಮನ ಹೆಗಲು

ಇಷ್ಟುಮಾತ್ರ ಹೇಳಬಲ್ಲೆ

ಓಟಿಗೆ ನೋಟಿಗೆ ತುಪಾಕಿಗಳಿಗೆ

ದೇಶದ ಗಡಿಗಳಿರುತ್ತವೆ ಹಸಿವಿನ ಸಾಮ್ರಾಜ್ಯಕ್ಕಲ್ಲ

ನನ್ನ ಭಾರತ ನನ್ನ ಇತಿಯೋಪಿಯಾ ನನ್ನ ಸೂಡಾನ್ ನನ್ನ ಕಾಂಗೋ

ಎಲ್ಲವೂ ಹಸಿದ ಊರಿನ ಗಲ್ಲಿಗಳು

೨

ನನ್ನ ಹಗಲೆಂದರೆ,

ತೇಪೆ ಹಾಕಿದ ಕೌದಿಯ ರಗಟೆ

ರಾತ್ರಿ ಆಕಾಶಗಳೆಂದರೆ

ಹಸಿದು ಸತ್ತವರ ಕಣ್ಣುಗುಡ್ಡೆ ಹುರಿಯುವ ಕಡಾಯಿ

ಸಖಿ, ನನ್ನ ಭಯ

ನೀನು ಕೊಟ್ಟ ಸೇಬಿನ ಮುತ್ತು, ಈ ಹಾಳು ಹಸಿವು

ಎದೆಗೂಡಿಗೆ ಮುಟ್ಟಿ ನನ್ನ ಗುಂಡಿಗೆ ಬೆಂಕಿಯಲಿ ಅರೆಬೆಂದು

ಮುದುಡಿದ ಕೆಂಗುಲಾಬಿಯ ಮೊಗ್ಗಾಗುವುದೋ

ಒಂದಾನೊಂದು ದಿನ ನಾನು ಸತ್ತರೆ

ನೆಡದಿರು ನನ್ನ ಗೋರಿಯ ಮೇಲೆ ಶಿಲುಬೆಯನು

ಬದಲಿಗೆ ಒಂದು ಖಾಲಿ ಗಂಗಾಳವನಿಡು

ಪುನರುತ್ಥಾನದ ಪುಣ್ಯಕ್ಕಿಂತ ಹಸಿದವರ ಗುಂಪಿನ

ದೆವ್ವವಾಗುವುದು ಖುಷಿ ನನಗೆ



**ಪಾರ್ಥೆನಿಯಂ ಗಿಡಗಳು**

**ಎನ್ ಕೆ ಇಬ್ಬನಿ**

ಭೂತ ಭವಿಷತ್ತು ವರ್ತಮಾನಗಳ

ಕಾಲಘಟ್ಟಗಳಲ್ಲಿ ಕೂಡ ನಾವು

ನಮ್ಮೊಳಗೆ ಅಳುತ್ತಿದ್ದೇವೆ

ಅದು ಯಾಕೆ? ಎಂಬುದರ ಕುರಿತು

ನನ್ನ ನಾನು ಪ್ರಶ್ನಿಸಿಕೊಂಡರೆ

ಉತ್ತರಗಳೆಲ್ಲವು ಊರ ಆಚೆಯ ಮಸಣದಲ್ಲಿ

ತಿಕ್ಕಲು ತಿಕ್ಕಲಾಗಿ ನಗುತ್ತಿದೆ

ನಿಂತ ನೆಲವು ಕೂಡ ಒಂದೊಂದು ಸಲ
ನಮ್ಮನ್ನ ನೆಲಕ್ಕುರುಳಿ ಬಿಡುತ್ತದೆ
ನಿಂತ ನೆಲಕ್ಕೂ ಜಾತಿಯ ನೆರಳು
ಬೀಳಬಾರದೇನೋ

ಬಹುಷಃ ಬುದ್ಧ ಬಸವ ಅಂಬೇಡ್ಕರ್
ಅವರನ್ನು ಈ ನೆಲ ಹೀಗೆ ಹಿಂಸಿಸಿ
ಕ್ಷಣ ಕ್ಷಣವು ಅಟ್ಟಾಡಿಸಿರಬಹುದು
ಈ ನೆಲದ ಮನು ಜ್ವಾಲೆಗಳು

ಹೌದು ಈ ನೆಲಕ್ಕೆ ಯಾಕೆ
ಇಷ್ಟೊಂದು ಕ್ರೌರ್ಯದ ರೂಪ
ಅವರ ಕೊಲ್ಲಲು ಹೋಗಿದ್ದು
ತಾಯಿ ಗರ್ಭದ ಹಸಿ ಮಾಮಸದ ಪಿಂಡವನಲ್ಲ

ಅಸ್ಪೃಶ್ಯತೆ ಅನಾಗರಿಕತೆಯನ್ನ ಕೊಂದು
ಸಮಾನತೆಯ ಬೀಜ ಬಿತ್ತಲು ಹೊರಟವರು
ಈಗ ಬಿತ್ತನೆ ಬೀಜವು ಕೂಡ ಅಳುತ್ತಿವೆ.
ಅಕ್ರಮವಾಗಿ ಬೆಳೆಯುತ್ತಿರುವ
ಪಾರ್ಥೇನಿಯಂ ಗಿಡಗಳ ಕಂಡು



## **ದಲಿತರೂ ನಾವು ದಲಿತರೊ**

**- ಡಾ. ನಂಜುಂಡಸ್ವಾಮಿ ಹರದನಹಳ್ಳಿ**

ಹುಟ್ಟಿದವು ದಲಿತ ಕಮಲಗಳು

ಅಗ್ನಿ ಕುಂಡದ ಬೆಂಕಿ ಜ್ವಾಲೆಯಲಿ

ಹರಿಯಿತು ರಕ್ತ ಮಾಂಸ

ಹಳ ನಡುವಿನ ಹೊಸ ಶೀಲದಲ್ಲಿ

ಹಿಡಿದ ತಮಟೆ ಹೊಮ್ಮಿದ ಧ್ವನಿಗೆ

ಕೇಕೆ ಹಾಕಿತು ಮಲಗಿದ ಕಂದಮ್ಮ

ಹಸಿದ ಹೊಟ್ಟೆಗೆ ತುಳಿದ ಮನುಧರ್ಮಕ

ಜೀವನವೆ ಜೀವವಾಗಿ ಬಡಿದೆದ್ದಿತು

ಸಾವಿರಾರು ವರ್ಷದ ದುಃಖದ ಗೋಪುರ

ಜೀತದ ಕೈಯಲ್ಲಿ ಜ್ಞಾನದ ಜ್ಯೋತಿ

ಅಂಧಕಾರದ ಬುದ್ಧಿಗೆ ತಮಟೆ

ಬೆಳದಿಂಗಳೆ ಮುಕ್ಕಿದವು ಹಸಿದ ಹೊಟ್ಟೆ

ಸುಖದ ಗಗನ-ಭೂಮಿಯಲ್ಲಿ

ಗುಡುಗು-ಮಿಂಚು-ಮಳೆಯಾದರು

ಉರಿವ ಧರೆಯಲ್ಲಿ ಧರೆಗೆ ದೊಡ್ಡವರಾದರು

ಹೂತು ಹೋದ ಅಸ್ಪುಶ್ಯರ ರಥವ

ಮುಟ್ಟಿ-ಅಪ್ಪಿ-ಎಳೆದರು ಬಸವಾದಿ ಶರಣರು

ಕಾಗೆ-ಗೂಬೆ-ನವಿಲುಗಳ ನರ್ತನದ ಮರದಲ್ಲಿ

ಯಾವ ಪಕ್ಷಿ ಯಾವ ಹಣ್ಣು? ಯಾವ ಜಾತಿ?

ಪಂಚಭೂತಗಳಿಗಿಲ್ಲದ ಧರ್ಮಜಾತಿ

ಮನುಷ್ಯ ಮನುಷ್ಯನಲ್ಲಿ! ಜಾತಿ

ಧರ್ಮ ಜಾತಿಯೇ ನಿನಗೆ ನೀನೆ ಉತ್ತರ

ಉಳುವ ಭೂಮಿಯಲ್ಲಿ ರೈತನ ಕಾಯಕಯೋಗಿ

ಹೂಳುವ ಭೂಮಿಯಲ್ಲಿ ಮಣ್ಣೆಜಾತಿ

ಮಹಾತ್ಮರು ಜನಿಸಿದ ಪುಣ್ಯಭೂಮಿಯಲ್ಲಿ

ಬಂದವರೆಲ್ಲಾ? ಬೀದಿ-ಕೇರಿ ಮಾಡಿದವರೆ?

ಬಟ್ಟೆ ನಾಮದಲಿ ಬದುಕಿ ಸತ್ತರು

ಕಟ್ಟಿದರು ಸ್ಮಾರಕ ಹರಿಯಿತು ರಕ್ತ

ಸೇರಬೇಕೆಂಬ ಹಂಬಲ ನನ್ನಲ್ಲಿ ನಿನ್ನಲ್ಲಿ

ದಲಿತರೂ ನಾವು ದಲಿತರೊ ನೀವು; ದಲಿತರೆ?



## ನೀರ ತೇರು

**ಎಸ್.ಕೆ.ಮಂಜುನಾಥ್**

೧

ನೀರಮನೆ ಕತ್ತಲಲಿ

ನೆರಳ ಹುಡುಕಾಡಿ

ಊರ ಉಸಿರಿಗೆ ಸಿಕ್ಕ

ಕಣ್ಣೀರ ಬಗೆಮಾಡಿ

ಎದೆಗನ್ನಡಿಯ ಕುಣಿವಬಿಂಬದಲಿ ಹುಡುಕುವಾಗ

ನವಿಲ ಕಣ್ಣಿಗೆ ಕೊಳಿಯಿಟ್ಟು

ಕನಸ ಸುಟ್ಟವರಾರು

ನವಿಲಗರಿಗೆ ಕೆಂಬಣ್ಣ

ಹೊಸ್ತಿಲು ಉರಿದು ಉಗುಳುತಿದೆ ಊರು

೨

ಮುದುಕುತೊರೆ ಸಂಧಿ

ಗೊಂದಿಗೂ ಮಲೆತನೀರು

ರೂಪಕ್ಕೆ ನಿಲುಕದ ಗುಟ್ಟುಗಳ

ಮುಟ್ಟಿದವರಾರು

ಮುಟ್ಟದ ಮನೆ ಕೋಣೆಯ

ತಳಕೆ ಒಳನುಗ್ಗಿ

ನೀರದೀವಿಗೆ ಹಿಡಿದು ನೋಡಿದಾಗ

ನೀರಮನೆ ಕೋಣೆಯಲಿ

ಅವಿತಿರುವ ನೀರೆ

ನೀರನೆರಿಗೆಯ ಮಡುಚಿ

ಉಡಿಸುತಿರುವಾಗ ನೀರಸೀರೆ

ಎದೆಗಿಳಿದಳು ನೀರನವಿಲಾಗಿ

ಪಿಸುಗುಟ್ಟಳು ಎದೆಯ ದನಿಯಾಗ

ಹಾಡಿದಳು ತಳಮುಟ್ಟಿ ಎದೆಯ ಪದವ

೨

ಅವಳ ಮೈಯಲಿ ನಾ ಬೆವರಾಗಿ

ನನ್ನ ಕಣ್ಣಲಿ ಅವಳು ನದಿಯಾಗಿ



ಕೊಲುದಾಣಗಳ ದಾಟಿ

ತಂಗುದಾಣಗಳ ಹುಡುಕಿ

ಮುಟ್ಟದ ಜಾಗಗಳ ತಳಮಟ್ಟ ಮುಟಿ

ನದಿಜಾಡ ನೀರ್ಗಾಲು

ತಳದ ತಳಕೆ ಹರಿವಾಗ

ಜಲಮಂಟಪದಲಿ

ಒಲೆಹೂಡಿ ನಲಿವಾಗ

ನೀರ ತೇರಾಗಿ ಮೆರವಣಿಗೆ ಹೊರಟ ಬೆವರು

೪

ಬಾಯಾರಿದ ತುಟಿಗೆ

ಹನಿಯೊಡೆದ ಬೆವರ ಸಾಲು

"ಅವ್ವಾ, ಅವ್ವಣಿ, ಅಪ್ಪಾ.. ಅಪ್ಪಣ್ಣ, ದಮ್ಮಯ್ಯ, ಬೇಡಯ್ಯ..

ಕೈಮುಗಿವೆ ಜೀವಭಿಕ್ಷೆಯ ಒಮ್ಮೆ ಕರುಣಿಸಯ್ಯ.

ಈ ಜಗದ ಸಹವಾಸ ಸಾಕಯ್ಯ, ಆಹಾ..."

ಚೀರಿತು ಜೀವ ಉಸಿರ ಬಿಡಲು

ನಂದಿಸುವ ನೀರೇ ಸುಡುವಾಗ

ಇರುವೆ ಬಾಯಲ್ಲಿ ಅನೆ ಕರಗುವಾಗ

ಬಾ ಒಲವೇ ಮಳೆಯಾಗಿ

ನೀರಮೊಲೆ ಹೂಡಿ ನೆಲದ ಬಾಯ್

ಬಿರಿದ ಎದೆಯ ಬಿರುಕು ಕುದಿವ ಕುಡಿಗಳ

ಕಣ್ಣಕವಿತೆಯಾಗಿ

ಮಣ್ಣ ಹಣತೆಯಾಗಿ

ಸುಡದಿರಲಿ ನಿಮ್ಮ ನವಿರುಪಾದವ ಕಣ್ಣೀರು

೫

ಬಯಲನಾಯಿ ನೆತ್ತರವ ನೆಕ್ಕಿ

ಕರಿನೆರಳ ಮೈಯಿಂದ ಮಂಜು ತೊಟ್ಟಿಕ್ಕಿ

ನೀರಾವಿ ಕಿರಣಗಳ ಬಿಳಲನೇರಿ

ಸೂರ್ಯನಿಗೆ ಮುತ್ತಿಕ್ಕಿ ಸುಟ್ಟಾಯಿತೊ

ರಕ್ತ ಮುಕ್ಕಳಿಸುತ ಬಂದ ಸೂರ್ಯ

ತಣ್ಣಗೆ ಸುಡುತ್ತಿದ್ದ

ಗೊತ್ತಾಗಲಿಲ್ಲ.



**ಬೆಂಕಿ ಸುಡುವ ಜಲ**

**- ಕುಮಾರ ಇಂದ್ರಬೆಟ್ಟ**

ನಾನು ಸುಡುವ ಬೆಂಕಿಯ ಮಳೆ

ನಿಮ್ಮನು ಸುಡಲಾರೆ

ನನ್ನಂತೆ ನೀವೂ ಒಂದು ಜೀವ ಆಗ;

ಶಂಭೂಕನ ಶಿರಚ್ಛೇದ ಮಾಡಿದಾಗ

ಸುಡುವ ಕೆಂಡದ ಕಡಲಾದೆ

ಏಕಲವ್ಯನ ಹೆಬ್ಬೆರಳು ಕಡಿದಾಗ

ಉರಿವ ಬೆಂಕಿಯ ಮರವಾದೆ

ಅಸ್ಪೃಶ್ಯನೆಂದು ಅಪಮಾನಿಸಿದಾಗ

ಬೆಂಕಿ ಉರಿವ ಶಬ್ದವಾದೆ

ಈಗ;

ಸತ್ತ ಸಾಸಿವೆ ಸಿಪ್ಪೆ ಸುಲಿದಾಗ ನನ್ನ ಬೆನ್ನ ಮೇಲೆ

ಜೆರುಸಲೇಮಿನ ಚಿತ್ರ ಬಿಡಿಸುತ್ತಾರೆ

ಒಂದು ಕಣ ಮಣ್ಣನ್ನು

ಹಿಡಿಯಷ್ಟು ಅನ್ನವಾಗಿಸಿದಾಗ

ಬೆಂಕಿ ನುಂಗಿ ಉಗುಳುತ್ತಾರೆ



## ಮಾದಿಗರ ಹುಡುಗ

**- ಎಚ್. ಲಕ್ಷ್ಮೀನಾರಾಯಣಸ್ವಾಮಿ**

ತಂಗಳಿಟ್ಟಿನ ಒಡೆಯ

ಮುರುಕು ಮನೆಯಾ ರಾಜ

ಹಸಿವು ಕಸುವಿನ ದೊರೆಗೆ ಇಲ್ಲ ಐಭೋಗ

ಲೋಕವು ಕೇಳುತಿದೆ ನೀ ಗೌಡನಾ? ಎಂದು

'ಹೂಂ' ಎಂದು ತಲೆದೂಗಿದರೆ

ಹೊಸದ್ಯಾವರೋ?

ಗಂಗಟಕಾರರೋ?

ಹರಳೆಣ್ಣೆಯ ತಲೆಗಾಕಿ

ಬಟ್ಟೆಕ್ಕಿ ಕಳಿಸಿದರೆ ಅಮ್ಮ

ಉಜ್ಜಿ-ತಿಕ್ಕಿದಾ ದೇಹ ಕೆಂಪಾಗಿ ಕಂಡು

ಲೋಕವು ಕೇಳುತಿದೆ ನೀ ಬ್ರಾಹ್ಮಣನಾ? ಎಂದು

'ಹೂಂ' ಎಂದು ತಲೆದೂಗಿದರೆ

ಸ್ಮಾರರೋ?

ಮಾಧ್ವರೋ?

ಬಾಗಿಲಿಗೆ ಬಂದ ಬುಡಬುಡಕೆ

ವಿಭೂತಿಯ ಬಳಿದು ಹೋದರೆ

ಕಾಯಕವೇ ಕೈಲಾಸ ಎಂದು

ನಡೆದವನ ಕಂಡು

ಲೋಕವು ಕೇಳುತಿದೆ ನೀ ಲಿಂಗಾಯ್ತನಾ? ಎಂದು

'ಹೂಂ' ಎಂದು ತಲೆದೂಗಿದರೆ

ಬಳೆಗಾರರೋ?

ಐನೋರೋ?

ಸಮಾನತೆ ಬೇಕೆಂದು ಧಿಕ್ಕಾರ ಕೂಗಿದ

ಹೋರಾಟದ ನಡುವೆ

ಬಟ್ಟೆಬರೆಯ ನನ್ನ ಚೆಲುವ ಕಂಡು

ಲೋಕವು ಕೇಳುತಿದೆ ನೀ ಹೊಲೆಯನಾ? ಎಂದು

'ಹೂಂ' ಎಂದು ತಲೆದೂಗಿದರೆ

ಸಾವೋ?

ಮಗ್ಗವೋ?

ತಿಗುಳರೋ?

ಲೋಕವು ಕೇಳುತಿದೆ ನೀ ಯಾರೆಂದ!

ಊರ ಒಡೆಯನಲ್ಲಯ್ಯ ನಾನು

ಯಾಗಯಜ್ಞದವನೂ ಅಲ್ಲ

ಲಿಂಗಕಟ್ಟಿದವನಲ್ಲಯ್ಯ ನಾನು

ಹೊಲದ ಒಡೆಯನೂ ಅಲ್ಲ

ಜಾತಿ -ಧರವ ಬಿಟ್ಟವನಯ್ಯ

ಮಾದಿಗರ ಹುಡುಗ

ಕಾಲನಿ ಕುವರ

## ಉಲಿವ ದೀಪದ ಕೊನೆಗೆ ಅಪ್ಪನದೇ ರೂಪ

**- ಮಂಜುಳಾ ಹುಲಿಕುಂಟೆ**

ಸದಾ ಸಾವ ಕನಸುವ

ಹುಡುಗಿಯ ನೋವಲ್ಲೊಂದು

ಹೊಸ ಹಾಡು ಮಿಡಿಯುತ್ತಿದೆ

ಅಲ್ಲಿ .....

ಕಡುಗತ್ತಲ ನಡುಮನೆಗೆ

ಅಮ್ಮ ಹಣತೆ ಹಚ್ಚಿದ್ದಾಳೆ

ಉರಿವ ದೀಪದ ಕೊನೆಗೆ ಅಪ್ಪನದೇ ರೂಪ.....!

ರಾತ್ರಿ ಕತ್ತಲಿಗೂ ಬೆಚ್ಚುವ

ಆ ಹುಡುಗಿಯ ಸಾವಿನಾಡು, ನೋವಿನಾಡು

ಕೇಳಬೇಕಿತ್ತು

ನೀವೊಮ್ಮೆ ಕಿವಿಯಾಗಬೇಕಿತ್ತು

ಅಪ್ಪ

ತಾನೇ ಉತ್ತ ಹೊಲದಲ್ಲೀಗ

ತಣ್ಣನೆ ಮಲಗಿದ್ದಾನೆ

ಅಮ್ಮನ ಕೈಬಳೆಗಳ ಸದ್ದದೆಲ್ಲಿ ಅಡಗಿದ್ದು?

ಹುಡುಗಿ ಬೆಚ್ಚುತ್ತಾಳೆ ಮತ್ತೆ ಮತ್ತೆ...

ಸಾವನ್ನೇ ಜಪಿಸುವ ಅವಳಿಗೆ

ಸಾವಾಗಿದ್ದರೂ ಮುಕ್ತಿ ದೊರೆಯುತ್ತಿತ್ತೇನೋ

ಕೊನೆಯಿಲ್ಲದ ನೋವಿಗೆ

ಸಾವು ದೋಚಿದ್ದು ಮಾತ್ರ

ಅವಳದೇ ಮಡಿಲಿನ ಮಗುವಿನಂತಾ ಅಪ್ಪನನ್ನ

ಹಾ……

ಅಪ್ಪ ಹುಟ್ಟು ಹಠಮಾರಿ

ಥೇಟ್ ಅವಳಂತೆಯೇ ಹುಂಬ

ಸದಾ ಗೊಣಗುತ್ತಿದ್ದವನು



ಸುಮ್ಮನೆ ಎದ್ದು ನಡೆದುಬಿಟ್ಟಿದ್ದಾದರೂ

ಯಾಕೆಂಬ ಚಿಂತೆ

ಜೊತೆಗೆ

ಅಪ್ಪ ಹೋಗುವ ಮೊದಲೇ

ಅಪ್ಪನದೆಯಲ್ಲಿ

ತನ್ನ ಸಾವು ಅದೆಂದೊ ಸಂಭವಿಸಿತ್ತಾ?

ಎಂಬ ಶಂಕೆ ಈಗವಳದು

## ಇಲ್ಲ ನಿಮ್ಮ ಹಾಗೆ

**ವಾಯ್. ಎಂ. ಯಾಕೊಳ್ಳಿ**

ಇಲ್ಲ

ನಿಮ್ಮ ಹಾಗೆ ಅಗರುಬತ್ತಿಯ

ಧೂಪ-ದೀಪದ ಸುವಾಸನೆ

ಕುಡಿದು ಬೆಳೆದವನಲ್ಲ

ಮಲ್ಲಿಗೆಯ ಕಂಪು

ಮೂಗು ತಟ್ಟಿರಲಿಲ್ಲ

ನನಗೆ...

ಕುರಿಯ ಹಿಕ್ಕೆಯ

ಆಡಿನ ಉಚ್ಚೆಯ ಕಮಟು ವಾಸನೆಯೇ

ಅಮೋಘವಾಗಿತ್ತು !

ಇರಲಿಲ್ಲ.

ನಿಮ್ಮ ಹಾಗೆ

ಸಮಯಕ್ಕೆ ಸರಿಯಾಗಿ

ಬರುವ ಟೇಬಲ್ಲಿನ

ಮೆನುನಂತಹ ಊಟ

ಸಿಕ್ಕಾಗ ಸಿಕ್ಕಷ್ಟು

ಗಬಕಿ ತುತ್ತಿನ ಚೀಲ

ತುಂಬಿಕೊಳ್ಳುವ ಧಾವಂತವಿತ್ತು

ತುತ್ತಿಗೂ ತತ್ವಾರ ಪಡುವ

ಬಡಿದಾಟವಿತ್ತು

ಇಲ್ಲ

ಒಬ್ಬನೂ ಭೇಟಿಯಾಗಲಿಲ್ಲ

ಅವಲಕ್ಕಿ ಚೀಲ ಹಿಡಿದ ಕೃಷ್ಣ

ಕರ್ಣನಿಗಾಗಿ ರಾಜ್ಯವನ್ನೇ

ಎರೆವ ದುರ್ಯೋಧನ



ಇಲ್ಲ, ಇಲ್ಲವೇ ಇಲ್ಲ

ಚರಿತ್ರೆಯ ಭಾರ

ಸೀತಾರಾಮರ ವ್ಯವಹಾರ

ಇರುವವರೆಲ್ಲ ವರ್ತಮಾನದ

ಪ್ರಶ್ನೆ

ತುತ್ತು ತುಂಬುವ ಯತ್ನ

ಇರುವ ಮುರುಕು ಕೋಲನ್ನೇ

ಊರುಗೋಲಾಗಿಸಿ

ಹರಿದ ಚೆಡ್ಡಿಯನ್ನು

ಮತ್ತೆ ಮತ್ತೆ ರಿಪೇರಿ ಮಾಡಿ

ಬೆಳೆದು ನಿಂತ ಏಕಲವ್ಯ

ಎಲ್ಲಿಂದ ತರಲಿ

ಹೇಳಿ

ಮಲ್ಲಿಗೆಯ ಮಾತು

ಎಲ್ಲೆಯೇ ಇಲ್ಲದವನಿಗೆ

ಗಡಿಯ ಹಂಗೇಕೆ ಬಿಡಿ

ಇದು ಅಪ್ರಲಾಪದ ಹಾಡಾಗಿ

ನಿಮಗೆ ಕೇಳಿದರೆ

ನಾನಲ್ಲ ಕಾರಣ



**ನಾನೂ ಒಬ್ಬ ಮನುಷ್ಯ**

**ಜಿ.ಬಿ.ಪೂಜಾರಿ**

ಹಿಂದೊಮ್ಮೆ ತಿಂದಿದ್ದೆ

ಹಸಿಮಾಂಸವನು ಹಸಿವು ತಾಳದೆ

ಬೀದಿ ಬೀದಿ ಬೆತ್ತಲೆ ತಿರುಗಿದ್ದೆ ಉಟ್ಟುಕೊಳ್ಳಲು ಬಟ್ಟೆಯಿಲ್ಲದೆ

ನನ್ನಕ್ಕ ತಂಗಿಯರ ಜೊತೆ ಚಕ್ಕಂದವಾಡಿದರೂ

ಸುಮ್ಮನಿದ್ದೆ ದುಡಿಸಿಕೊಳ್ಳುವ ಧಣಿಯರೆಂದು,

ಹಳಸಿದ್ದಾದರೂ ಅನ್ನ ಹಾಕುವರೆಂದು

ಊರ ಹೊರಗಾದರೂ ಬದುಕಲು ಬಿಟ್ಟಿರುವರೆಂದು

ಯಾಕೆಂದು ಕೇಳಬೇಡಿ

ನಾನಾಗ ಆಧಾರವಿಲ್ಲದವನು.

ರಾಜ, ರಾಣಿ-ದಾಸಿಯರೊಂದಿಗೆ

ರತಿಕ್ರೀಡೆಯಲ್ಲಿದ್ದಾಗ ದ್ವಾರ ಕಾಯುತಿದ್ದೆ

ನೆರೆ ರಾಜ್ಯದ ರಾಜ ದಾಳಿ ಮಾಡಿದಾಗ

ಮೊದಲು ಬಲಿಯಾದದ್ದು ನಾನೇ

ಕೈ-ಕಾಲು ಕಳೆದುಕೊಂಡು ಅಂಗವಿಕಲನಾಗಿದ್ದೆ

ದ್ವಾರ ಕಾಯ್ದುವ ದೊರೆಗಿಂತ ಮೇಲೆಂಬುದನು

ಮರೆಯಿತು ಇತಿಹಾಸ

ಯಾರೂ ಮಾಡಲಿಲ್ಲ ನನ್ನೆಸರ

ನಮೂದಿಸುವ ಸಾಹಸ.

ಹೆಣಗಳನ್ನೂಳಲು ಕುಣಿದು ತೋಡಿದ್ದೆ

ಆವಾತ್ತಾದರೂ ಹೆಂಡ ಸಿಕ್ಕೀತೆಂದು,

ಮುಟ್ಟಬೇಡ-ತಟ್ಟಬೇಡೆಂದವನು

ನಾನಗೆದ ಮಣ್ಣಿನಲಿ ಮಣ್ಣಾಗುವುನೆಂದು

ಸಂತೋಷ ಪಟ್ಟಿದ್ದೆ.

ತೋಡಿದ ಕುಣಿ ತುಂಬ ಕುಣಿದಾಡಿದ್ದೆ.



ಅದೆಲ್ಲಾ ಕೀಳೆಂದು ತಿಳಿದಿರಲಿಲ್ಲ

ಮೇಲೆಂಬ ಹಮ್ಮು ಈಗಲೂ ಇಲ್ಲ

ಮುಂದೆ ಹೊಲೆಮಾದಿಗನಾಗುತ್ತೇನೆಂಬ

ಅರಿವು ಇರಲೇ ಇಲ್ಲ.

ಇನ್ನಾದರೂ ಕೇಳುವವರಿಲ್ಲೆನ್ನ ತುಡಿತ

ನನಗೊಂದು ಹಣೆಪಟ್ಟಿ ಹರಿಜನರೂ ಅಂತ,

ಒಪ್ಪಿಕೊಳ್ಳುತ್ತಿಲ್ಲ ಇನ್ನೂ ಎಷ್ಟೋ ಮನಸುಗಳು

ನಾನೂ ಒಬ್ಬ ಮನುಷ್ಯ ಅಂತ.

## ಅಂತರಾಳ

**- ಅಮೃತಾ ಆರ್. ಕಟಕೆ**

ಮಹಿಳಾ ದಿನಾಚರಣೆಗೆಂದು

ಏನನೋ ಬರೆಯುತ್ತಿದ್ದೆ

ದನಿಯೊಂದು ಕೇಳಿಸಿತು

ಯಾರು ನೀ? ಅಂದೆ

ಅತ್ತಿತ್ತ ನೋಡಿದೆ

ಗುರುತು ಸಿಗಲಿಲ್ಲವೆ?

ಅಂದಿತು, ತನ್ನ ಪರಿಚಯಿಸ ಹೊರಟಿತು

ಶತ ಶತಮಾನಗಳಿಂದ ಆದಿಶಕ್ತಿಯ ನಾನು

ಸಹನೆಯ ಮೂರ್ತಿಯೇ ನಾನು

ಪ್ರೀತಿಯ ಸಾಕಾರವೂ ನಾ

ನನ್ನ ಗುರುತು ಹತ್ತಿತೆ? ಅಂದಿತು

ಪರಿಚಯವು ಮುಂದುವರಿಸಿತು

ದಾನ ಚಿಂತಾಮಣಿಯು ನಾನು

ನಾಟ್ಯ ರಾಣಿಯು ನಾನು

ಗಾನಕೋಗಿಲೆಯು ನಾನು

ವೀರ ರಾಣಿಯೂ ನಾನು

ಒನಕೆಯ ವೀರ ನಾರಿಯು ನಾನು

ನನ್ನ ನೆನಪು ಬಂದಿತೆ? ಅಂದಿತು

ಪರಿಚಯವ ಮುಂದುವರಿಸಿತು

ನನ್ನ ಹೆಸರಿಗಿಲ್ಲರವಷ್ಟು ಆಸ್ತಿ

ಆದರೂ ನಾನೇ ನೆಲ ಜಲ ಪ್ರಕೃತಿ
ಸುರಾಸುರರಲ್ಲೂ ನನ್ನ ಪ್ರತೀತಿ
ಕವಿಯಿತ್ರಿ - ಧಾತ್ರಿ ಬಿರುದುಗಳ ಜಾತ್ರಿ
ಇವೆಲ್ಲ ನಾನೆಂಬುದು ಇಲ್ಲದ ಖಾತ್ರಿ
ಈಗ ನನ್ನ ಗುರುತು ಸಿಕ್ಕತೇ? ಅಂದಿತು
ಮಸಕು ಚಿತ್ರ ಮೂಡತೊಡಗಿತು
ದನಿ ಮತ್ತೆ ಪರಿಚಯದ ಮುಂದುವರಿಸಿತು



ಇಲ್ಲಿ ಕೇಳು ಹೇಳುವೆ,
ನಾನು ಶತಮಾನಗಳಿಂದ ದುಡಿಯುತ್ತ
ದುಡಿತದ ಫಲ ಬೇಡದೆ ತುಳಿಸಿಕೊಳ್ಳುತ್ತ
ತುಳಿದವರನೇ ನನ್ನವರೆನ್ನುತ್ತ
ಬಳಿಯುತ್ತ, ತೊಳೆಯುತ್ತ, ಹೊಟ್ಟೆಯಲೇ ಕಮರುತ್ತ
ಅವರಿಟ್ಟ ಬೆಂಕಿಯಲಿ ಬೇಯುತ್ತ
ದಿನವೂ ಸಾಯುತ್ತ ನನ್ನನೇ ನಾ ಮರೆಯುತ್ತ......
ಸಾಕು ಸಾಕೆಂದು ಚೀರಿದೆ!
ನಿನ್ನ ರೂಪದ ಪ್ರತಿರೂಪ ನಾನೆಂದೆ
ನಿನ್ನ “ಅಂದು'ಗಳಲ್ಲಿ
ನನ್ನ'ಇಂದು'ಗಳ ಸೇರಿಸಿ
ನಮ್ಮವರ 'ಮುಂದುಗಳ ಬೆಳಗೋಣ ಬಾ ಎಂದೆ;
ಅನ್ನುತ್ತಲೇ ಇದ್ದೆ.

## ದಲಿತರು ಬೇಕ ?

**- ಈಶ್ವರ ಸಿ. ತಕೋಳ**

ಕನಿಷ್ಟ ಕೆಲಸಕ್ಕೆ ದಲಿತರು ಬೇಕೆ ?
ಶ್ರೇಷ್ಟ ಕೆಲಸಕ್ಕೆ ಉಳ್ಳವರು ಬೇಕೆ ?
ಜಾಣೀ ಪೋತೆಯಾಗಲು ದಲಿತರು ಬೇಕೆ ?
ಕುಣಿಯುವವರು ದಲಿತರೆ ?

ಬಾರಿಸುವವರು ದಲಿತರೆ
ಕೊರಳಲ್ಲಿ ಕುರಿಯ ಕರುಳು
ಹಾಕಿಕೊಂಡು ತಿರುಗಲು ದಲಿತರು ಬೇಕೆ ?
ಎಲ್ಲ ದೇವರ ಮುಂದೆ ದಲಿತರು ಕುಣಿಬೇಕೆ
ಹಣತೆ ಹಿಡಿದು ಪೂಜಿಸಲು
ಉಳ್ಳವರು ಬೇಕೆ ?

ಸತ್ತ ಪ್ರಾಣಿ ಎಳೆಯಲು
ದಲಿತರು ಯಾಕೆ ?
ದೇವರ ರಥ ಎಳೆಯಲು
ಉಳ್ಳವರು ಬೇಕೆ ?
ಕಾರ್ಯದೊಳಗೆ ದಲಿತರ ಓಣಿ ಬಿಟ್ಟು
ಊರು ಸುತ್ತುವುದ್ಯಾಕೆ ?

ಉಂಡ ಮುಸುರಿ

ಹೊಳೆ ದಾಡಲು ದಲಿತರು ಬೇಕೆ?

ಅಡ್ಡಪಲ್ಲಕ್ಕಿ ಎತ್ತಲು

ಉಳ್ಳವರು ಯಾಕೆ?

ಉಳ್ಳವರು ಯಾಕೆ?



## ನಮ್ಮನೆಯ ದೇವರು

**- ಕುಪೇಂದ್ರ.ಎಸ್. ವಠಾರ್**

ದೇವರೆಂದರೆ ಆ ಕಾಣದ ದೇವರಲ್ಲ

ಕಲ್ಲು, ಮಣ್ಣು, ಮರ, ನದಿ ದೇವರಲ್ಲ

ಬೆಟ್ಟ, ಗುಡ್ಡ, ಗುಡಿಯೊಳಗಿನ ದೇವರು ದೇವರಲ್ಲ

ಮನೆಯೊಳಗಿನ ಫೋಟೋ ಜಗಲಿ ಮೇಲಿನ ದೇವರು ದೇವರಲ್ಲ

ದೇವರೆಂದರೆ, ನಿತ್ಯ ನಮ್ಮೊಂದಿಗೆ

ನಡೆದು ನುಡಿದಾಡಿ ನಮ್ಮ ಬದುಕು ನೆಟ್ಟಗೆ ಮಾಡಿದ

ನಮ್ಮ ಪಾಲಿನ ನಿಜ ದೇವರೇ ನಮ್ಮ ಬಾಬಾ ಸಾಹೇಬ ಅಂಬೇಡ್ಕರರು

ಅನ್ನ ಕೊಟ್ಟವರು ಅಂಬೇಡ್ಕರರು

ಅರಿವೆ ಕೊಟ್ಟವರು ಅಂಬೇಡ್ಕರರು

ಅಕ್ಷರ ಕೊಟ್ಟವರು ಅಂಬೇಡ್ಕರರು

ಈ ಅನ್ನ, ಅರಿವೆ, ಅಕ್ಷರ ಕೊಟ್ಟ ಅಂಬೇಡ್ಕರ್

ನಮ್ಮ ದೇವರು ನಮ್ಮನೆಯ ದೇವರು ||ಪ||

ಬದುಕು ಕೊಟ್ಟವರು ಅಂಬೇಡ್ಕರ್

ಬೆಳಕು ಕೊಟ್ಟವರು ಅಂಬೇಡ್ಕ

ಬಂಗ್ಲೆ ಕೊಟ್ಟವರು ಅಂಬೇಡ್ಕ

ಈ ಬದುಕು, ಬೆಳಕು, ಬಂಗಲೆ ಕೊಟ್ಟ ಅಂಬೇಡ್ಕರ್

ನಮ್ಮ ದೇವರು ನಮ್ಮನೆಯ ದೇವರು ॥೧॥

ಕೋಟು ಕೊಟ್ಟವರು ಅಂಬೇಡ್ಕ

ಬೂಟು ಕೊಟ್ಟವರು ಅಂಬೇಡ್ಕ

ನಮಗೆ ನೋಟು ಕೊಟ್ಟವರು ಅಂಬೇಡ್ಕರ್

ಈ ಕೋಟು, ಬೂಟು, ನೋಟು ಕೊಟ್ಟ ಅಂಬೇಡ್ಕರ್

ನಮ್ಮ ದೇವರು ನಮ್ಮನೆಯ ದೇವರು ॥೨॥

ಸಂವಿಧಾನ ಕೊಟ್ಟವರು ಅಂಬೇಡ್ಕರ್

ಸಂಬುದ್ಧನ ಕೊಟ್ಟವರು ಅಂಬೇಡ್ಕ

ಸಂಸ್ಕಾರ ಕೊಟ್ಟವರು ಅಂಬೇಡ್ಕರ್

ಈ ಸಂವಿಧಾನ, ಸಂಬುದ್ಧನ, ಸಂಸ್ಕಾರ ಕೊಟ್ಟ ಅಂಬೇಡ್ಕ

ನಮ್ಮ ದೇವರು ನಮ್ಮನೆಯ ದೇವರು ॥೩॥

ಶಕ್ತಿ ಕೊಟ್ಟವರು ಅಂಬೇಡ್ಕರ್
ಯುಕ್ತಿ ಕೊಟ್ಟವರು ಅಂಬೇಡ್ಕ
ಮುಕ್ತಿ ಕೊಟ್ಟವರು ಅಂಬೇಡ್ಕ
ಈ ಶಕ್ತಿ, ಯುಕ್ತಿ, ಮುಕ್ತಿ ಕೊಟ್ಟ ಅಂಬೇಡ್ಕರ್
ನಮ್ಮ ದೇವರು ನಮ್ಮನೆಯ ದೇವರು ||೪||

ಶಿಕ್ಷಣ ಕೊಟ್ಟವರು ಅಂಬೇಡ್ಕ
ಸಂರಕ್ಷಣೆ ಕೊಟ್ಟವರು ಅಂಬೇಡ್ಕರ್
ಶಿಸ್ತು ಕೊಟ್ಟವರು ಅಂಬೇಡ್ಕರ್
ಈ ಶಿಕ್ಷಣ, ಸಂರಕ್ಷಣೆ, ಶಿಸ್ತು ಕೊಟ್ಟ ಅಂಬೇಡ್ಕರ್
ನಮ್ಮ ದೇವರು ನಮ್ಮನೆಯ ದೇವರು ||೫||

ಧಮ್ಮ ಕೊಟ್ಟವರು ಅಂಬೇಡ್ಕ
ನಮಗೆ ದಮ್ಮು ಕೊಟ್ಟವರು ಅಂಬೇಡ್ಕ
ಧಮ್ಮ ದೀಕ್ಷೆ ಕೊಟ್ಟವರು ಅಂಬೇಡ್ಕರ್
ಈ ಧಮ್ಮ, ದಮ್ಮು, ದೀಕ್ಷೆ ಕೊಟ್ಟ ಅಂಬೇಡ್ಕರ್
ನಮ್ಮ ದೇವರು ನಮ್ಮನೆಯ ದೇವರು
ಈ ದೇಶದ ಬಹುಜನರ ದೇವರು ||೬||

## ನಡೆದಾಡಿ ಹೊಳೆಯುವ ಮುತ್ತುಗಳು

**ಭೀಮಸೇನ ಗಾಯಕವಾಡ**

ಕಸಗುಡಿಸಲು ನೀನೇಕೆ ಬಂದೆ
ಮಲ ಹೊರಲು ನೀನೇಕೆ ನಿಂತೆ
ಸತ್ತ ಪ್ರಾಣಿಯ ಹೊತ್ತು ಊರಾಚೆ
ಬೀಸಲು ನಿನ್ನ ಕರೆದವರಾರು
ಸ್ಪರ್ಶ - ಅಸ್ಪೃಶ್ಯವೆಂದು ಸಾರುವ
ಮಡಿ-ಮಡಿಯೆಂದು ಪಾಲಿಸುವ
ಗಬ್ಬು ನಾರುವ ಕೇರಿಯಲಿ
ನಿನ್ನದೇನು ಕೆಲಸ?
ಭೀಮಸೇನ ಗಾಯಕವಾಡ
ವರ್ಣಾಶ್ರಮ ಪದ್ಧತಿಯು ಭೀಮತಟದಲ್ಲಿ
ಸುಟ್ಟು ಕರಕಲಾಗಲಿಲ್ಲವೇ? ||

ಮದ್ಯದಂಗಡಿಗೆ ನೀನೇಕೆ ಬಂದೆ
ಮತ್ತೇರಿಸಲು ನೀನೇಕೆ ನಿಂತೆ
ಸತ್ತು ಬದುಕಿದಂತೆ ಕಾಣುವ
ನರನ ಜೀವ ಹಿಂಡಲು
ನಿನ್ನ ಬಳಿಸಿದ ಭೂಪನ್ಯಾರು
ಮದ್ಯಘೋಷಿಸಿ ಮಾರುವ ಕುಡಿದು ಉಣಿಯಲು ಹೇಳುವ
ದುರ್ಗಂಧ ಬೀರುವ ಸಾವಿನಂಗಡಿಯಲ್ಲಿ

ನಿನ್ನದೇನು ಕೆಲಸ?
ದಶಕಗಳಾಚೆ ಜ್ಞಾನ ಪಡೆದ ಸಾಗರದಾಚೆ
ಮೋಜು ಮಸ್ತಿಯ ವಿಷಯ ತೊರೆದು
ಅಮೃತಧಾರೆ ತಂದವರಾರೆಂದು ಗೊತ್ತಿಲ್ಲವೇ? |

ಸೆಗಣಿ ತೆಗೆಯಲು ನೀನೇಕೆ ಬಂದೆ
ಉಚ್ಚೆ ಒರೆಸಲು ನೀನೇಕೆ ನಿಂತೆ
ಊರಾಚೆ ಕಸದ ಗುಂಡಿಯಲ್ಲಿ
ಹೊತ್ತು ಬೀಸ್ಯಾಡಲು ಹೇಳಿದವರಾರು
ಸೆಟಗಮ್ಮ ಕೈ ಮಾಡಿ ಕರೆದಳೆ?
ಕಣ್ಣರಳಿಸಿ ಕಸಬರಕೆಯಿಂದ ಸ್ವಚ್ಛಗೊಳಿಸಿ



ಬೊಗಸೆಯಿಂದ ಬುಟ್ಟಿಯ ತುಂಬಲು
ದುರ್ಗಮ್ಮ ಆಜ್ಞೆ ಮಾಡಿದವಳ?
ಮೂಗಚ್ಚಿ ಅಲೆದಾಡುವ ದೊಡ್ಡಿಯಲ್ಲಿ
ನಿನ್ನದೇನು ಕೆಲಸ?
ಅಂಧಕಾರವನ್ನು ಗುಳುವ ಮನುಸ್ಮೃತಿಯು ಭೀಮನಂಗೈಯಲ್ಲಿ
ಸುಟ್ಟು ಬೂದಿಯಾಗಲಿಲ್ಲವೇ? ||

ಬೇಲಿದಾಟಿ ನೀನೇಕೆ ಬಂದೆ

ಆಳುಮಗನಾಗಿ ನೀನೇಕೆ ನಿಂತೆ

ಉತ್ತು-ಬಿತ್ತಿ ನಿಲ್ದಾಕಿ ಪೋಷಿಸಿ

ನಾಟಿ ತೆಗೆಯಲು ನೀನದ್ದೇಳಿದವರಾರು?

ಮಳೆ, ಗಾಳಿ, ಚಳಿಗೆ ಅಳುಕದೆ

ಮೈ ಮುರಿದು ಕಷ್ಟಪಟ್ಟು ದುಡಿದು

ಜ್ವರದೀಮದ ಕನಲಿ ಬಳಲಿದರೂ

ಮೂಸಿ ನೋಡದವನ ಹೊಲದಲ್ಲಿ

ನಿನ್ನದೇನು ಕೆಲಸ?

ದಾಸ್ಯ ಜೀವನದ ತೊರೆದು

ಸ್ವಾವಲಂಬನೆಯಿಂದ ಬದುಕಲು ಹೇಳಲಿಲ್ಲವೆ?

ಇತಿಹಾಸ ಮರೆತವರು ಇತಿಹಾಸ ಸೃಷ್ಟಿಸಲಾರರು

ಎಂದ್ದೇಳಿದವರನು ಮರೆತೆಯೇ? ||

ದನ ಮೇಯಿಸಲು ನೀನೇಕೆ ಬಂದೆ

ಕುರಿಕಾಯಲು ನೀನೇಕೆ ನಿಂತೆ

ಬಯಲಾಚೆ ಕಣಿವೆಯ ಇಳಿಜಾರಿನಲಿ

ಮೊಗದೊಸ್ತಾದ ಹುಲ್ಲು ಮಂದೆಯಲಿ

ನಿನ್ನದ್ದೋಗಲು ಹೇಳಿದ ಕಟುಕನ್ಯಾರು?

ವಿಷ ಜಂತುಗಳಿಗೆ ಹೆದರದೆ

ಭೋರ್ಗರೆಯುವ ಮಳೆಗೆ ಬೆದರದೆ

ಸುಡು - ಸುಡು ಬಿಸಿಲಿನಿಂದ ಪಾರಾಗದೆ

ದಣಿವಾರಿಸಿಕೊಳ್ಳಲು ನೀರಿಲ್ಲದ ಜಾಗದಲ್ಲಿ

ನಿನ್ನದೇನು ಕೆಲಸ?

ಶಿಕ್ಷಣವಿಲ್ಲದ ಪೋರನ ಬದುಕು

ಪಶುಗಿಂತಲೂ ಕಡೆ ಎಂಬುದನ್ನರಿತು

ಶಿಕ್ಷಣ, ಸಂಘಟನೆ, ಹೋರಾಟದ ಮಂತ್ರವನೂದಿದವರು

ನಿನ್ನಿಂದ ಮರೆಯಾಗುವವರೆ?



ಸಾವಿರಾರು ವರುಷದ ಪರಂಪರೆಯನು

ಶತಮಾನಗಳ ಅಮಾನವೀಯ ಬದುಕನು

ಹಳೆ ನೀರು ಕೊಟ್ಟೋಗಿ

ಹೊಸ ನೀರು ಬದ್ದಂಗೆ

ಮನುಸ್ಮೃತಿಯ ದೇಹ ಕರಕಾಗಲು

ಆಧುನಿಕ ಮನುವಿನ ನುಡಿಗಳು

ದಿವ್ಯ ಬೆಳಕಾಗಿ ಹೊರಹೊಮ್ಮಲು

ಕಾರ್ಗತ್ತಲೆಯು ಮೋಡದಿಂದ ಮರೆಯಾಗಲು

ಅಜ್ಞಾನದ ಕೋಪದಿಂದ ಹೊರಬಂದು

ದಲಿತ ಸೂರ್ಯನ ಬೆಳಕಿನಲಿ

ನಲಿದಾಡಿ, ಹೊಳೆಯುವ ಮುತ್ತುಗಳೆಗೆ

## ಚಿಂದಿ ಬಟ್ಟೆ ಮತ್ತು ದೀಪಾವಳಿ

ಎಡವಿ ಬಿದ್ದಾಗೊಮ್ಮೆ ರಸ್ತೆ ನಗುತ್ತದೆ
ನಕ್ಕಾಗೊಮ್ಮೆ ಕಣ್ಣೀರು ಅಳುತ್ತದೆ
ಹಗಲಿಗಷ್ಟೇ ಬೆಳಕಿನ ಜಂಬ
ಕತ್ತಲು ಈಗೀಗ ಬದುಕಿನ ಪ್ರತಿಬಿಂಬ
    ತಬ್ಬಿಕೊಂಡು ಹತ್ತಿದ ಮರ
    ಯಾಮಾರಿ ನಿಂತಿದೆ
    ಯಾವ ಆಧಾರಬೇಕು ಒಮ್ಮೆಲೆ
    ದಿಗ್ಭ್ರಮೆಗೊಳ್ಳುವ ಆಶ್ಚರ್ಯಕ್ಕೆ
ತುಣುಕುಗಳು ತುಕಡಿಗಳಾಗಿಯಾಯ್ತು
ಇರುವೆಗೂಡಲಿ ಸಕ್ಕರೆ ಬೆಲ್ಲ
ಹರಿಯುವ ರಕ್ತ ಕಿರುಚುವ ಧ್ವನಿ
ಎರಡೂ ಬಣ್ಣ ಬದಲಾಯಿಸಿಕೊಂಡಿವೆ
    ಅಂಗಳಲ್ಲಿ ರಂಗೋಲಿಯ ಅತ್ಯಾಚಾರ
    ಕಣ್ಣಳಲ್ಲಿ ಹಿತ್ತಲ ನೋಟ
    ಬಾಯಿಗೊಂದು ಮುಚ್ಚಿದ ಬಾಗಿಲು
    ನಾಯಿಗೆ ಅದರದೇ ಆದ ವೇದನೆ
ನಗಾರಿ ಹರಿದರೂ ನಗು ಆರ್ಭಟಿಸುತ್ತಿದೆ
ಚಿಲ್ಲರೆಗಳೆಲ್ಲ ಖಾಲಿ ಖಾಲಿ
ಚಿಂದಿ ಬಟ್ಟೆಯು ದುಃಖಿಸುತ್ತಿದೆ.
ಅಂತರಂಗದಲಿ ಬೆತ್ತಲಾಗಿ

ಹಬ್ಬ ಸಡಗರ ಸಂಭ್ರಮದಿ ವಿಜೃಂಭಿಸುತ್ತಿದೆ
ದೀಪ ಪಾಪದ ತೆಕ್ಕೆಗೆ ಬಲಿ
ಬದುಕು ದೀಪದಡಿಯ ಕತ್ತಲಲಿ
ತಳಿರುತೋರಣ, ಆಕಾಶಬುಟ್ಟಿಗೆ ನಶೆ ಏರಿದೆ



**ಇಲಿಚಲು ಕರೆಯ ಹುಡುಗಿ**

**- ಸುಜಾತ ಚಲುವಾದಿ**

ಭಯದ ಗಲ್ಲಿಯಲ್ಲೊಂದು ಆ ಘಳಿಗೆ
ಅವಳನ್ನು ತೊರೆದು ಬೇರಾದ ಪ್ರೀತಿ
ಕೊಳಕು-ಅಳುಕಿನ ಮುಸುಕು-ಮುಸುಕು
ದಿಕ್ಕರಿಸಲಾಗಲಿಲ್ಲ ಸುರಿಸಿದ ಪ್ರೀತಿಯನ್ನು
ಅರಗಿಸಿಕೊಳ್ಳಲಾಗಲಿಲ್ಲ
ಇರಿಚಲು ಕೆರೆಯ ಮೇಲಿನ ಕರಿಯ ಹುಡುಗಿ
ಕವಳಗಣ್ಣಿನಲ್ಲಿ ಉಸಿರು ಬಿಗಿ ಹಿಡಿದ
ತಾಳವಿಲ್ಲದ ಮೇಳವಿಲ್ಲದ ಮೌಲ್ಯಕ್ಕೆ ಚಾರಿತ್ರ್ಯಕ್ಕೆ
ಮಾರ್ಗ ಕಂಡುಕೊಳ್ಳಲಾಗದೆ ಅಲೆದಾಡುತಿಹಳು
ಯಾವುದೋ ಮೋಹದ ಮಾಯದಲಿ
ಪರಿಚಿದ ಕಳಚಿದ ಕೊಂಡಿ ಆಯಾಚಿತ
ಮೋಹದ ಅಮಲಿನಿಂದ ಪುಳಕಿತಗೊಂಡ
ನಿರ್ಭಾವುಕ ನೆಲೆಯಲ್ಲಿ ಬದುಕಿನ ಅಣತಿದೂರ

ಬಿಡಬೇಕೆಂದುಕೊಂಡಿದ್ದ ಹಗಲ ಬಿಸಿಲಿನಲಿ
ಭಯದ ಗಲ್ಲಿಯಲ್ಲೊಂದು ಹೊಸ ಫಲ
ಹೊತ್ತುಕೊಂಡು ಚಿಗುರೊಡೆದ ಮಡಿಲ ಕೂಸಿನಿಂದ
ನೀರ ಪಾಲಾಗಲೆಂದು ಇಣುಕಿ ನೋಡಿದಳು ಕೆರೆಯ

ಈಜುಬಾರದ ಇರಿಚಲು ಕೆರೆಯ ಕರಿಯ ಹುಡುಗಿ
ಅದೃಷ್ಟ ಇರದೆ, ಅವಕಾಶ ಸಿಗದೆ
ನಗುವೆಲ್ಲ ನಿಂತು ಜನಜಂಗುಳಿಯ ಮಧ್ಯ
ಇರಿಚಲು ಕೆರೆಯ ನೀರಿನಲ್ಲಿ ಹೆಣವಾಗಿ ತೇಲುತ್ತಿದ್ದಳು



**ಹುಟ್ಟು-ಸಾವು**

**- ವೈ.ಎಂ. ಭಜಂತ್ರಿ**

ಹುಟ್ಟುತಿದೆ ಕವಿತೆ
ಬ್ರಾಹ್ಮಣನ ಹೊಟ್ಟೆಲಿ
ನರಳುತಿದೆ ಕವಿತೆ
ಶೂದ್ರನ ರಟ್ಟೆಯಲಿ

ಚಿಗುರಿತಿದೆ ಕವಿತೆ
ಕೋಗಿಲೆಯ ಕಂಠದಲಿ
ಕಮರುತಿದೆ ಕವಿತೆ
ಕಾಗೆಯ ಕೂಗಿನಲಿ

ಅರಳುತಿದೆ ಕವಿತೆ
ಸಿಗರೇಟಿನ ಗುಂಗುರ ಹೊಗೆಯಲಿ

ಕೊರಗುತಿದೆ ಕವಿತೆ

ಅಜ್ಜನ ಕೆಮ್ಮಿನಲಿ

ಹರಿಯುತಿದೆ ಕವಿತೆ

ಬೀರಿನ ನೊರೆಯ ತೆರೆಯ ತುದಿಯಲಿ

ನಿಲ್ಲುತಿದೆ ಕವಿತೆ

ಬಡವನ ಬೆವರಿನ ಹನಿಗಳಲಿ

ಧುಮುಕುತಿದೆ ಕವಿತೆ

ಕ್ಯಾಬರೆ ಹೆಣ್ಣಿನ ತೊಡೆಗಳಲ್ಲಿ

ದಾಟಿ ಹೋಗದು ಕವಿತೆ

ಅಜ್ಜಿಯ ಹರಿದ ತೇಪೆಯ ಸೀರೆಯಲಿ

ಹುಟ್ಟುತಿವೆ ಕವಿತೆಗಳು

ಸಾಯುತಿವೆ ಕವಿತೆಗಳು

ಹುಟ್ಟಿದಲ್ಲೇ ಸಾಯುವ ಇವು

ಹುಟ್ಟಿದ್ದು ಬರೀ ಬರಡು ನೆಲದಲ್ಲಿ



ಗುರಿಯಿಲ್ಲದ ಗರಿಯಿಲ್ಲದ

ಬೇನಿಯಿಲ್ಲದ ಬರೀ ಢಗೆಯಲ್ಲಿ

ಹುಟ್ಟುವ ಈ ಕವಿತೆಗಳು

ಕಿಸೆಯಿಲ್ಲದ-ಕಸಿಯಿಲ್ಲದ ಚಲ್ಲಣದಲ್ಲಿಟ್ಟ ಗೋಲಿಗುಂಡುಗಳಂತೆ

ಹುಟ್ಟಲಿ ಕವಿತೆ

ಚಪ್ಪರದ ಚಾಟಿನಲ್ಲಿ

ಬೆಳೆದೀತು ಕವಿತೆ ಬೆವರನುಂಡು

ಉಳಿದೀತು ಕವಿತೆ ಅದರ ಅನಂತ ಸೆಲೆಯನುಂಡು

ಕುಂಟೆಯ ತುದಿಯಲ್ಲಿ ಹುಟ್ಟುವ

ರೆಂಟೆಯ ಮಡಿಲಲ್ಲಿ ಬೆಳೆದ ಕವಿತೆ

ನೆಂಟರ ಬಾಯಲ್ಲಿಯ ಸಕ್ಕರೆಯಂತಲ್ಲ

ಬಂಟರ ಬಗಲಲ್ಲಿಯ ಬಂದೂಕಿನಂತೆ



**ಅಳುವುದಾದರೆ ಅತ್ತು ಬಿಡು.......**

**- ಸಿ.ಎಸ್.ಭೀಮರಾಯ**

ಅಳುವುದಾದರೆ ಅತ್ತು ಬಿಡು ಗೆಳತಿ

ಬಚ್ಚಿಟ್ಟು ಕೊರಗಬೇಡ ||

ಕೆಂಪು ದೀಪದ ಬೀದಿಯೊಳಗೆ ನಿನ್ನ ಮೇಲಿನ

ಅತ್ಯಾಚಾರಕ್ಕೆ ಕೊನೆಯಿಲ್ಲ

ಗಾಯಗಳು ನರಳುವುದಿಲ್ಲ ನಿನ್ನದು ಗಾಯಗಳ ಹಾಡು

ಶೋಷಣೆಗೆ ಸಾವಿಲ್ಲ |

ಜಗದ ಸಾವಿರ ಸಾವಿರ ಹಸಿದ ಕಣ್ಣುಗಳಲ್ಲಿ

ಅನಾವರಣಗೊಳ್ಳುತ್ತಿ ವಿಶ್ವಸುಂದರಿಯಾಗಿ

ನಡೆಯುತ್ತಿ ಕುಣಿಯುತ್ತಿ ಮಾದಕ ಮೋದಕವಾಗುತ್ತ

ವಿಶ್ವಕಂಪನಿಗಳ ಮಾರ್ಕೆಟ್ಟಿನ ಷೇರುಗಳಾಗಿ ||

ನಿನ್ನ ಒನಪು ವೈಯ್ಯಾರ ವಯಸ್ಸು ಚೆಲುವಿಕೆಯೊಂದಿಗೆ

ಆಧುನಿಕ ಜೀತ ಹುಟ್ಟಿಕೊಂಡಿದೆ

ಐ.ಟಿ, ಬಿ.ಟಿ, ಕಾಲ್‌ಸೆಂಟರ್‌ಗಳ ಪ್ರಪಂಚದಲ್ಲಿ

ನಿನ್ನ ಅಂಗಾಂಗಗಳು ಮಾರಾಟಕ್ಕಿವೆ |

ಜಾಗತೀಕರಣದ ನಾಗರನ ನಾಲಿಗೆಯ ನೆರಳಲ್ಲಿ
ನಮ್ಮ ನಾಗರಿಕತೆಗಳು ಕಾಲು ಚಾಚುತ್ತಿರುವಾಗ
ಪೂರ್ವ ಯಾವುದೋ ಪಶ್ಚಿಮ ಯಾವುದೋ ಅರಿಯದೆ
ಬಿಕರಿಯಾಗುತ್ತಿ ಜಗತ್ತಿನ ಸಂತೆ ಕಟ್ಟೆಯಲ್ಲಿ

ಹಾಡ ಹಾಡುತ್ತಿ ಮಾಫಿಯಾಗಳ ಮೈಮನದ ಸುಳಿಯಲ್ಲಿ
ಮಾನದ ಪರಿಧಿಯನು ದಾಟಿ
ಮೈ ಮರೆಯುತ್ತಿ ಸುಗಂಧ ಸಾಬೂನಿನ ಬುರುಗಿನಲ್ಲಿ
ಕಂಪಿಸುವ ತುಟಿ ಕಟಿಗಳ ಮೀಟಿ ||

ಹೊನಲು-ಬೆಳಕಿನ ವೇದಿಕೆಗಳಲ್ಲಿ ಅನಾವರಣಗೊಳ್ಳುತ್ತಿ
ಸ್ವಚ್ಛಂದ ವೃತ್ತದಲ್ಲಿ ಮಾದಕ ಗೊಂಬೆಯಾಗಿ
ಮೈ ಮಾರುತ್ತಿ ಬೆಚ್ಚಗಿಡುವ ಜಾಹೀರಾತಿನ ಬೆಲೆವೆಣ್ಣುಗಳಾಗಿ
ಕನಸಿಲ್ಲದೆ ನಿದ್ರೆಗೆ ಜಾರುವ ಮೋಹಿನಿಯಾಗಿ



ಜಗದ ಸಾವಿರಾರು ನದಿ-ಸರೋವರಗಳು ಉಕ್ಕಿ ಹರಿದಾವು
ನಿನ್ನ ಕಂಬನಿಯ ಹೊಳೆ ಯಾವ ಲೆಕ್ಕ ?
ಚಂಡ ಮಾರುತಕ್ಕೂ ಜಗ್ಗದ ಬಗ್ಗದ ಆಡಳಿತ,
ವ್ಯವಸ್ಥೆ ನಿನ್ನ ನಿಟ್ಟುಸಿರಿನ ರಭಸಕ್ಕೆ ಜಗೀತೆ |

## ಬಡವನಾದರೂ ಗೆಳತಿ

**- ಶೋಭ ಹರಿಜನ**

ಬಡವನಾದರೂ ಗೆಳತಿ
ಪ್ರೀತಿಯಲಿ ಬಡವನಲ್ಲ
ಗುಡಿಸಲಿದ್ದರೇನು? ಮನದಿ
ಗೋಪುರವಿದೆಯಲ್ಲ

ಮೊಲ್ಲೆ ಮುಡಿಯೊ ಜಾಗದಿ
ಚಂದ್ರನಿರಿಸುವೆ
ಚುಕ್ಕೆ ತಾರೆಯ ಸರವ ಮಾಡಿ
ಕೊರಳಲ್ಲಿ ಹಾಕುವೆ

ಹೃದಯ ಬಡಿತ ಹಿಡಿದು
ಕಾಲ ಗೆಜ್ಜೆ ಮಾಡುವೆ
ನೀ ಹೆಜ್ಜೆ ಇದ್ದೊಡನೆ
ನಾ ಗಲ್ ಎನ್ನುವೆ

ಬಾಳ ದಾರಿಯುದ್ದಕ್ಕೂ
ಪ್ರೀತಿಯ ಹೂವನೆರೆಚುವೆ
ನೋವನೆಲ್ಲ ನಾ ನುಂಗಿ
ನಲಿವು ಮಾತ್ರ ನಿನಗೆ ನೀಡುವೆ

ಕೋಮಲಾಂಗಿಯ ಕರಗಳಿಗೆ
ಬೆಳ್ಳಿ ಝರಿಯ ಕಡಗ ಹಾಕುವೆ
ಹೃದಯ ಮಂದಿರದಿ ಇರಿಸಿ
ಪ್ರೇಮ ಪೂಜೆ ಮಾಡುವೆ

**ದಲಿತರ ಯುಗಾದಿ ಹಾಡು**

**- ಎಂ. ಲಕ್ಷಣ(ಗಂಗಾವತಿ)**

ಯುಗ ಯುಗಗಳು ಕಳೆದರೂ

ಯುಗಾದಿ ಮತ್ತೆ ಬಂದಿದೆ !

ದಲಿತ ಜನರ ದುಡಿತಕೆ

ಕಣ್ಣೀರ ಕಾಣಿಕೆ ತಂದಿದೆ !

ಬಡವರಿಗಿದು ಮುಳ್ಳು ಹಾದಿ

ಶೋಷಣೆಯ ನಾಂದಿ

ಶ್ರೀಮಂತರ ಸುಖದ ಗಾದಿ

ಸೌಭಾಗ್ಯಕೆ ಆದಿ !

ಬೇವುಬೆಲ್ಲ ತಿನುವರೆಲ್ಲ

ಹಬ್ಬ ದೂಟಕೆ !

ಸಾವು ನೋವು | ಬೇವೆ ಬೇವು

ಟಬಡವನೂಟಕೆ !

ಕಣ್ಣೀರೇ ಪನ್ನೀರೋ !

ಬರಿಹೊಟ್ಟೆಯೆ ಭಾಗ್ಯ !

ಶ್ರೀಮಂತರ ದಾಸ್ಯದಲ್ಲೆ

ಕಾಣುವ ಸೌಭಾಗ್ಯ !

ಬಾಳಿನಲ್ಲಿ ಬರಿಗೋಳೇ

ಈ ಬಡವರ ಪಾಲು !

ಸುಕಜೀವನ ಸಿರಿಗಳೆಲ್ಲ

ಶ್ರೀಮಂತರ ಪಾಲು !

ಹಸಿವು ನೋವು ಕೊರತೆ ಚಿಂತೆ-

ಜೀವ ಸುಡುವ ಬೆಂಕಿ !



ಕಡಲು-ಬೆಂಕಿಗಿಂತ ಮಿಗಿಲು

ಬಡವರೊಡಲ ಬೆಂಕಿ !

ವೈಷಮ್ಯದ ಹಾಲಾಹಲ

ಕುಡಿದ ಶಿವರು ಇವರು !

ಬಲಿತ ಜನರೆ, ನೆನಪಿರಲಿ |

ದಲಿತರೆದ್ದು ಬರುವರು !

## ಸತ್ವ ಪರೀಕ್ಷೆ

**ವಿ. ನಾರಾಯಣಸ್ವಾಮಿ**

ದಳ್ಳುರಿಯೊಳಗೆ ಬಿದ್ದು ಬೆಂದಿವೆ
ನ್ಯಾಯ ಧರ್ಮಗಳ ಹೃದಯ
ನಗುವ ಹೂವುಗಳು ಬೆಂಕಿಯ ಝಳದಲ್ಲಿ
ಹುಡುಕಿವೆ ನ್ಯಾಯಕ್ಕೆ ವಿಜಯ

ವಿಷದ ಬೀಜವು ಬಿದ್ದಿತು ಹೇಗೆ
ಮೊಳಕೆಯೊಡೆದರೆ ದ್ವೇಷಾಸೂಯೆ
ಕಿತ್ತೊಗೆಯಿರೆಲ್ಲ ಕೂಡಿ
ನ್ಯಾಯಕ್ಕೆ ವಿಜಯವ ಬೇಡಿ

ಕಾಪಾಡುವುದು ಸತ್ಯತೆಯು
ಎನ್ನುತ ಕುಳಿತರೆ ಸಭ್ಯತೆಯು
ಪ್ರಾಮಾಣಿಕತೆಗೆ ಬೆಲೆಯಿಲ್ಲದೆ
ಸಾಧಿಸಲಾರವು ಕಾರ್ಯವನೆಲ್ಲ

ಎತ್ತ ಸಾಗಿದೆ ಮಾನವೀಯತೆ
ಎಲ್ಲಿದೆಯೋ ಹುಡುಕುವ ಬನ್ನಿ
ನ್ಯಾಯಕ್ಕೆ ನಿಶ್ಚಿತ ಜಯವು
ಮನುಜಗೆ ಸತ್ವ ಪರೀಕ್ಷೆ

## ಕತ್ತಲೆಯೆಂಬ

ಕತ್ತಲೆಯೆಂಬ ಈ ಜಗತ್ತಿನಲ್ಲಿ
ನಾನು ತೊಳಲಾಡುತ್ತಿದ್ದೇನೆ
ಈ ಕತ್ತಲೆಯಲ್ಲಿ ಬೆಳಕು
ಬಾರದಷ್ಟು ಅಂಧಕಾರತ್ವ ತುಂಬಿದೆ

ಈ ನೀಚ ಮನುಷ್ಯನಲ್ಲಿ
ಮಾನವನಲ್ಲಿರುವ ಜಾತಿ ಪಂಗಡ
ಕುಲ, ಗೋತ್ರ ಇವುಗಳಲ್ಲಿ ತುಂಬಿದೆ ಕತ್ತಲೆ
ಮಾನವನ ಈ ಲೋಕದಲಿ
ಸೂರ್ಯ ಚಂದ್ರಾದಿಗಳಿದ್ದರೂ
ಈ ಜಗತ್ತಿನಲ್ಲಿ ಕತ್ತಲೆಯೇ ತುಂಬಿದೆ

ಕತ್ತಲೆ ಓ ಕತ್ತಲೆ
ಭಾನು ಭೂಮಿ ಸೇರಿದರೂ
ಅಳಿಯದ ಈ ಕತ್ತಲೆ
ಗಿಡಮರಗಳು ಬಳ್ಳಿಯಾದರೂ
ಅಳಿಯದ ಈ ಕತ್ತಲೆ
ಓ ಕತ್ತಲೆ
ಕೃತಜ್ಞ ಮಾನವನು ಅರಿಯದ
ಈ ಕತ್ತಲೆ
ಅರಿತರೂ ಹೊಳೆಯದ ಈ
ವಿಚಿತ್ರ ಕತ್ತಲೆ
ಬೆಳಕನ್ನೂ ಅರಿಗೊಡಲು

ಬಿಡದ ಕತ್ತಲೆ

ಬೆಳಕು ಕತ್ತಲೆಗಳೆರಡಿದ್ದರೂ

ಕತ್ತಲೆಯನ್ನೇ ಬಳಸಿಕೊಳ್ಳುವ

ಈ ಮನುಷ್ಯನ ಬೆಳಕೆಂಬ ಕತ್ತಲೆ

ಸೂರ್ಯ ಚಂದ್ರಾದಿ ನಕ್ಷತ್ರಗಳೂ

ವಸತಿಯಲ್ಲಿ ಉರಿಸುವ ದೀಪವಿದ್ದರೂ

ಮಾನವ ಬಣ್ಣ ಬದಲಾಗಿಲ್ಲ



ಕತ್ತಲೆ ಓ ಕತ್ತಲೆ

ಬಣ್ಣಗಳನೇಕ ಬೆಳಕು ಕತ್ತಲೆ

ಎಂಬುದು ಎರಡೇ

ಕತ್ತಲೆ ಎಂಬಲ್ಲಿ ಅಂಧಕಾರತ್ವವಿದೆ

ಬೆಳಕು ಎಂಬಲ್ಲಿ ಅರಿವಿನ ಜ್ಞಾನವಿದೆ

ಕತ್ತಲೆ ಓ ಕತ್ತಲೆ

ಈ ಅಂಧದಲ್ಲಿ ಬೆಳಕಿಲ್ಲ

ಆ ಬೆಳಕಿನಲ್ಲಿ ಕತ್ತಲೆಯಿಲ್ಲ,

ಮಾನವನಲ್ಲಿದೆ ಈ ಕುರುಡು

ಬೆಳಕೆಂಬ ಕುರುಡು

ಕತ್ತಲೆ ಓ ಕತ್ತಲೆ

## ಕತ್ತಲು

**- ಅಭಿಷೇಕ.ವೈ.ಎಸ್**

ನನಗೆ ಗೊತ್ತು

ಈ ಕತ್ತಲ ರಾತ್ರಿಗೆ ಸ್ವಲ್ಪವೂ ಕರುಣೆ ಇಲ್ಲವೆಂದು

ಸುತ್ತಲೂ ಕವಿದ ಕತ್ತಲಲ್ಲಿ ಎಲ್ಲವೂ ಬೆತ್ತಲು

ಬದುಕುವುದಾದರೂ ಹೇಗೆ ಹೇಳಿ ನೀವೆ???

ನನಗೆ ಗೊತ್ತು

ಈ ಕತ್ತಲ ರಾತ್ರಿಗೆ ಕರುಣೆಯ ಕರುಳಿಲ್ಲವೆಂದು

ಅದಕ್ಕೇ ಎಷ್ಟೋ ಅನಾಥ ಹೆಣ್ಣು ಜೀವಗಳನ್ನು

ಬೆತ್ತಲು ನಿಲ್ಲಿಸುತ್ತದೆ

ಮಾಂಸದಂಧೆಗೆ ಸೆರಗು ಹಾಸುತ್ತದೆ

ನನಗೆ ಗೊತ್ತು

ಕತ್ತಲ ರಾತ್ರಿಗೆ ಕರುಣೆಯ ಕರುಳಿಲ್ಲವೆಂದು

ಉಳ್ಳವರನ್ನು ಬೆಚ್ಚಗೆ ಸುಖವಾಗಿ ಮಲಗಿಸಿ

ಬಡವರ ಮೈಯನ್ನು ಥರಥರ ನಡುಗಿಸುತ್ತದೆ

ನನಗೆ ಗೊತ್ತು

ಕತ್ತಲ ರಾತ್ರಿಗೆ ಹೃದಯವೇ ಇಲ್ಲವೆಂದು

ಪ್ರೀತಿಸಿ ಕೈಕೊಟ್ಟವರ ನೆನಪಲ್ಲೆ ಇಡೀ ರಾತ್ರಿ

ಅತ್ತಲಿಂದಿತ್ತಲಿಗೆ ಹೊರಳಾಡಿಸಿ

ಕಣ್ಣೀರ ಗೆಡವುತ್ತದೆ...

ಅದಕ್ಕೇ ನನಗೆ ಕಣ್ಣಿಲ್ಲದ ಕತ್ತಲ ರಾತ್ರಿಯ ಮೇಲೆ

ಒಂದಿಷ್ಟು ಅಸಹನೆ, ಕೋಪ, ಆವೇಶ, ಮತ್ತಷ್ಟು ರೋಷ,

ಆದರೂ ಜೋಪಡಿಯ ಮೂಲೆಯಲ್ಲಿ ಕೂತು ಸಣ್ಣ ಕವಿತೆ ಕಟ್ಟುತ್ತೇನೆ

ನಾಳೆಯಾದರೂ ಬರಬಹುದೆಂದು ಬೆಳಕಿನ ವೇಷ..



## ನನ್ನವ್ವ

**- ಎಚ್.ಪಿ.ಪೂರ್ಣಿಮಾ**

ಎಲ್ಲೆಲ್ಲೋ ತಿರುಗಿ, ಊರೂರ ಸುತ್ತಿ

ನನ್ನವರಿರುವ ಊರನ್ನು ಮರೆತೆ

ಎಲ್ಲೆಲ್ಲೋ ತಿರುಗಿ, ಊರೂರ ಊಟ ಮಾಡಿ

ನನ್ನ ತಾಯಿ ಮಾಡುವ ಜೋಳದ ರೊಟ್ಟಿ ರುಚಿ ಮರೆತೆ

ಎಲ್ಲೆಲ್ಲೋ ತಿರುಗಿ, ಯಾರನ್ನೋ ನನ್ನವರೆಂದೆ

ನನಗಾಗೆ ಬದುಕುತ್ತಿರುವ ನನ್ನವರನ್ನ ಯಾರೆಂದೆ

ಎಲ್ಲೆಲ್ಲೋ ತಿರುಗಿ, ಯಾರಾರೋ ಜೊತೆಗೂಡಿ

ನನ್ನ ಜೊತೆಯಿರುವವರು ನನಗಾಗಿ ಪರದಾಡುತ್ತಿರುವವರೆಂದು ಮರೆತೆ

ಎಲ್ಲೆಲ್ಲೋ ತಿರುಗಿ, ಕೆಟ್ಟ ಚಟಗಳಿಗೆ ಹುಂಗೂಡಿ ಹಣ ಕಳೆದುಕೊಂಡೆ

ನನಗಾಗಿ ಕಣ್ಣೀರಲ್ಲಿ ಕೈ ತೊಳೆಯುತ್ತ ಹಣ ಕೂಡಿಡುತ್ತಿರುವರೆಂದು

ಮರೆತು ಮೆರೆದ

ಹಣವಿಲ್ಲದಾಗ ನನ್ನವರೆಂದು ಕೊಂಡವರು

ನನ್ನನ್ನು ಕಾಲು ಸಮ ಮಾಡಿದರು

ನಾನು ನನ್ನ ಮನೆಗೆ ಹಿಂದಿರುಗಿದೆ ನನ್ನವರ ಕ್ಷಮೆ ಕೇಳಲು

ಎಲ್ಲೆಲ್ಲಿ ತಿರುಗಿದೆ ಏನನ್ನು ಮಾಡಿದೆಯೆಂದು ಕೇಳದೆ

ನಿನ್ನ ಚಿಂತೆಗೆ ನಾನು ಇದ್ದೇನೆಂದು ಕೈ ತುತ್ತುನಿಟ್ಟ ನನ್ನವ್ವ



**ನನ ನೆಂಟ**

**- ವೆಂಕಟರವಣ ಎನ್. ನಾವೆಂಕಿ**

ಇಚ್ಛೆಯಿಲ್ಲ

ಅವನಿಗಿನ್ನು ಈ ಕೊಚ್ಚೆಯಲಿ ಜೀವಿಸಲು

ಅವನ್ಯಾರೆಂಬುದು ತಿಳಿಯದೆ ಕೊಚ್ಚೆಯಲಿ

ಇಷ್ಟು ಕಾಲ ರೊಚ್ಚಾಗಿ

ರೊಚ್ಚಿನ ಕಿಚ್ಚಾಗಿ ಕುಮುಲಿ

ನುಚ್ಚು ನೂರಾಗಿ ನರಳಾಡಿ ಬದುಕಿದ

ಇನ್ನು ಮೂರು ಆರಾದರೂ

ಆರು ನೂರಾದರೂ

ಅವನು ಮಾತ್ರ ಕೊಚ್ಚೆಯತ್ತ

ಕತ್ತೆತ್ತಿಯೂ ನೋಡಲಾರ

ಮುತ್ತು ರತ್ನ ಸಿರಿ ಸಂಪದದ

ಆಶೆ ಅವನಿಗಿಲ್ಲ

ಅವನಿಗದು ಬೇಕೂ ಇಲ್ಲ

ಸ್ವಾಭಿಮಾನವ ಬಿತ್ತಲು

ಕೂರಿಗೆಯಾಗುವ ಗುರಿಕಾರನಾಗುವ

ಕಾತುರದಲ್ಲಿದ್ದಾನೆ -

ಕೆಸರಿನಲಿ ಕಮಲವಿದ್ದರೂ

ಕೆಸರಿಗೆ ಬ್ಯಾಸರಿಕೆ ತಾರದೆ

ತಾನೂ ಕೆಸರಿಗಂಟದೆ

ಅರಳಿ ನಿಂತ ಅಗ್ರ ಸತ್ಯ ತಿಳಿಯದ

ಅಮಾಯಕ ಅವನಲ್ಲ

ಈಗ ಎಲ್ಲವೂ ಸಲ್ಲುವ ಕಾಲವಲ್ಲ -

ಸಲ್ಲಿಸಿಕೊಳ್ಳುವ ಸಂಧಿ ರಾಯಭಾರಕ್ಕೆ

ಮುಕ್ತಾಯ ಹಾಡಿ

ಕೂಡಿ ಬಾಳುವ ಕುಶಾಲು ಆಡುವ

ಕಳೆದು ಹೋದ ಕಾಲವ ಮತಿಗೆ ತಂದುಕೊಳ್ಳುವ

ಅಂದರೆ

ಅದೇ ಆತಂಕ ಅನಾಚಾರ ಹಲ್ಲೆ ಅವಮಾನದ

ಕಿಡಿ ಕಣ್ಣೆದುರಿಗೇ ನಿಲ್ಲುತ್ತದೆ ಕರು ಕಿತ್ತು ಬರುತ್ತದೆ

ಸೂಕ್ಷ್ಮ ಶಸ್ತ್ರಚಿಕಿತ್ಸೆ ಆಗಬೇಕಿದೆ

ನಮ್ಮ ನಮ್ಮ ಇರುವನ್ನು ನಾವು

ಸಾಧಿಸಿ ಬೇಧಿಸಿ ಬದುಕು ಕಟ್ಟಿಕೊಳ್ಳಬೇಕಾದ

ಕಾಲವಿದು ಎಂದೇಳುತ್ತಾನೆ.

ಈ ಕಳ್ಳುಬಳ್ಳಿಯ ನನ ನೆಂಟ..

## ಸರಿಯೇನು?

**ಏ. ರಾಘವೇಂದ್ರ**

ಒಬ್ಬನೇ ರವಿ ಒಬ್ಬನೇ ಶಶಿ

ವಾಯು ಜಲ ಬೆಳಕು ಒಂದೇಯಾದರೂ

ಅವುಗಳಡಿಯಲಿ ಇರುವ ನಮ್ಮಲ್ಲಿ

ನೂರು ಅಂತರ ಸರಿಯೇನು?

ನೂರಾರು ನದಿಗಳಿದ್ದರು

ಸೇರುವ ಅಬ್ಜಿ ಒಂದೇ ತಾನೇ

ನೂರಾರು ಹೂ ಬಿಡುವ ಲತೆಗೆ

ಮೂಲ ನೆಲ ಒಂದೇ ತಾನೇ

ನಮ್ಮಲ್ಲಿ ಅಂತರ ಸರಿಯೇನು?

ಅವನಿಯಲಿ ಕೋಟಿ ಮನುಕುಲವಿದ್ದರು

ನಾಡಿನಲಿ ಪ್ರವಹಿಸುವ ನೆತ್ತರು ಕೆಂಪಲ್ಲವೆ

ಎರಡು ನಯನಗಳಿದ್ದರು

ದೃಷ್ಟಿ ಸಂಕೇತ ಒಂದೇಯಲ್ಲವೇ

ನಮ್ಮಲಿ ಅಂತರ ಸರಿಯೇನು?

## ಕು.

**- ಸೋಸಲೆ ಗಂಗಾಧರ**

ನನ್ನ ತಟ್ಟೆಯಲ್ಲಿ ತಿಂದುಂಡು
ಬದುಕು ಕಟ್ಟಿಕೊಂಡ ನೀನು
ನನ್ನ ಹೊಟ್ಟೆಗೂ ಕೈ ಹಾಕಿರುವೆ.
ಹುತ್ತಗಳ ಮುಗಿಲೆತ್ತರಕ್ಕೆ ಏರಿಸುತ್ತಿರುವೆ.

ಅವು ಮಳೆಗರೆಯುವವೆ?
ವಸಂತಗಳ ತರುವವೇ?
ನನ್ನಸಿರ ನೆಕ್ಕಿ ನೊಣೆಯುತ್ತಿರುವ
ನಿನ್ನ ಧೈರ್ಯಕ್ಕೆ ಒಮ್ಮೊಮ್ಮೆ ನಗುತ್ತೇನೆ.

ಬಿದ್ದರೆ ಅಮ್ಮಾ ಎನ್ನುತ್ತೀಯ!
ಮೈತುಂಬ ಗಡಿಗಳ ಬರೆ ಎಳೆದು
ಕಾದಾಡುತ್ತೀಯಾ,
ಅಮ್ಮ ಒಬ್ಬಳೇ ಅನಿಸುತ್ತಿಲ್ಲವೇಕೆ?

ನಿನ್ನ ಜ್ಞಾನ ವಿಜ್ಞಾನವಾಗಿ
ಅದು ಅಜ್ಞಾನದೆಡೆ ಸಾಗಿದೆ.
ನೀ ಅಳಿದ ಮೇಲೆ ಮತ್ತೊಮ್ಮೆ
ನಾ ಗರ್ಭಧರಿಸಿ ಬುದ್ಧನನ್ನೇ ಹೆರುತ್ತೇನೆ.

## ಅಂತರಾಳ

**- ಕೆ.ನರಸಿಂಹಪ್ಪ ಮೂಡಲಗೊಲ್ಲಹಳ್ಳಿ**

ಬಿಸಿಲ ಉರಿಬಾಯಲ್ಲಿ

ಬಾಡಿದ ಗಿಡಕೊಂದು

ಬೊಗಸೆ ನೀರೆರೆದು

ತಂಪಿಳಿದ ಮುಂಜಾನೆ ನೋಡಲು

ನಳನಳಿಸುತ್ತ ಎಲೆ ಮರೆಯಿಂದ ಇಣುಕಿ

ನೋಡಿದ ಮೊಗ್ಗೆ ನಗೆಮೊಗದಲ್ಲಿ

ಕುಶಲವೇ ಎಂದಿತು.

೨

ಕೊಳಚೆ ಹತ್ತಿದ ಕಲ್ಯಾಣಿ

ತೊಳೆದು ಮಾಡಲು ಪಾಕು

ಸುರಿದ ಮಳೆ; ತುಂಬಿದ ನೀರು

ನೆಲಕಿಳಿದು ಯಾವ ಬಾವಿಗಳ ದಾವರವ

ತೀರಿಸಿತ್ತು; ಅಂತೆ ಶಿವಲಿಂಗ ಮುಡಿ ತೊಳೆದು

ತೀರ್ಥವಾಗಿತ್ತು.

೩

ಯಾರೋ ಸಾಕದೆ ತೊರೆದ ನಾಯಿ

ಅನ್ನದ ವಾಸನೆ ಹಿಡಿದು ಊಟದ ಹೊತ್ತು

ಮನೆಬಾಗಿಲಲಿ ನಿಂತಾಗ

ಕೊಟ್ಟ ತುತ್ತಿಗೆ ಕುಣಿದು

ಊರ ರಚ್ಚೆಯ ಅರಳಿ ನೆರಳಲ್ಲಿ

ಮಲಗಿ ಕನಸಿಗೆ ಜಾರಿತ್ತು.

ಒಂದು ದಿನ ಒಂಟಿ ದಾರಿ ನಡೆವಾಗ ಆಕಸ್ಮಿಕ

ಕಂಡದ್ದೆ ಓಡೋಡಿ ಬಂದು ಕಾಲು ಮೂಸಿ

ಬಂಧುವನು ಕಂಡಂತೆ ಕುಂಯ್‌ಗುಟ್ಟಿತು.



೪

ಮನೆಯ ಸೂರಿಗೆ ಬಂದ ಗುಬ್ಬಿ

ಗೂಡು ಕಟ್ಟಲೇ ಎಂದು ನನ್ನತ್ತ ನೋಡಿ,

ಕಟ್ಟಿಕೊಂಡಿತು ಗೂಡು

ಮೌನ ಸಮ್ಮತಿಯೆಂದು.

ಮುಂಜಾನೆ ಮನೆಯಿಂದ ಹೊರಟಾಗ ಹೊರಗೆ

ಅದರದೇ ನುಡಿಯಲ್ಲಿ ಹೇಳುತಿತ್ತು

ಹೋಗಿಬಾ ಕ್ಷೇಮ.

ಸಂಜೆ ಬೆಳಗಿನದೆ ಕೊರಳು

ಲಾಭವಾಯಿತೇ ಹೋದದ್ದು?

೫

ಬಿಸಿಲ ನಡುಹಗಲು ಹೊಲದ ಬದು

ಹೊಂಗೆ ಮರದಡಿ ಬುತ್ತಿ ಬಿಚ್ಚುತ್ತಿರುವಾಗ ಹಸಿದ

ದಾರಿಹೋಕನ ಕರೆದು ಇಕ್ಕಿದೆ ಅನ್ನ.

ಉಂಡು ನೀರು ಕುಡಿದು ದಣಿವಳಿದು

ಹೊರಟವನು ಕೇಳಿದ;

ಅನ್ನದ ನೆವದಲ್ಲಿ ಕೆಡಿಸಿಲ್ಲವಷ್ಟೆ ಜಾತಿ?

## ಸೂರ್ಯ ಹುಟ್ಟಿದ ನಾಡು

**- ಈಶ್ವರ ಕಣ್ಣಮನಿ**

ಬುದ್ಧ ಹುಟ್ಟಿದ ನಾಡಿನಲ್ಲಿ
ನಾನೇಕೆ ಹುಟ್ಟಲಿ ಎಂದನಂತೆ ಸೂರ್ಯ
ಬಸವ ಹುಟ್ಟಿದ ನಾಡಿನಲ್ಲಿ
ನನ್ನದೇನು ಕೆಲಸವೆಂದನಂತೆ ಸೂರ್ಯ
ಭೀಮ ಹುಟ್ಟಿದ ನಾಡಿನಲ್ಲಿ
ನಾನೇಕೆ ಬೆಳಗಲಿ ಎಂದನಂತೆ ಸೂರ್ಯ
ಅದಕ್ಕಾಗಿ ಈ ನಾಡಿನಲ್ಲಿ ಸೂರ್ಯ
ಹುಟ್ಟಲಿಲ್ಲ ಎಂದು ಕೊಂಡಿದ್ದೆ ನಾನು ಆದರೆ,
ಸೂರ್ಯ ನನಗೆ ಹೇಳಿದ
ಅಯ್ಯೋ ಪೆದ್ದ
ಬುದ್ಧ, ಬಸವ, ಭೀಮರನು
ನುಂಗಿ ನೊಣೆದ ಈ ನಾಡಿನಲ್ಲಿ
ಜಗವ ಬೆಳಗುವ ನಾನೇನಾದರೂ
ಹುಟ್ಟಿದರೆ ನನ್ನನ್ನೆ
ನುಂಗಿ ನೀರು ಕುಡಿಯುವ
ಪುಣ್ಯಾತ್ಮರು ಇದ್ದಾರೆಂಬ
ಭಯದಿಂದ ನಾನು ಹುಟ್ಟಲಾರೆ
ಎಂದ!

# ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

## ಕಾರ್ಯಕಾರಿ ಸಮಿತಿ

ನಾಡೋಜ ಡಾ. ಮನು ಬಳಿಗಾರ್, ಅಧ್ಯಕ್ಷರು

ಡಾ. ರಾಜಶೇಖರ ಹತಗುಂದಿ, ಗೌರವ ಕಾರ್ಯದರ್ಶಿ ಶ್ರೀಪಿ. ಮಲ್ಲಿಕಾರ್ಜುನಪ್ಪ, ಗೌರವ ಕೋಶಾಧ್ಯಕ್ಷರು ಶ್ರೀ ವ.ಚ. ಚನ್ನೇಗೌಡ, ಗೌರವ ಕಾರ್ಯದರ್ಶಿ

ಶ್ರೀ ಮಾಯಣ್ಣ, ಬೆಂಗಳೂರು ನಗರ

ಶ್ರೀ ಚಿ.ಮಾ.ಸುಧಾಕರ, ಬೆಂ. ಗ್ರಾಮಾಂತರ

ಶ್ರೀ ಸಿಂ.ಲಿಂ. ನಾಗರಾಜ್, ರಾಮನಗರ

ಶ್ರೀ ನಾಗಾನಂದ ಕೆಂಪರಾಜ್, ಕೋಲಾರ

ಶ್ರೀ ಕೈವಾರ ಎನ್. ಶ್ರೀನಿವಾಸ, ಚಿಕ್ಕಬಳ್ಳಾಪುರ

ಶ್ರೀಮತಿ ಬಾ.ಹ. ರಮಾಕುಮಾರಿ, ತುಮಕೂರು

ಡಾ. ದೊಡ್ಡಮಲ್ಲಯ್ಯ, ಚಿತ್ರದುರ್ಗ

ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ, ದಾವಣಗೆರೆ

ಶ್ರೀ ಡಿ.ಬಿ. ಶಂಕರಪ್ಪ, ಶಿವಮೊಗ್ಗ

ಡಾ. ವೈ.ಡಿ. ರಾಜಣ್ಣ, ಮೈಸೂರು

ಶ್ರೀ ಬಿ.ಎಸ್. ವಿನಯ್, ಚಾಮರಾಜನಗರ

ಶ್ರೀ ಸಿ.ಕೆ. ರವಿಕುಮಾರ ಚಾಮಲಾಪುರ, ಮಂಡ್ಯ

ಶ್ರೀ ನಾಯಕರಹಳ್ಳಿ ಮಂಜೇಗೌಡ, ಹಾಸನ

ಶ್ರೀ ಬಿ.ಎಸ್. ಲೋಕೇಶ ಸಾಗರ್, ಕೊಡಗು

ಶ್ರೀ ಕುಂದೂರು ಅಶೋಕ, ಚಿಕ್ಕಮಗಳೂರು

ಶ್ರೀ ನೀಲಾವರ ಸುರೇಂದ್ರ ಅಡಿಗ, ಉಡುಪಿ

ಶ್ರೀ ಎಸ್.ಪ್ರದೀಪಕುಮಾರ ಕಲ್ಕೂರ, ದಕ್ಷಿಣ ಕನ್ನಡ

ಶ್ರೀಮತಿ ಮಂಗಲಾ ಶ್ರೀಶೈಲ್ ಮೆಟಗುಡ್ಡ, ಬೆಳಗಾವಿ

ಶ್ರೀ ಮಲ್ಲಿಕಾರ್ಜುನ ಅಯ್ಯಪ್ಪ ಯಂಡಿಗೇರಿ, ವಿಜಯಪುರ

ಶ್ರೀ ಶ್ರೀಶೈಲ ಈರಪ್ಪ ಕರಿಶಂಕರಿ, ಬಾಗಲಕೋಟೆ

ಡಾ. ಲಿಂಗರಾಜ ರು. ಅಂಗಡಿ, ಧಾರವಾಡ

ಶ್ರೀ ಲಿಂಗಯ್ಯ ಬಿ. ಹಿರೇಮಠ, ಹಾವೇರಿ

ಶ್ರೀ ಶರಣು ಗೋಗೇರಿ, ಗದಗ

ಶ್ರೀ ಅರವಿಂದ ಕರ್ಕಿಕೋಡಿ, ಉತ್ತರ ಕನ್ನಡ

ಶ್ರೀ ವೀರಭದ್ರ ಸಿಂಪಿ, ಕಲಬುರಗಿ

ಶ್ರೀ ಸಿದ್ಧಪ್ಪ ಎಸ್. ಹೊಟ್ಟಿ, ಯಾದಗಿರಿ

ಶ್ರೀ ಸುರೇಶ ಚನಶೆಟ್ಟಿ, ಬೀದರ್

ಡಾ.ಬಸವಪ್ರಭು ಪಾಟೀಲ ಬೆಟ್ಟದೂರು, ರಾಯಚೂರು

ಶ್ರೀ ರಾಜಶೇಖರ ಗು. ಅಂಗಡಿ, ಕೊಪ್ಪಳ

ಶ್ರೀ ಸಿದ್ಧರಾಮ ಕಲ್ಮಠ, ಬಳ್ಳಾರಿ

ಶ್ರೀ ಬಸವರಾಜ ಸಿದ್ರಾಮಪ್ಪ ಮಸೂತಿ, ಮಹಾರಾಷ್ಟ್ರ

ಶ್ರೀ ಎಚ್.ಬಿ. ಶಿವಕುಮಾರ್, ಆಂಧ್ರ ಪ್ರದೇಶ

ಡಾ. ತಮಿಳ್ ಸೆಲ್ವಿ, ತಮಿಳುನಾಡು

ಶ್ರೀ ಸುಬ್ರಹ್ಮಣ್ಯ ವಿ.ಭಟ್, ಕೇರಳ

ಶ್ರೀ ಮಲ್ಲಿಕಾರ್ಜುನ ಬದಾಮಿ, ಗೋವಾ

ಲಳನೆಯ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು

ಡಾ. ಚಂದ್ರಶೇಖರ ಕಂಬಾರ

ವಿಶ್ವವಿದ್ಯಾಲಯ ಪ್ರತಿನಿಧಿ, ತುಮಕೂರು ವಿ.ವಿ

ಡಾ. ಗೀತಾ ವಸಂತ

ವಿಶ್ವವಿದ್ಯಾಲಯ ಪ್ರತಿನಿಧಿ, ತುಮಕೂರು ವಿ.ವಿ

ಡಾ. ರಮೇಶ ಲಂಡನಕರ

ಸರ್ಕಾರದ ಪ್ರತಿನಿಧಿ :

ಡಾ. ವಸುಂಧರಾ ಭೂಪತಿ ಮತ್ತು

ಡಾ. ಎಸ್.ಪಿ. ಉಮಾದೇವಿ

ಪರಿಶಿಷ್ಟ ಜಾತಿ ಪ್ರತಿನಿಧಿಗಳು

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ ಮತ್ತು


ಶ್ರೀ ಪಿ.ಎ. ಮೇಘಣ್ಣನವರ

ಪರಿಶಿಷ್ಟ ಪಂಗಡ ಪ್ರತಿನಿಧಿ

ಡಾ. ನೀಲಗಿರಿ ತಳವಾರ

ಸಂಘಸಂಸ್ಥೆಗಳ ಪ್ರತಿನಿಧಿ :

ಶ್ರೀ ಶೇಖರಗೌಡ ಮಾಲಿಪಾಟೀಲ



ನೂರೈದು ವರ್ಷಗಳ ಭವ್ಯ ಇತಿಹಾಸದ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಅವಧಿಯುದ್ದಕ್ಕೂ ಅನೇಕ ಮೈಲಿಗಲ್ಲುಗಳನ್ನು ದಾಟಿದೆ ಮತ್ತು ನೆಟ್ಟಿದೆ. ಪ್ರಸ್ತುತ ಪ್ರಕಟವಾಗುತ್ತಿರುವ ದಲಿತ ಸಾಹಿತ್ಯ ಸಂಪುಟಗಳು ಅಂಥ ಇನ್ನೊಂದು ಮಹತ್ವದ ಹಾಗೂ ಐತಿಹಾಸಿಕ ಎನಿಸುವಂಥ ಮೈಲಿಗಲ್ಲು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ನವೋದಯ, ನವ್ಯ ಘಟ್ಟಗಳ ಹಾಗೆಯೇ ೧೯೭೦-೮೦ರ ದಶಕದಲ್ಲಿ ಆರಂಭವಾದ ಬಂಡಾಯ ಹಾಗೂ ದಲಿತ ಪಂಥಗಳೂ ಅತ್ಯಂತ ಪ್ರಮುಖ ಘಟ್ಟಗಳು. ಬಂಡಾಯ ಹಾಗೂ ದಲಿತ ಪಂಥಗಳ ಕಾಲದಲ್ಲಿ ಕನ್ನಡದಲ್ಲಿ ಅನೇಕ ಮಹತ್ವದ ಕೃತಿಗಳು ಪ್ರಕಟವಾಗಿವೆ. ಆದರೆ, ಪ್ರಾತಿನಿಧಿಕ ದಲಿತ ಬರವಣಿಗೆಗಳನ್ನು ಒಳಗೊಂಡ ಸಂಪುಟಗಳು ಇದುವರೆಗೆ ಬಂದಿರಲಿಲ್ಲ. ಈಗ ನಿಮ್ಮ ಕೈಯಲ್ಲಿ ಆ ಸಂಪುಟಗಳು ಇವೆ. ಇವು ಕನ್ನಡದ ದಲಿತ ಲೋಕವನ್ನು, ಸಂವೇದನೆಯನ್ನು ಅರ್ಥ ಮಾಡಿಕೊಳ್ಳಲು ನೆರವಾದರೆ ಪರಿಷತ್ತು ಕೃತಾರ್ಥ. ನನ್ನ ಕಾಲದಲ್ಲಿ ಇದೆಲ್ಲ ಆಯಿತು ಎಂಬುದು ನನ್ನ ಹೆಮ್ಮೆ.

**ನಾಡೋಜ ಡಾ. ಮನು ಬಳಿಗಾರ್**
ಅಧ್ಯಕ್ಷರು

ರೂ.೩೦೦/-

**ಕನ್ನಡ ಸಾಹಿತ್ಯ ಪರಿಷತ್ತು**
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು - ೫೬೦ ೦೧೮.